ಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಉತ್ತರದಲ್ಲಿಹೇಳಿದ್ದಾರೆ ಇನ್ನು 20 ಎಂ. ಜಿ. ಸಿ. ನೀರು ಬರಬೇಕೆಂದು. ಸುಮಾರು ಎರಡು ಮೂರು ದಿವಸಗಳಿಂದ ಕುಡಿಯುವ ನೀರು ಇಲ್ಲದೆ ಜನರು ಬಹಳ ತೊಂದರೆ ಪಡುತ್ತಿದ್ದಾರೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಈಗಾಗಲೇ ಸದನದಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಈ ವಿಷಯ ಈ ಸದನದಲ್ಲಿ ಚರ್ಚೆಯಾಗಿದೆ. ಅಲ್ಲಿಗೆ ತಕ್ಕಂಥ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ನಾನು ಕೂಡ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ದಿನಾಂಕ 3-3-83ರಿಂದ ಭೂನ್ಯಾಯ ಮಂಡಲಿಗಳ ಖಾಸಗಿ ಸದಸ್ಯರನ್ನು ರದ್ದು ಮಾಡಿರುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಭೂನ್ಯಾಯ ಮಂಡಲಿಗಳನ್ನು ರದ್ದು ಮಾಡಿರುವುದರಿಂದ ಅಲ್ಲಿನ ಸಿಬ್ಬಂದಿ ವರ್ಗಕ್ಕೆ ಮತ್ತು ತಹಸೀಲ್ದಾರ್‌ರವರಿಗೆ ಕೆಲಸವಿಲ್ಲದಂತಾಗಿದೆ. ಸುಮಾರು ಜನ ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ಮತ್ತು ಹೈಕೋರ್ಟಿನಿಂದ ಕೂಡಾ ಬೇಕಾದಷ್ಟು ಕೇಸ್‌ಗಳು ಪುನಃ ರಿಮ್ಯಾಂಡ್ ಆಗುತ್ತಿವೆ. ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡುವ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ತಾವು ಅವಕಾಶ ಮಾಡಿಕೊಡಬೇಕೆಂದು ನಾನುವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಫಾರಂ ನಂಬರು 2(ಎ)ಪ್ರಕಾರ ಹಾಕಿರತಕ್ಕಂಥ ಕೇಸ್‌ಗಳು ಕೂಡ ಸಾಕಾದಷ್ಟು ಪೆಂಡಿಂಗ್ ಇವೆ. ಆದ್ದರಿಂದ ಆದಷ್ಟು ಬೇಗ ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ.

ಉಪಾಧ್ಯಕ್ಷರು.—ನಾನು ಪರಿಶೀಲನೆ ಮಾಡಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ ನಾನು ಸುಮಾರು 15 ದಿವಸಗಳ ಹಿಂದೆ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಸಂಬಂಧಪಟ್ಟ ಹಾಗೆ ಒಂದು ನೋಟೀಸ್ ಕೊಟ್ಟಿದ್ದೆ. ಆದರೆ ಇದುವರೆಗೂ ಸರ್ಕಾರ ಅದಕ್ಕೆ ಉತ್ತರ ಕೊಟ್ಟಿಲ್ಲ. ಸರ್ಕಾರದವರು ಒಂದು ಇಲ್ಲೀಗಲ್ ಆರ್ಡರನ್ನು ಹೊರಡಿಸಿದ್ದಾರೆ. ಅಲ್ಲಿ ಫ್ಯಾಕ್ಟರಿ ಲಾಕೌಟ್ ಆಗಿದೆ. ಆದ್ದರಿಂದ ತಾವು ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ನಾನು ಪರಿಶೀಲನೆ ಮಾಡಿ ತಮಗೂ ಅವಕಾಶ ಮಾಡಿಕೊಡುತ್ತೇನೆ. ದಿನಾಂಕ 31-3-83ರಂದು ಈ ಬರಗಾಲ ಮತ್ತು ನೀರಿನ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಒಂದು ಕಾಲಮಿತಿ ಹಾಕಿಕೊಂಡಿದ್ದೇವೆ. ಆ ದಿವಸ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ ದಾವಣಗೆರೆಯ ರೆಗ್ಯೂಲೇಟೆಡ್ ಮಾರ್ಕೇಟಿಗೆ ಬರುವ ರಸ್ತೆಯಲ್ಲಿರುವಂಥ ರೈಲ್ವೆ ಗೇಟ್‌ನ್ನು ಮುಚ್ಚಿದ್ದಾರೆ. ಈ ಗೇಟ್ ಮುಚ್ಚಿರುವುದರಿಂದ ರೈತರು ರೆಗ್ಯೂಲೇಟೆಡ್ ಮಾರ್ಕೆಟ್‌ಗೆ ಬರುವುದಕ್ಕೆ ಬಹಳ ತೊಂದರೆಯಾಗುತ್ತದೆ. ಈ ರೈಲ್ವೆ ಗೇಟ್‌ನ್ನು ತೆಗೆಸಬೇಕೆಂದು ನಾನು 1979ನೇ ಇಸವಿಯಿಂದ ಕೂಡ ಹೇಳುತ್ತಾ ಬಂದಿದ್ದೇನೆ. ಆದರೂ ಕೂಡ ಆ ಕೆಲಸವನ್ನು ಅವರು ಮಾಡಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆ ರೈಲ್ವೆ ಗೇಟ್‌ನ್ನು ತೆಗೆಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಒಂದು ವೇಳೆ ಆ ಗೇಟ್‌ನ್ನು ಓಪನ್ ಮಾಡದಿದ್ದರೆ ಅಲ್ಲಿನ ರೈತರು ಮತ್ತು ವ್ಯಾಪಾರಸ್ಥರು ಚಳುವಳಿಯನ್ನು ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ. ಅವರು ಚಳುವಳಿಯನ್ನು ಮಾಡುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ವಿಷಯವನ್ನು ತಿಳಿಸಿದ್ದಾರೆ. ಆದ್ದರಿಂದ ಆ ರೈಲ್ವೆ ಗೇಟ್‌ನ್ನು ತಾವು ಓಪನ್ ಮಾಡಿಸಿದರೆ ಒಳ್ಳೆಯದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ತಾವು ನನ್ನ ಕೊಠಡಿಗೆ ಬಂದು ನೋಡಿ. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

## ವಿತ್ತೀಯ ಕಾರ್ಯಕಲಾಪಗಳು

## 1982-83ರ ಆರ್ಥಿಕ ವರ್ಷದಲ್ಲಿ ಪೂರಕ ಬೇಡಿಕೆಗಳು (ಎರಡನೆಯ ಹಾಗೂ ಅಂತಿಮ ಕಂತು)

Sri A. Lakshmi Sagar —(Minister for Law and Parlimentary Affairs) Sir On behalf of the Chief Minister, on the........ :—

ಶ್ರೀ ಜಿ. ನಾರಾಯಣಕುಮಾರ್.—ಕನ್ನಡದಲ್ಲಿ ಓದಿ, ಕನ್ನಡ ಆಡಳಿತ ಭಾಷೆಯಾಗಿದೆ. ನಮಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು.—ಕನ್ನಡದಲ್ಲೂ ಹೇಳಬಹುದು, ಇಂಗ್ಲೀಷ್‌ನಲ್ಲೂ ಹೇಳಬಹುದು.

ಶ್ರೀ ಜಿ. ನಾರಾಯಣಕುಮಾರ್.—ಇಲ್ಲದಿದ್ದರೆ ಕನ್ನಡದಲ್ಲಿ ತರ್ಜುಮೆ ಮಾಡಲಿಕ್ಕೆ ಯಾರನ್ನಾದರೂ ನೇಮಿಸಬೇಕು.

ಉಪಾಧ್ಯಕ್ಷರು.—ಸಭೆಯ ಕಾರ್ಯಕಲಾಪಗಳಿಗೆ ದಯವಿಟ್ಟು ಅಡ್ಡಿ ಮಾಡಬೇಡಿ.

ಶ್ರೀ ಪಂಪಾಪತಿ.—ಸ್ವಾಮಿ, ಕನ್ನಡದಲ್ಲಿಯೇ ಬೇಡಿಕೆಯನ್ನು ಏಕೆ ಓದಬಾರದು ?

ಉಪಾಧ್ಯಕ್ಷರು.—ಬರೇ ಬಾಯಿಯಿಂದ ಹೇಳಬಾರದು. ಅದು ಹೃದಯದಿಂದ ಬರಬೇಕು. ಕನ್ನಡದಲ್ಲೇ ಅವರು ಓದುತ್ತಾರೆ ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ. ಕನ್ನಡದಲ್ಲೇ ಹೇಳುತ್ತೇನೆ. ರಾಜ್ಯಪಾಲರ ಶಿಫಾರಸ್ಸಿನ ಮೇಲೆ ಈ ಕೆಳಗಿನ ಪ್ರಸ್ತಾವಗಳನ್ನು ಮಂಡಿಸುತ್ತಿದ್ದೇನೆ.

1) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಕೃಷಿಗೆ" ಸಂಬಂಧಿಸಿದ (ತೋಟಗಾರಿಕೆ ಮತ್ತು ಕ್ಷಾಮ ಪೀಡಿತ ಪ್ರದೇಶಗಳ ಕಾರ್ಯಕ್ರಮವನ್ನು ಹೊರತು ಪಡಿಸಿ) ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವುದರಿಂದ ರಾಜಸ್ವ ಲೆಕ್ಕದಲ್ಲಿ 1,11,19,000 ರೂಪಾಯಿಗಳಿಗೆ ಮೀರದ ಮತ್ತು ಬಂಡವಾಳ ಲೆಕ್ಕದಲ್ಲಿ 25,00,000 ರೂಪಾಯಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

2) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ತೋಟಗಾರಿಕೆ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 30,25,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

3) 1983ರ ಮಾರ್ಚ್ ಅಂತ್ಯದೊಳಗಾಗಿ "ಭೂಸಾರ ಮತ್ತು ನೀರು ಸಂರಕ್ಷಣೆಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 41,69,000 ರೂಪಾಯಿಗಳಿಗೆ ಮೀರದ ಮತ್ತು ಬಂಡವಾಳ ಲೆಕ್ಕದಲ್ಲಿ 52.31.000 ರೂಪಾಯಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

4) 1983ರ ಮಾರ್ಚ್ ಅಂತ್ಯದೊಳಗಾಗಿ "ಪಶುಸಂಗೋಪನೆ ಮತ್ತು ಡೇರಿ ಅಭಿವೃದ್ಧಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 50,00,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 50,00.000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

5) 1983ರ ಮಾರ್ಚ್ 31ರ ಅಂತ್ಯದೊಳಗಾಗಿ ಕೈಗಾರಿಕೆಗಳಿಗೆ ಸಂಬಂಧಿಸಿದ (ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ರೇಷ್ಮೆ ವ್ಯವಸಾಯವನ್ನು ಹೊರತುಪಡಿಸಿ) ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವುದರಿಂದ ರಾಜಸ್ವ ಲೆಕ್ಕದಲ್ಲಿ 84,00,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 7,47,32,100 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

6) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,40,36,000 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 52,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

7) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ರೇಷ್ಮೆ ವ್ಯವಸಾಯ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,74,84,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾದಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

8) 1933ರ ಮಾರ್ಚ್ ಅಂತ್ಯದೊಳಗಾಗಿ "ಉಚ್ಚ ಶಿಕ್ಷಣ"ಕ್ಕಾಗಿ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವುದರಿಂದ ರಾಜಸ್ವ ಲೆಕ್ಕದಲ್ಲಿ 3,77,01,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

9) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಯುವಜನ ಸೇವೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 27,45.000 ರೂಪಂಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

10) 1983ರ ಮಾರ್ಚ್ ಅಂತ್ಯದೊಳಗಾಗಿ "ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯವಹಾರಗಳಿಗೆ ಮತ್ತು ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ" ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

11) 1983ರ ಮಾರ್ಚ್ ಅಂತ್ಯದೊಳಗೆ "ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ"ಕ್ಕಾಗಿ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 7,23,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

12) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ವಿಶ್ರಾಂತಿ ವೇತನ ಮತ್ತು ಇತರ

ನಿವೃತ್ತಿ ಸಂಬಂಧವಾದ ಪ್ರಯೋಜನಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವುದರಿಂದ ರಾಜಸ್ವ ಲೆಕ್ಕದಲ್ಲಿ 19,38,02,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

13) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಾಮಾಜಿಕ ಭದ್ರತಾ ಯೋಜನೆಯ ಮೇರೆಗಿನ ವಿಮೆ ಮತ್ತು ವಿಶ್ರಾಂತಿ ವೇತನ"ಕ್ಕಾಗಿ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,55,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

14) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಪ್ರವಾಸೋದ್ಯಮ ಮತ್ತು ಸಂಕೀರ್ಣ ಸಾಮಾನ್ಯ ಸೇವೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 50,44,500 ರೂಪಾಯಿ ಮತ್ತು ಬಂಡವಾಳ ಲೆಕ್ಕದಲ್ಲಿ 58,33,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

15) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಆಹಾರ ಮತ್ತು ನಾಗರೀಕ ಸರಬರಾಜಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,50,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

16) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಅರಣ್ಯ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 53,42,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

17) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ವಾಹನಗಳ ಮೇಲಣ ತೆರಿಗೆಗಳು" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12,49,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

18) 1980ರ ಮಾರ್ಚ್ 31ರ ಅಂತ್ಯದೊಳಗಾಗಿ "ಬಂಧಿ ಖಾನೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 10,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

19) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ವಾರ್ತಾ ಮತ್ತು ಪ್ರಸಾರ"ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 16,02,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

20) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ರಸ್ತೆ ಸಾರಿಗೆ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 3,35,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

21) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಜನಾರೋಗ್ಯ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

22) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಗೃಹ ನಿರ್ಮಾಣ"(ಸರ್ಕಾರದ ವಾಸದ ಕಟ್ಟಡಗಳನ್ನು ಹೊರತುಪಡಿಸಿ) ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 90-00,000 ರೂಪಾಯಿ ಹಾಗೂ ಬಂಡವಾಳ ಲೆಕ್ಕದಲ್ಲಿ 1,87,45,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

23) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ನಗರಾಭಿವೃದ್ಧಿ ಮುಂತಾದುವು"ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 53,00,000 ರೂಪಾಯಿ ಹಾಗೂ ಬಂಡವಾಳ ಲೆಕ್ಕದಲ್ಲಿ 2,10,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

24) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಂಚಾಯಿತಿಗಳಿಗೆ ಅನುದಾನ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 85,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

25) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಸಣ್ಣ ನೀರಾವರಿ"ಗೆ ಸಂಬಂಧಿಸಿದ ವೆಚ್ಚಗಳ

ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,35,00,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 2,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

26) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ನೀರಾವರಿ, ನೌಕಾಯಾನ, ಒಳಚರಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 79,97,000 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 6,34,36,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

27) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ರಾಜ್ಯ ವಿಧಾನ ಮಂಡಲಕ್ಕೆ" ಸಂಬಂಧಿಸಿದಂತೆ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

28) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಚುನಾವಣೆಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 50,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

29) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,09,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

30) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಜಿಲ್ಲಾಡಳಿತ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 14,32,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

31) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಮುಖ್ಯ ಮಂತ್ರಿಯವರ ಸಂಕೀರ್ಣ ಬೇಡಿಕೆ" ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 83,50,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

32) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಪ್ರದೇಶಾಭಿವೃದ್ಧಿ ಮತ್ತು ಯೋಜನಾ ಇಲಾಖೆಯ ಇತರ ಬಾಬುಗಳ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,92,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

33) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ಲೋಕೋಪಯೋಗಿ ಕಾಮಗಾರಿಗಳು" (ಕಟ್ಟಡ ನಿರ್ಮಾಣ ಬಿಟ್ಟು) ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 13,74,02,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

34) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಕಟ್ಟಡಗಳು"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,99,00,000 ರೂ.ಗಳ ಮತ್ತು ಬಂಡವಾಳ ಲೆಕ್ಕದಲ್ಲಿ 40,22,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

35) 1983 ಮಾರ್ಚ್ 31ರ ಅಂತ್ಯದೊಳಗಾಗಿ "ರಸ್ತೆಗಳು ಮತ್ತು ಸೇತುವೆಗಳು"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3,80,48,000 ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 4,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

36) 1983 ಮಾರ್ಚ್ 31ರ ಅಂತ್ಯದೊಳಗಾಗಿ ರೇವುಗಳು ಮತ್ತು ಜಲಸಾರಿಗೆ ಸೇವೆಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 14,00,000 ರೂಪಾಯಿಗಳು ಹಾಗೂ ಬಂಡವಾಳ ಲೆಕ್ಕದಲ್ಲಿ 1,20,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

37) 1983ರ ಮಾರ್ಚ್ 31ರ ಅಂತ್ಯದೊಳಗಾಗಿ "ವಿದ್ಯುಚ್ಛಕ್ತಿ ಯೋಜನೆಗಳು"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 50,01,000 ರೂ. ಗಳಿಗೆ

ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

38) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಭೂಕಂದಾಯ ಮುಂತಾದುವುಗಳಿಗೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬಂದಿರುವುದರಿಂದ ರಾಜಸ್ವ ಲೆಕ್ಕದಲ್ಲಿ 90,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

39) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಸ್ಟಾಂಪುಗಳು ಮತ್ತು ನೊಂದಣಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 29,60,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

40) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಪ್ರಕೃತಿ ವಿಕೋಪಗಳ ನಿಮಿತ್ತ ಪರಿಹಾರಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,59,10,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

41) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಪುನರ್ವ್ಯವಸ್ಥೆ ಯೋಜನೆಗಳು"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 6,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

42) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಸಹಕಾರ" (ನಿಯಂತ್ರಿತ ಮಾರುಕಟ್ಟೆಗಳನ್ನು ಬಿಟ್ಟು)ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12,00,000 ರೂ.ಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1,37,00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

43) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 22,00,0,000 ರೂ.ಗಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

44) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಸಮುದಾಯ ಅಭಿವೃದ್ಧಿ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2,[illegible],00,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

45) 1983 ಮಾರ್ಚ್ 31ರ ಅಂತ್ಯದೊಳಗಾಗಿ "ಸಮಗ್ರ ಗ್ರಾಮಾಭಿವೃದ್ಧಿ ಕಾರ್ಯಕ್ರಮ"ಗಳು ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,21,49,000 ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

46) 1983 ಮಾರ್ಚ್ 31ರ ಅಂತ್ಯದೊಳಗಾಗಿ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 12,12,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

47) 1983ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಕಾರ್ಮಿಕ ಮತ್ತು ಉದ್ಯೋಗ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,52,87,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

48) 1983ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ" (ಮಹಿಳಾ ಮತ್ತು ಮಕ್ಕಳ ಕಲ್ಯಾಣವನ್ನು ಬಿಟ್ಟು)ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1,14,1,00 ರೂಪಾಯಿಗಳು ಮತ್ತು ಬಂಡವಾಳ ಲೆಕ್ಕದಲ್ಲಿ 1॥,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

49) 1983ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣ"ಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 83,00,000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ

ಪ್ರಸ್ತಾವಿಸಲಾಗಿದೆ.

50) 1983ನೇ ಮಾರ್ಚ್ 31ರ ಅಂತ್ಯದೊಳಗಾಗಿ "ಮೀನುಗಾರಿಕೆ"ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 2.000 ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾವಿಸಲಾಗಿದೆ.

ಪ್ರಸ್ತಾವವನ್ನು ಸಭೆಯ ಮುಂದಿಡಲಾಗುವುದು.

## ೧೯೮೩-೮೪ನೇ ಸಾಲಿನ ವೆಚ್ಚಕ್ಕಾಗಿ ಅನುದಾನಗಳನ್ನು ಪಡೆಯಲು ಬೇಡಿಕೆಗಳ (ಲೇಖಾನುದಾನ).

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ.

ಅಭಿಯಾಚನೆ ಕ್ರಮಾಂಕ ೧—ವ್ಯವಸಾಯ (ತೋಟಗಾರಿಕೆಯ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಹೊರತು).

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆಯ ಹೊರತು (ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧೪,೦೦.೦೦೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೨—ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೪,೦೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.........ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩—ಭೂಸಾರ ಮತ್ತು ಜಲರಕ್ಷಣೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೪,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪—ಪಶುಸಂಗೋಪನ ಮತ್ತು ಡೇರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೇರಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧೪,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪.ಅ.—ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧,೯೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತಯಲ್ಲಿ ೮೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫—ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೪,೦೦,೦೦,೦೦೦ ರೂ.ಗಳಿಗಿಂತ ಮೀರರ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು

ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 6—ಗಣಿಗಳು ಮತ್ತು ಭೂವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 1,9000,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ...... ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನಂದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 7—ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 7,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 8—ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 10,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 9—ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು, ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ5,00,00000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ................ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 10—ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23.00.00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 11—ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 2,28,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 3,000,00 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 12—ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ ಮತ್ತು ಕನ್ನಡಾಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 1,11,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ...........ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 13— ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 105,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು

ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 14—ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 15—ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 16—ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 40,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 17—ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ಬಂಡವಾಳ ಖಾತೆಯಲ್ಲಿ 18,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 18—ಸಮಾಜ ಸಂರಕ್ಷೆ ಮೇರೆಗೆ ವಿಮೆ ಮತ್ತು ವಿಶ್ರಾಂತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಮಾಜ ಸಂರಕ್ಷೆ ಮೇರೆಗೆ ವಿಮೆ ಮತ್ತು ವಿಶ್ರಾಂತಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ............... ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 19—ವಿವಿಧ ಸಾಮಾನ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,35,00,000 ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 20—ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ. ರಾಜಸ್ವಖಾತೆಯಲ್ಲಿ 11,00,00,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳಖಾತೆಯಲ್ಲಿ 10,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 21—ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 16,00,00,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 65,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 22—ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ

ಖಾತೆಯಲ್ಲಿ 5,40.0?,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 23—ವಾಹನ ತೆರಿಗೆ

ರಾಜ್ಯಪಾಲರ ಶಿಫಾರಸ್ಸಿನಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,40,?0,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 24—ಪೊಲೀಸ್ ಮತ್ತು ಅಗ್ನಿಶಾಮಕ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ ಹೊರತುಪಡಿಸಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 300,0?,0,0 0 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 25—ಜೈಲುಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವಖಾತೆಯಲ್ಲಿ 1,40,00,00? ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 26—ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,70,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 45,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 27—ರಸ್ತೆಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನಂದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 28—ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವಖಾತೆಯಲ್ಲಿ 43,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ....................ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 29—ಜನಾರೋಗ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 9,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.............. ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 30—ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹ ವರ್ನಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 7,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 31—ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 32—ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಂಚಾಯಿತಿಗಳಿಗೆ ಅನುದಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರಪಾಲಿಕೆಗಳು ಮತ್ತು ಪಂಚಾಯಿತಿಗಳಿಗೆ ಅನುದಾನ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,45,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ...................... ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 33—ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 34—ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 40,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 97,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 35—ರಾಜ್ಯ ವಿಧಾನ ಸಭೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಸಭೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 36—ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆ ಸಂದಾಯ ಮಾಡುವಲ್ಲಿ 6,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 37—ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4[illegible], 0,00[illegible] ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 38—ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 39—ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 3,35,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇ

ಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 40—ಜಿಲ್ಲಾ ದಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾ ದಳಿತ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 5,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.............. ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 41 —ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತಯಲ್ಲಿ 1,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 42 ಪ್ರದೇಶಾಭಿವೃದ್ಧಿ ಮತ್ತು ಯೋಜನಾ ಇಲಾಖೆಯ ಇತರ ಬಾಬುಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರದೇಶಾಭಿವೃದ್ಧಿ ಯೋಜನಾ ಇಲಾಖೆಯ ಇತರೆ ಬಾಬುಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,00,000, ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ಮತ್ತು 40,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 43—ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ(ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 30,00,00,000 ರೂ.ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.........ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 44—ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 3,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 45—ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 24,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನುಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕಮಾಂಕ 46—ರೇವು ಮತ್ತು ಜಲಸಾರಿಗೆ ಸೇವೆ

ರಾಜ್ಯ ಪಾಲಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 60,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,75,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 47—ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8300,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಮಂಡಿಸಲು

ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 48—ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9,37,0,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 49—ಮುದ್ರಾಂಕ(ಸ್ಟ್ಯಾಂಪು)ಗಳು ಮತ್ತು ನೊಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ(ಸ್ಟಾಂಪು)ಗಳು ಮತ್ತು ನೊಂದಣಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,40,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.............. ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 5. —ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 4,90,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆ ತೆಯಲ್ಲಿ 1,80,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 51—ಪುನರ್ವಸತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ 25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00.000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 52—ಮುಜರಾಯಿ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಜರಾಯಿ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 70.00000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.................ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ,

ಅಭಿಯಾಚನೆ ಕ್ರಮಾಂಕ 53—ವಾಕ್ಸ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಕ್ಸ್ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 19,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 54—ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 3,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ—55 ಕ್ರಮಪಡಿಸಿದ ಮಾರೇಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,80,00,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯದು ..............ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂಲ್ಲಿನಿ (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 56—ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 33,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.........ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 57—ಸಾಮುದಾಯಕ ಅಭಿವೃದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 6,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 58—ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ........... ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 59—ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಯೋಜನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ.............. ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 60—ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,00,00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 61— ಸಾಮಾಜಿಕ ಭದ್ರತ (ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ (ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವಖಾತೆಯಲ್ಲಿ 16,23,00,000 ರೂ.ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 44,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 62—ಆದಿವಾಸಿಪ್ರದೇಶ ಉಪಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆದಿವಾಸಿಗಳಿಗೆ ಯೋಜನೆ ಸಂದಾಯ ಮಾಡುವಲ್ಲಿ 2,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 63—ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1984ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,50,00.000, ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ........... ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಸಭೆಯ ಮುಂದಿಡಲಾಯಿತು

ಇನ್ನು ಡಿಮ್ಯಾಂಡ್ ನಂಬರ್ 13ರಲ್ಲಿ ತಾವು ಪೂರಕ ಬೇಡಿಕೆಯನ್ನು ಕೇಳಿದ್ದೀರಿ. ಇದು ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರ. ಪಿ.ಯು.ಸಿ. ಬೋರ್ಡಿನ ಹಗರಣವಾಯಿತು. ಆ ಹಗರಣದ ವಿಚಾರಣೆಯಾಗಿ ಸರ್ಕಾರಕ್ಕೆ ಬಹುಶಃ ಆ ವರದಿ ಬಂದು 2 ತಿಂಗಳಾಗಿರಬೇಕು. ದಯಮಾಡಿ ಈ ಬಗ್ಗೆ ಸ್ಪಷ್ಟವಾದ ಕಾರ್ಯಾಚರಣೆಯನ್ನು ಮಾಡಬೇಕು. ಆ ವರದಿಯನ್ನು ಏನು ಮಾಡಿದ್ದೀರಿ ? ಏಕೆಂದರೆ ಇದು ನಮ್ಮ ರಾಜ್ಯದಲ್ಲಿರತಕ್ಕಂತಹ ಅಮಾಯಕ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಶ್ನೆ. ಈ ಒಂದು ಹಗರಣ ಅಥವಾ ಈ ಒಂದು ಪ್ರಸಂಗಗಳು ಕರ್ನಾಟಕ ರಾಜ್ಯದಲ್ಲಿ ಹಿಂದೆ ನಡೆದದ್ದು ಇಲ್ಲ. ಬೇರೆ ರಾಜ್ಯಗಳಲ್ಲಿ ನಡೆದಿರಬಹುದು. ಆದರೆ ಇಂತಹ ಪ್ರಸಂಗ ಸರ್ಕಾರದ ಗಮನಕ್ಕೆ ಬಂದ ಕೂಡಲೇ ಆ ಬಗ್ಗೆ ಬೇಕಾದ ಕಾರ್ಯಾಚರಣೆಯನ್ನು ಹಿಂದೆ ಇದ್ದಂತಹ ಸರ್ಕಾರ ಮಾಡಿತ್ತು. ವರದಿ ಬಂದಂತಹ ಸಮಯದಲ್ಲಿ ಆ ವರದಿಯಲ್ಲಿರತಕ್ಕ ಶಿಕ್ಷಾರ್ಹರು ಯಾರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಮುಂದೆ ಪರೀಕ್ಷೆಗಳು ಬರುತ್ತಿವೆ. ಮಾರ್ಕ್ಸ್‌ಗಳನ್ನು ಆಧಾರವಾಗಿಟ್ಟುಕೊಂಡು ಅನೇಕ ಜನ ವೈದ್ಯಕೀಯ ಕಾಲೇಜುಗಳಿಗೂ ಹಾಗೂ ತಾಂತ್ರಿಕ ಕಾಲೇಜುಗಳಿಗೂ ಸೇರಿದ್ದಾರೆ. ಇಂಥ ಪ್ರಸಂಗಗಳು ಮುಂದೆ ಬರಬಾರದು. ಅವರು ಯಾರೇ ಇರಲಿ ಅವರನ್ನು ಶಿಕ್ಷಿಸತಕ್ಕ ಕೆಲಸವನ್ನು ಮಾಡುವುದಕ್ಕೆ ಹಿಂದೆ ಮುಂದೆ ನೋಡಬಾರದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈ ಬಗ್ಗೆ ತಾವು ವಿಚಾರ ಮಾಡಬೇಕು. ಯಾವುದೇ ಹಣವನ್ನು ಈ ಸದನ ಮಂಜೂರು ಮಾಡುವ ಮೊದಲು, ಯಾವ ಕ್ರಮಗಳನ್ನು ಇದರ ಬಗ್ಗೆ ತೆಗೆದುಕೊಂಡಿದ್ದೀರಿ ? You have got to account it ಆದ್ದರಿಂದ ತಾವು ಇದನ್ನು ದಯಮಾಡಿ ಹೇಳಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನೇಮಕ ಮಾಡಿದಂತಹ ವಿಚಾರಣಾ ಸಮಿತಿಯು ಕೊಟ್ಟಂತಹ ವರಧಿಯ ಆಧಾರದ ಮೇಲೆ ಬಂದಂತಹ ಆಪಾದನೆಗಳನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿಕೊಟ್ಟಿದ್ದೇನೆ. ವಿಜಿಲೆನ್ಸ್‌ನಿಂದ ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಜಿಲೆನ್ಸ್‌ಗೆ ತಾವು ಕಳುಹಿಸಿರಬಹುದು. ಇದು ಬಹಳ ಮುಖ್ಯವಾದ ವಿಚಾರ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಮುಂದೆ ಬರತಕ್ಕಂತಹ ಪರೀಕ್ಷೆಗಳನ್ನು ಎದುರಿಸಬೇಕಾಗಿದೆ. ಇದನ್ನು ಬೇರೆ ರೀತಿಯ ಕೇಸುಗಳ ರೀತಿಯಲ್ಲಿ ಪರಿಗಣಿಸಬಾರದು. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡುವಾಗ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕು. ವಿಜಿಲೆನ್ಸ್‌ಗೆ ಕಳುಹಿಸಿದ್ದೇವೆಂದು ಹೇಳುವುದು ಕ್ರಮ ಅಲ್ಲ.

ಶ್ರೀ ಬಿ. ರಾಚಯ್ಯ.—ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡಿಲ್ಲ. ಸಸ್ಪೆನ್ಷನ್ ಅವಧಿಯನ್ನು ಇನ್ನೂ ಮುಂದುವರಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದರ ಪೂರ್ಣ ವರದಿಯನ್ನು ಸದನದ ಮುಂದೆ ಇಡಬೇಕು. ಯಾರು ತಪ್ಪಿತಸ್ಥರು ಎಂಬುದನ್ನೂ ಸದನದ ಮುಂದೆ ಇಡಬೇಕು. ಇದು ಸಾರ್ವಜನಿಕರ ಗಮನಕ್ಕೆ ತಿಳಿಸುವಂತಹ ಪ್ರಮುಖವಾದ ವಿಚಾರ. ವಿಜಿಲೆನ್ಸ್‌ನಿಂದ ವರದಿಯನ್ನು ತಕ್ಷಣ ತರಿಸಬೇಕು. ಏಕೆಂದರೆ ಪಿ.ಯು.ಸಿ. ಪರೀಕ್ಷೆಗಳು ಬರುತ್ತಿವೆ. ಆ ಪರೀಕ್ಷೆಗಳು ಬರುವ ಮೊದಲೇ ಈ ಬಗ್ಗೆ ಕ್ರಮವನ್ನು ಕೈಗೊಳ್ಳದಿದ್ದರೆ ಬಹುಶಃ ಗಂಡಾಂತರ ಪರಿಸ್ಥಿತಿ ಆಗಬಹುದೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸದನದ ಮುಂದೆ ನ್ಯಾಯಾಂಗ ವಿಚಾರಣೆಯಾದಾಗ ಆ ವರದಿಯನ್ನು ಇಡುವುದಕ್ಕೆ ಸರ್ಕಾರ ಒಪ್ಪಿದೆ. ಇಂತಹ ವಿಚಾರಣೆಗಳಾದಾಗ ಬಂದಂತಹ ವರದಿಯನ್ನು ಸದನದ ಮುಂದೆ ಇಡಬೇಕೆಂಬ ನಿರ್ಬಂಧ ಇಲ್ಲ. ಅದು ಇನ್ನೂ ಬಂದಿಲ್ಲ. ಬಂದಂತಹ ಕಾಲದಲ್ಲಿ ಯೋಚನೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂತಹ ಪ್ರಮುಖವಾದ ವಿಚಾರಗಳ ಬಗ್ಗೆ ಆದಂತಹ ವಿಚಾರಣೆಯ ವರದಿಯನ್ನು ಸದನದ ಮುಂದೆ ಇಡುವುದಕ್ಕೆ ಏನು ಇದೆ ? ವರದಿ ಬಂದಿದೆ, ಅದನ್ನು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಇಲಾಖೆಯ ಬಗ್ಗೆ ಆದಂತಹ ವರದಿಯನ್ನು ಇಲ್ಲಿ ಇಡುವುದಕ್ಕೆ ಏನು ತೊಂದರೆ ? ಇದರ ಬಗ್ಗೆ ಏನು ಕ್ರಮ ನಡೆದಿದೆ ಎಂಬುದನ್ನು ಸದನ ತಿಳಿದುಕೊಳ್ಳಬೇಕಾಗುತ್ತದೆ. ದಯಮಾಡಿ ಅದನ್ನು 31ನೇ ತಾರೀಖಿನ ಒಳಗಡೆ ಸದನದ ಮುಂದೆ ಇಡಬೇಕು. ಅದರ ಬಗ್ಗೆ ಕಾನೂನಿನಲ್ಲಿ ಯಾವುದೇ ಅಡಚಣೆ ಇಲ್ಲ. ಮತ್ತೆ ಬರೀ ನ್ಯಾಯಾಂಗ ವಿಚಾರಣೆಯಾಗಿ ಅದರ ವರದಿಯನ್ನು ಇಲ್ಲಿಡುವಂತಹ ಪ್ರಶ್ನೆಯಲ್ಲ. ಬೇರೆ ಬೇರೆ ರೀತಿಯಲ್ಲಿ ಆದಂತಹ ವಿಚಾರಣೆಯ ವರದಿಯನ್ನೂ ಕೂಡ ಸದನದಲ್ಲಿಟ್ಟಂತಹ ಸಂದರ್ಭಗಳು ಅನೇಕವಿವೆ. ಎಲ್ಲ ವರದಿಗಳನ್ನೂ ಸಭೆಯ ಮುಂದಿಟ್ಟಿಲ್ಲ. ಈ ಪಿ.ಯು.ಸಿ. ಬೋರ್ಡಿನ ಹಗರಣ ಏನು ನಡೆದಿದೆ ಇದರ ಬಗ್ಗೆ ಹೆಚ್ಚು ಸಾರ್ವಜನಿಕರ ಗಮನ ಸೆಳೆದಿದೆ.

ಶ್ರೀ ಬಿ. ರಾಚಯ್ಯ.—ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಅಂತಿಮ ವರದಿ ಬಂದ ಮೇಲೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಆದರೆ ಅಂತಿಮ ವರದಿ ಇನ್ನೂ ಬರದಿರುವಾಗ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರ ಬಗ್ಗೆ ಅಂತಿಮ ವರದಿ ಸರ್ಕಾರಕ್ಕೆ ಬಂದಿರಬೇಕು. ಅಂತಿಮ ವರದಿ ಬಂದ ಮೇಲೇ ವಿಜಿಲೆನ್ಸ್‌ಗೆ ಕಳುಹಿಸಿರುವುದು. Proper Authority has to enquire and produce the report. It has come the Government. For a further

**follow up........** ವಿಜಿಲೆನ್ಸ್‌ಗೆ ಕಳುಹಿಸಿದ್ದೀರಿ. ಅದನ್ನು ದಯಮಾಡಿ ಸದನಕ್ಕೆ ಒಪ್ಪಿಸಿ. ಯಾವಾಗ ವಿಜಿಲೆನ್ಸ್‌ಗೆ ಕಳುಹಿಸಿದಿರಿ ? ವರದಿ ಯಾವಾಗ ಬಂತು ? ಅದರ ವಿವರಗಳನ್ನು ದಯಮಾಡಿ ಸದನಕ್ಕೆ ಒದಗಿಸಿ.

ಇನ್ನು 20ನೇ ಬೇಡಿಕೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ಈ ಹಿಂದೆ ವೆಂಗಳೂರು ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಈಗಲೇ ಅಕ್ಕಿಯ ದರ ಒಂದು ಕೇಜಿಗೆ 3–80 ರೂಪಾಯಿಗಳಿರುವಾಗ ಬಹುಶಃ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂನ್–ಜುಲೈ ತಿಂಗಳು ಬರುವಾಗ ಒಂದು ಕೇಜಿಗೆ 6-7 ರೂಪಾಯಿಗಳಾಗಬಹುದು. ಆದ್ದರಿಂದ ಇದರ ಮೇಲೆ ಯಾವುದೇ ರೀತಿಯ ಹತೋಟಿಯನ್ನು ತಾವು ಇಟ್ಟಿಲ್ಲ. ತಮಗೆ ಸಾಕಷ್ಟು ಸಿಬ್ಬಂದಿ ಇದೆ. ರೈಸ್ ಮಿಲ್ ಮಾಲೀಕರ ಮೇರೆ, ವರ್ತಕರ ಮೇಲೆ ಹಾಗೂ ಅಕ್ರಮವಾಗಿ ಆಹಾರ ಸಾಮಗ್ರಿಗಳನ್ನು ಸಂಗ್ರಹಣೆ ಮಾಡಿ ಕೊಂಡಿದ್ದಂಥವರ ಮೇಲೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡಿರುವಂತಹ ಒಂದು ವರದಿಯೂ ನಮ್ಮ ಮುಂದಿಲ್ಲ. ಈ ರೀತಿ ನಮ್ಮ ರೈಸ್‌ಮಿಲ್ ಮಾಲೀಕರು, ವರ್ತಕರು, ಅಕ್ರಮ ಸಂಗ್ರಹಣೆಕಾರರು ಆಹಾರ ಧಾನ್ಯಗಳ ಮೇಲೆ ತಮ್ಮ ಸಂಪೂರ್ಣ ಹತೋಟಿಯನ್ನು ಇಟ್ಟುಕೊಂಡು ಸರ್ಕಾರದ ಹತೋಟಿಯನ್ನು ತಪ್ಪಿಸ ತಕ್ಕ ವಿಚಾರ ಯಾವುದು ಇದೆ, ಅದರ ಬಗ್ಗೆ ಯಾವುದೇ ರೀತಿಯ ಕ್ರಮವಾನ್ನು ತೆಗೆದುಕೊಂಡ ಹಾಗೆ ಇಲ್ಲ. ಆ ರೀತಿಯ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಪರಿಸ್ಥಿತಿ ವಿಪರೀತಕ್ಕೆ ಬರುವಂತಹ ಸ್ಥಿತಿ ಇದೆ ಎಂಬುದಾಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಸರ್ಕಾರ ಪ್ರಥಮದಲ್ಲಿ ಅಧಿಕಾರಕ್ಕೆ ಬಂದರೆ ಇಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಪಡಿತರ ಪದ್ಧತಿಯನ್ನು ಜಾರಿಗೆ ತರುವಂತಹ ಸಂದರ್ಭದಲ್ಲಿ ಕೆಲವು ನಗರಗಳಲ್ಲಿ 10 ಪೈಸೆಯಿಂದ 20 ಪೈಸೆಯವರೆಗೆ ಸಬ್ಸಿಡಿಯನ್ನು ಕೊಟ್ಟು 20 ಕೋಟಿ ಯನ್ನು ಸರ್ಕಾರ ಕೊಟ್ಟ ಕೂಡಲೇ ಬೆಲೆ ಹತೋಟಿಯನ್ನು ಮಾಡುವುದಕ್ಕಾಗುವುದಿಲ್ಲ. ಬೆಲೆ ಹತೋಟಿ ಯನ್ನು ಅಕ್ರಮ ಸಂಗ್ರಹಣೆಕಾರರು ಯಾರು ಇದ್ದಾರೆ ಅವರು ಮಾಡುತ್ತಿದ್ದಾರೆ. ಅಥವಾ ಈ ರೀತಿಯ ಕೊರತೆಯ ಸಂದರ್ಭದಲ್ಲಿ ಯಾರು ಲಾಭವನ್ನು ಮಾಡುವುದಕ್ಕೆ ಹೋಗುತ್ತಾರೆ ಅವರ ಮೇಲೆ ಯಾವುದೇ ರೀತಿಯ ನಿಗ್ರಹವಾದ ಹತೋಟಿಯನ್ನು ತಾವು ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ಅದರ ಬಗ್ಗೆ ಸ್ಪಷ್ಟೀ ಕರಣ ಕೊಡಬೇಕು. ಎಷ್ಟು ಕೇಸುಗಳನ್ನು ಜನವರಿಯಿಂದ ಹಿಡಿದು ಇವತ್ತಿನವರೆಗೂ ಅಕ್ರಮ ಸಂಗ್ರಹಣೆ ಕಾರರ ಮೇಲೆ ಹಾಕಿದ್ದೀರಿ. ಅದೇ ರೀತಿ ಎಷ್ಟು ಕೇಸುಗಳನ್ನು ವರ್ತಕರ ಮೇಲೆ ಹಾಕಿದ್ದೀರಿ ? ಎಷ್ಟು ದಾಸ್ತಾನನ್ನು ಹಿಡಿದಿಟ್ಟಿದ್ದೀರಿ ? ಮತ್ತೆ ಕೇರಳಕ್ಕೆ ಕಳ್ಳ ಸಾಗಾಣಿಕೆ ಮಾಡುತ್ತಿದ್ದಂತಹ ಎಷ್ಟು ಲಾರಿಗಳನ್ನು ಹಿಡಿದಿದ್ದೀರಿ ? ಎಷ್ಟು ಮಾಲನ್ನು ಸೀಜ್ ಮಾಡಿದ್ದೀರಿ ? ಅವರ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದೀರಿ ? ಎಂಬ ವಿವರಗಳನ್ನು ಸದನಕ್ಕೆ ತಾವು ದಯಮಾಡಿ ಒದಗಿಸಬೇಕು.

ಮತ್ತೆ ಐಟಂ ನಂಬರ್ 21 ಅರಣ್ಯ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರ. ನಮ್ಮ ಈಗಿನ ಅರಣ್ಯ ಸಚಿವರು ಬಹಳವಾಗಿ ಅರಣ್ಯ ಇರತಕ್ಕಂತಹ ಪ್ರದೇಶದಿಂದ ಬಂದವರೇ ಆಗಿದ್ದಾರೆ. ಈ 2-3 ತಿಂಗಳಿಂದ ತಮಗೆ ಎಷ್ಟೋ ಮಾಹಿತಿ ಬಂದಿರಬಹುದು. ಅನೇಕ ಕಾಡುಗಳಲ್ಲಿ ಮರಗಳನ್ನು ನಿರಾಂತಕ ವಾಗಿ ಕಡಿಯುತ್ತಿರತಕ್ಕಂತಹ ಪರಿಸ್ಥಿತಿ ನಮ್ಮ ಗಮನಕ್ಕೂ ಬಂದಿದೆ. ಅನೇಕ ಸಂದರ್ಭಗಳಲ್ಲಿ ರಸ್ತೆ ಬದಿ ಯಲ್ಲಿರತಕ್ಕಂತಹ ಮರಗಳನ್ನು ಕಡಿದುಕೊಂಡು ಹೋಗುವ ಹಾಗೆ ಇರಲಿಲ್ಲ. ಆದರೆ ಆ ರೀತಿ ಇವತ್ತು ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿದೆ. ಇದೇ ರೀತಿಯ ಇನ್ನೂ ಮಹತ್ತರವಾದ ವಿಚಾರಗಳನ್ನು ಹೇಳಬೇಕಾ ಗಿದೆ. ಇದರ ಬಗ್ಗೆ ವಿವರಣೆಯನ್ನು ಸರ್ಕಾರದವರು ಒದಗಿಸಬೇಕು. ಗೇರುಬೀಜ ಅಭಿವೃದ್ಧಿ ಕಾರ್ಪೋ ರೇಷನ್ ಬಗ್ಗೆ ಹೇಳುವುದಾದರೆ, ಈ ಕಾರ್ಯಕ್ರಮ ಮಾಡುತ್ತೇವೆಂದು ಹೆಚ್ಚು ನಿಬಿಡವಾಗಿರತಕ್ಕಂತಹ ಮರ ಗಳನ್ನು ಕಡಿಯುತ್ತಿದ್ದಾರೆ. ನಿಬಿಡವಾಗಿರತಕ್ಕಂತಹ ಮರಗಳನ್ನು ಕಡಿದು ಗೋಡಂಬಿಯನ್ನು ಬೆಳೆಸುವ ಬದಲು ಇರತಕ್ಕಂತಹ ಅರಣ್ಯವನ್ನು ನಾಶ ಮಾಡದೇ ಇದ್ದರೆ ಒಳ್ಳೆಯದು. ಇದರ ಬಗ್ಗೆ ಸರ್ಕಾರ ಹತೋ ಟಿಯನ್ನು ಇಟ್ಟುಕೊಂಡಿರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 36ರ ಪ್ರಕಾರ ನಾನು ಮೊದಲೇ ಈ ಒಂದು ಮಾತನ್ನು ಬಜೆಟ್ ಭಾಷ ಣದಲ್ಲಿ ಹೇಳಿದ್ದೇನೆ. ಅದೇನೆಂದರೆ ಪ್ರೆಸ್ ಅಕಾಡಮಿಯನ್ನು ಬಲಪಡಿಸಬೇಕು ಎಂದು. ಅದಕ್ಕೆ ಹೆಚ್ಚು ಚೈತನ್ಯ ಕೊಡಬೇಕು. ಹಾಗೆ ಮಾಡಿದರೆ ಪ್ರೆಸ್ ಅಕಾಡಮಿಗೆ ಮಾತ್ರವಲ್ಲದೆ ಪತ್ರಿಕಾ ಕರ್ತರ ಯೋಗಕ್ಷೇಮ ಮತ್ತು ಅವರ ಸಂಕಷ್ಟಗಳನ್ನೂ ನೋಡಿಕೊಳ್ಳುವುದಕ್ಕೂ ಇದರಿಂದ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 30ರ ಪ್ರಕಾರ ಇದರಲ್ಲಿ ಅನೇಕ ಪ್ರಮುಖವಾದ ಕಾರ್ಯಕ್ರಮಗಳು ಇವೆ. ಅದು ಯಾವುವೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಬಡವರಿಗೆ ಮನೆ ಕಟ್ಟಿಕೊಡತಕ್ಕಂಥಾ ಕಾರ್ಯ ಕ್ರಮ. ಈ ಒಂದು ಕಾರ್ಯಕ್ರಮದ ಪ್ರಕಾರ ಡಿಸಂಬರ್ 80ರಿಂದ ಜನವರಿ 82 ಅಂದರೆ 3 ವರ್ಷದವರೆಗೆ ಹಿಂದಿನ ಸರ್ಕಾರ 3 ಲಕ್ಷ ಮನೆಗಳನ್ನು ಕಟ್ಟಿದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ 3 ತಿಂಗಳಿಂದ ಈಚೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಇನ್ನು ಕೆಲವು ಜಿಲ್ಲೆಗಳಲ್ಲಿ ನಮಗೆ ಹಣ ಬರುತ್ತದೆ ಎಂದು ತಿಳಿದುಕೊಂಡು ಅಡ್ವಾನ್ಸ್ ಆಗಿಯೇ ಅವರವರ ಕಾಂಟ್ರಿಬ್ಯೂಷನ್‌ನಲ್ಲಿ ಕೆಲವರು

ಕನ್ಸ್ಟ್ರಕ್ಷನ್ ಹಾಕಿದ್ದಾರೆ ; ಕೆಲವರು ಫಾಯ ಹಾಕಿದ್ದಾರೆ ; ಬೇರೆ ಬೇರೆ ಹಂತದಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ನನಗೆ ತಿಳಿದ ಪ್ರಕಾರ ಅವರಿಗೆ ಇನ್ನೂ ಹಣವನ್ನು ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಹಣ ಇನ್ನೂ ಬಿಡುಗಡೆಯಾಗಿಲ್ಲ ಎಂದು ಹೇಳುತ್ತಾರೆ. ಮಲೆನಾಡಿನ ಪ್ರದೇಶದಲ್ಲಿ ಅವರಿಗೆ ಕೊಡಬೇಕಾದ ಹಣ ಮೊದಲು ಕೊಡಬೇಕು. ಏತಕ್ಕೆಂದರೆ ಏಪ್ರಿಲ್ ಮೇ ತಿಂಗಳಿನ ಕೊನೇ ವಾರದಲ್ಲಿ ಮಳೆ ಬಂದರೆ ಅವರು ಕಟ್ಟಿರತಕ್ಕಂಥ ಅರ್ಧಂಬರ್ಧ ಮನೆಗಳೂ ಬಿದ್ದುಹೋಗಿ ಬಿಡುತ್ತವೆ. ಇದರಿಂದ ಆ ಜನಗಳಿಗೂ ನಷ್ಟವಾಗಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಕೂಡಲೇ ಅವರಿಗೆ ಹಣವನ್ನು ಬಿಡುಗಡೆ ಮಾಡಬೇಕು ಎಂದು ಹೇಳುತ್ತೇನೆ. ಅಥವಾ ಹುಡ್ಕೋ ಯೋಜನೆಯಲ್ಲಿ ಇದಕ್ಕೆ ಸಹಾಯ ಮಾಡತಕ್ಕಂಥಾ ಕಾರ್ಯಕ್ರಮದಲ್ಲಿ ಏನು ಹಣ ಇದೆ ಅದರಿಂದಲಾದರೂ ಸಹಾಯ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಸಾಧ್ಯವಾದರೆ ನಾಳೆಯೇ ಬಿಡುಗಡೆ ಮಾಡಿದರೆ ಹಂತ ಹಂತದಲ್ಲಿ ಅವರು ಏನು ಮನೆಗಳನ್ನು ಕಟ್ಟಿಕೊಂಡಿರುತ್ತಾರೋ ಅದನ್ನು ಬೇಗನೆ ಮುಗಿಸುತ್ತಾರೆ. ಈ ಬಗ್ಗೆ ಕೂಡಲೇ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ಹಿಂದಿನ ಸರ್ಕಾರ ಈ ಬಗ್ಗೆ ಒಂದು ಎಸ್ಟಿಮೇಟ್ ಅನ್ನು ತಯಾರು ಮಾಡಿತ್ತು. ಅದನ್ನು ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದರು. ಕೇಂದ್ರ ಸರ್ಕಾರದಲ್ಲಿ ಇದಕ್ಕೆ ಸಂಬಂಧಪಟ್ಟ ಡೆವಲಪ್‌ಮೆಂಟ್ ಕಮೀಷನರ್ ಇದನ್ನು ಮಂಜೂರು ಮಾಡಿದ್ದಾರೆ. ಹೀಗೆ ಈ ಒಂದು ಕಾರ್ಯಕ್ರಮಕ್ಕೆ ಮಂಜೂರಾತಿ ಕೊಟ್ಟಿದ್ದರೂ ಕೂಡ ಅದರ ಕಾರ್ಯವನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಆ ಹಣವನ್ನು ಕೂಡಲೇ ಬಿಡುಗಡೆ ಮಾಡದೇ ಇದ್ದರೂ ಸಹ ಆ ಹಣ ಬಂದಮೇಲ ಕೆಲಸ ಮಾಡುವ ಎಂದು ಕಾದು ಕುಳಿತರೆ ಕೆಲಸ ಆಗುವುದಿಲ್ಲ. ಇಂಥಾ ಒಂದು ಪ್ರವೃತ್ತಿಯನ್ನು ನಿಲ್ಲಿಸಬೇಕು. ಕೆಲವು ಡ್ರಾಟ್‌ಗೆ ಹಣ ಕೊಡುವುದರ ಬಗ್ಗೆಯಾಗಲಿ ಹೌಸಿಂಗ್ ಪ್ರೋಗ್ರಾಂಗೇ ಆಗಲಿ, ಮಂಗಳೂರು ಹಾರ್ಬರ್ ಬಗ್ಗೆಯಾಗಲಿ ಇದರ ಬಗ್ಗೆ ಕೇಂದ್ರ ಸರ್ಕಾರದ ಹಣ ಬಂದಮೇಲೆ ಆ ಕೆಲಸ ಮಾಡೋಣ ಎನ್ನುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಹೋಗಬಾರದು ಎಂದು ಹೇಳುತ್ತೇನೆ. ಒಂದು ಉದಾಹರಣೆ ಹೇಳುವುದಾದರೆ ಡ್ರಾಟ್ ಬಗ್ಗೆ ಕೇಂದ್ರ ಸರ್ಕಾರದವರು 10 ಕೋಟಿ ರೂಪಾಯಿ ಕೊಡುತ್ತಾರೆ ಎಂದು ಹೇಳಿದಿರಿ. ಒಂದು ವೇಳೆ ಅವರು ಒಮ್ಮೆಲೇ ಆ ಹಣವನ್ನು ಬಿಡುಗಡೆ ಮಾಡದೇ ಹೋದರೂ ಕೂಡ ನೀವು ತಕ್ಷಣ ಮೊದಲು ಖರ್ಚು ಮಾಡಿ ನಂತರ ಅವರ ಹತ್ತಿರ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಖರ್ಚು ಮಾಡಿ ಅವರಿಗೆ ತೋರಿಸದೆ ಹೋದರೆ ಕೇಂದ್ರದಿಂದ ಇದಕ್ಕೆ ಯಾವ ಸಮಿತಿ ಬಂದರೂ ಕೂಡ ಯಾವ ಹಣವನ್ನೂ ಬಿಡುಗಡೆ ಮಾಡುವುದಿಲ್ಲ. ಮೊದಲು ಆ ಹಣವನ್ನು ಖರ್ಚು ಮಾಡಿ ತೋರಿಸಬೇಕು. ಅಲ್ಲಿಂದ ಹಣ ಬರಲಿ ಖರ್ಚು ಮಾಡೋಣ ಅಂದುಕೊಂಡು ಕೇಂದ್ರ ಸರ್ಕಾರದ ಮೇಲೆ ಆಪಾದನೆ ಹೊರಿಸಿದರೆ ಈ ಒಂದು ನೀತಿ ಸರಿಯಲ್ಲ. ಕರ್ನಾಟಕ ರಾಜ್ಯ ಹಿತವನ್ನು ನೋಡಬೇಕಾದರೆ ಮೊದಲು ನೀವು ಖರ್ಚು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಯಾರಮೇಲೂ ಆಪಾದನೆ ಮಾಡುವುದಿಲ್ಲ. ಈಗಾಗಲೇ ಅದಕ್ಕೆ 5-6 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಲಾಗಿದೆ. ಪತ್ರಿಕೆಯಲ್ಲೂ ಕೂಡ ಅದು ವರದಿಯಾಗಿದೆ. ಮುಂದೆ ಬರತಕ್ಕಂಥಾ ಹಣ ತಕ್ಷಣ ಬಂದರೆ ಅದನ್ನೂ ಸಹ ರಿಲೀಸ್ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಎನ್.ಆರ್.ಇ.ಪಿ. ಸ್ಕೀಮಿನಲ್ಲಿ ಆಗಲಿ, ಯಾವುದೇ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಆಗಲಿ, ಯಾವ ಒಂದು ಯೋಜನೆ ಮಂಜೂರು ಆಗಿರುತ್ತದೋ ಅದರ ಬಗ್ಗೆ ರಾಜ್ಯ ಸರ್ಕಾರ ಒಂದು ಮೆಹನತ್ ತೆಗೆದುಕೊಂಡು ಮೊದಲು ತಾವು ಖರ್ಚು ಮಾಡಿ ನಂತರ ಅವರ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರನ್ನೇ ಕಾದು ಕುಳಿತರೆ ಆಗುವುದಿಲ್ಲ. ತಮಗೆ ಉದಾಹರಣೆ ಹೇಳಬೇಕಾದರೆ ಈ ಡ್ರಾಟ್‌ಗೆ 10 ಕೋಟಿ ರೂಪಾಯಿ ಅವರು ಕೊಡುತ್ತೇವೆಂದು ಹೇಳಿದರೂ ಕೂಡ ಒಮ್ಮೆಲೇ ಅದು ಬರುವುದಿಲ್ಲ. ಹಿಂದಿನ ಸರ್ಕಾರದವರು ಈ ಬಗ್ಗೆ ಏನು ಮಾಡುತ್ತಿದ್ದರು ಅನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ಅವರು ಇದಕ್ಕಾಗಿ 5 ಕೋಟಿ ರೂಪಾಯಿ ಕೊಟ್ಟಿದ್ದರೂ ಕೂಡ ನಾವು 13 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಒಂದೊಂದು ವೇಳೆ ನಾವು ಜಾಸ್ತಿ ಹಣ ಖರ್ಚು ಮಾಡಬೇಕಾಗುತ್ತದೆ. ಭೀಕರವಾಗಿ ಬರಗಾಲ ಪರಿಸ್ಥಿತಿ 16 ಜಿಲ್ಲೆಗಳಲ್ಲೂ ಇರುವಾಗ ಕೇಂದ್ರ ಸರ್ಕಾರವನ್ನು ಕಾಯದೇ ರಾಜ್ಯ ಸರ್ಕಾರದ ಹಿತದೃಷ್ಟಿಯಿಂದಲಾದರೂ ತಕ್ಷಣವಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ನಾವು ಇದ್ದಾಗ ಯಾವರೀತಿ ಖರ್ಚು ಮಾಡುತ್ತಿದ್ದೆವು ಅನ್ನುವುದನ್ನು ನೋಡಿ ತಿಳಿದುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.—ನಿಮ್ಮ ಸರ್ಕಾರ ಇದ್ದಾಗಲೇ ಮಳೆ ಬರದೆ ಬರಗಾಲ ಪರಿಸ್ಥಿತಿ ಇದ್ದರೂ ಕೂಡ ಅದರ ಬಗ್ಗೆ ಒಂದು ರಿಪೋರ್ಟ್ ಕೂಡ ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲವಲ್ಲ. ನಾವು ಬಂದ ಮೇಲೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮಂಥಾ ಹಿರಿಯ ಅನುಭವಿಗಳು ಈ ಮಾತು ಹೇಳಿದರೆ ಹೇಗೆ ? ನಮ್ಮ ಸರ್ಕಾರ ಇದ್ದಾಗ ಈ ಬರಗಾಲದ ಬಗ್ಗೆ ಯಾವರೀತಿಯಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೆವು ಅದನ್ನು ತೆಗೆದುನೋಡಿ ಗೊತ್ತಾಗುತ್ತದೆ. ಒಂದೊಂದು ಸಲ ಕೇಂದ್ರದವರು ಇದಕ್ಕೆ ಎಷ್ಟು ಹಣ ಕೊಡುತ್ತಿದ್ದರೋ

ಅದಕ್ಕಿಂತಲೂ ಜಾಸ್ತಿ ಖರ್ಚು ಮಾಡುತ್ತಿದ್ದೇವೆಯೇ ವಿನಃ ಕಡಿಮೆ ಖರ್ಚು ಮಾಡಿಲ್ಲ. ನಾವು ಮೊದಲು ಖರ್ಚು ಮಾಡಿ ನಂತರ ಕೇಂದ್ರದವರನ್ನು ಕೇಳಿ ಹಣವನ್ನು ಸಮತೂಗಿಸಿಕೊಳ್ಳುತ್ತಿದ್ದೆವು. ಹಾಗೆ ಮಾಡದೆ ಹೋದರೆ ರಾಜ್ಯ ಸರ್ಕಾರದ ಹಿತವನ್ನು ಕಾಪಾಡುವುದಕ್ಕಾಗುವುದಿಲ್ಲ. ನಾನು ಇದನ್ನು ರಾಜಕೀಯವಾಗಿ ಹೇಳುವುದಿಲ್ಲ. ಅನೇಕ ವರ್ಷಗಳಿಂದಲೂ ಹಿಂದಿನ ಸರ್ಕಾರ ಇದರ ಬಗ್ಗೆ ಯಾವ ರೀತಿಯಾದ ಒಂದು ನೀತಿಯನ್ನು ಅನುಸರಿಸುತ್ತಾ ಇತ್ತು, ಯಾವ ರೀತಿಯಾಗಿ ನಡೆದುಕೊಂಡು ಬರುತ್ತಾ ಇತ್ತು, ಅದರ ಬಗ್ಗೆ ಸೂಕ್ಷ್ಮವಾಗಿ ಹೇಳಿದ್ದೇನೆ. ನೀವು ಡಿಸೆಂಬರ್‌ವರೆಗೆ ಕೇಂದ್ರ ಸರ್ಕಾರದ ಹಣವನ್ನು ಸುಮಾರು 4 ಕೋಟಿ ರೂಪಾಯಿನವರೆಗೆ ಖರ್ಚು ಮಾಡಿದ್ದೀರಿ. ಬರಗಾಲಕ್ಕೂ ಕೂಡ 4 ಕೋಟಿ ರೂಪಾಯಿ ಖರ್ಚು ಮಾಡಬೇಕಾದರೆ ಅಲ್ಲಿಂದ ಹಣ ಬರಲಿ ಎಂದು ಕಾದು ಕುಳಿತರೆ ಆಗುವುದಿಲ್ಲ. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂನಲ್ಲಿ ಯಾವ ಯೋಜನೆ ಬರುತ್ತದೋ, ನಾನು ಮೊದಲೇ ಹೇಳಿದ ಹಾಗೆ ಮೊದಲೇ ಪೂರ್ವಭಾವಿಯಾಗಿ ಆ ಬಗ್ಗೆ ಕೆಲಸಗಳನ್ನು ತೆಗೆದುಕೊಂಡು ಮಾಡದೇ ಹೋದರೆ ಆ ಕೆಲಸವೂ ಆಗುವುದಿಲ್ಲ, ಆ ಹಣವೂ ಬರುವುದಿಲ್ಲ. ತಮಗೆ ಹೇಳಬೇಕಾದರೆ ಮಂಗಳೂರು ಮೀನುಗಾರಿಕೆ, ಬಂದರು ಇವುಗಳ ಬಗ್ಗೆ ಎಸ್ಟಿಮೇಟ್ ಮಂಜೂರು ಆಗಿದ್ದರೂ ಕೂಡ ಕೇಂದ್ರ ಸರ್ಕಾರದ ಹಣ ಇನ್ನೂ ಬಂದಿಲ್ಲ. ಹಣ ಬಂದಿಲ್ಲ ಎಂದು ಯೋಜನೆ ನಿಲ್ಲಿಸುವುದಾದರೆ ಆ ಕೆಲಸ ಆಗುವುದು ಕಷ್ಟ. ಆದುದರಿಂದ ಆ ಕೆಲಸಗಳನ್ನು ತಕ್ಷಣವೇ ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ಕಳೆದ 3 ವರ್ಷಗಳಿಂದಲೂ ಕೂಡ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂನಲ್ಲಿ ಇರತಕ್ಕಂಥಾ ಕೆಲಸಗಳನ್ನು ತಾವು ತೆಗೆದುಕೊಂಡಿದ್ದೀರಾ ? ನಾನು ಈ ಬಗ್ಗೆ ಅಧ್ಯಯನ ನಡೆಸಿಯೇ ಹೇಳಿದ್ದೇನೆ. ಆ ಬಗ್ಗೆ ಒಂದು ನಯಾ ಪೈಸೇನೂ ಖರ್ಚು ಮಾಡಿಲ್ಲಾ. ಲ್ಯಾಂಡಿಂಗ್ ಫೆಸಿಲಿಟೀಸ್ ಅನ್ನು ಯೂಟಿಲೈಸ್ ಮಾಡಿದ್ದೀರಾ ? ಆ ಹಣವೆಲ್ಲಾ ಲ್ಯಾಪ್ಸ್ ಆಗಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಮತ್ತೊಮ್ಮೆ ಆ ಪುಸ್ತಕವನ್ನು ನೋಡಿ ಅಭ್ಯಾಸ ಮಾಡಿಕೊಂಡರೆ ಒಳ್ಳೆಯದು. ನಾವು ಏನೇನು ಮಾಡಿದ್ದೇವೆ ಅನ್ನುವುದು ಗೊತ್ತಾಗುತ್ತದೆ. ನಾವು ಹೆಚ್ಚು ಆಸಕ್ತಿ ವಹಿಸಬೇಕು, ವಹಿಸದೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. I am highlighting some of the points I am not mixing up any politics. ಮಾನ್ಯ ಆಚಾರ್ಯರವರು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಬಗ್ಗೆ ನಾವು ಏನೂ ಮಾಡಲಿಲ್ಲ ಎಂದು ಹೇಳಿದರು. ಇದು ತಮ್ಮ ಇಗ್ನೋರೆನ್ಸ್ ವಿನಹ ಮತ್ತೇನೂ ಅಲ್ಲ. Please don't accept ignorance.

ಶ್ರೀ ವಿ. ಎಸ್. ಆಚಾರ್ಯ.—ಈಗ ಮೀನುಗಾರಿಕೆ ಇಲಾಖೆ ಇದೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂನಲ್ಲಿ 300 ಕಿಲೋ ಮೀಟರ್ ಅಷ್ಟು ದೂರ ಹೋಗಿ ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವುದು ಇದೆ. ಈ ಬಗ್ಗೆ ನೀವು ಏನೂ ಕೆಲಸ ಮಾಡಿಲ್ಲ. ಲ್ಯಾಂಡಿಂಗ್ ಫೆಸಿಲಿಟೀಸ್‌ನೂ ಮಾಡಿಲ್ಲಾ. ಮಂಗಳೂರು ಮುಲ್ಕಿ ಹೊನ್ನಾವರ ಈ ಕಡೆಗಳಲ್ಲಿ ಫಿಷರ್‌ಮನ್‌ಗೆ ಲ್ಯಾಂಡಿಂಗ್ ಫೆಸಿಲಿಟೀಸ್ ಕೊಟ್ಟಿಲ್ಲ. Karnataka has not availed one naya paise. What is the ignorance about it? This is not born out of ignorance. This is born by facts. ಅದೇ ರೀತಿಯಾಗಿ ನೀವು ಒಂದು ಲಕ್ಷ ಮನೆ ಕಟ್ಟಿದ್ದೇವೆಂದು ಹೇಳಿದಿರಿ. 18 ಸಾವಿರ ಮನೆಯೂ ಕಟ್ಟಿಲ್ಲ. ನಾನು ಬೇಕಾದರೆ ವರದಿ ಕೊಡುತ್ತೇನೆ. ನೀವು ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಅದರಂತೆ ಆ ಹಣವನ್ನು ಸರಿಯಾಗಿ ಯೂಟಿಲೈಸೇಷನ್ ಮಾಡಿದ್ದೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದರೆ ಮೂರು ಲಕ್ಷ ಮನೆಗಳನ್ನು ನಾವು ಕಟ್ಟಿದ್ದೇವೆ. ಕಳೆದ ಮೂರು ತಿಂಗಳಲ್ಲಿ ಬಡವರಿಗೆ ಮನೆಗಳನ್ನು ಕಟ್ಟತಕ್ಕ ಯೋಗ್ಯತೆ ಈ ಸರ್ಕಾರಕ್ಕೆ ಬರಲಿಲ್ಲ.

ಡಾ॥ ವಿ. ಎಸ್. ಆಚಾರ್.—ನಮ್ಮ ಸರ್ಕಾರದವರು ಹೊಸ ಮನೆಗಳನ್ನು ಕಟ್ಟಲಿಲ್ಲವೆಂದು ನಮ್ಮ ಆಕ್ಷೇಪ ಕೂಡ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಸರ್ಕಾರದ ಲ್ಯಾಪ್ಸಸ್‌ನ್ನು ಜಸ್ಟಿಫೈ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಪ್ಪ.—ನೀವು ಅಕ್ರಮವಾಗಿ ಕಟ್ಟಿರತಕ್ಕ ಮನೆಗಳ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದ್ದುದು ನಿಮಗೆ ನೆನಪಿನಲ್ಲಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾಪ ನಿಮ್ಮ ಮುಖ್ಯಮಂತ್ರಿಗಳಿಗೆ ಹಿಂದೂ ಇಲ್ಲ ಮುಂದೂ ಇಲ್ಲ. ಅವರ ಮಾತನ್ನು ಕಟ್ಟಿಕೊಂಡು ನೀವೇನು ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಆ ರೀತಿ ಮಾಡುವ ಜನ ನಾವಲ್ಲ, ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇನ್ನು ಸಹಕಾರಿ ಕ್ಷೇತ್ರದ ಬಗ್ಗೆ ನಾನು ಹೇಳುವುದಾದರೆ, ಈ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ನಾವು ಈ ಕ್ಷೇತ್ರದಲ್ಲಿ ನಾನ್ ಅಫಿಷಿಯಲ್ಸ್ ನಾಮಿನೇಷನ್ ಮಾಡುವುದಿಲ್ಲ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡುತ್ತೇವೆಂದು ಹೇಳಿದವರು ಮಾಡಿದ್ದು ಏನು ? ಮಾತಿನಲ್ಲಿ

ಹೇಳುವುದನ್ನು ಕೃತಿಯಲ್ಲಿ ನಡೆಸುವುದಿಲ್ಲ. ಇವರು ಎಲ್ಲಿ ನೋಡಿದರೂ ಸಹ ನಾನ್ ಅಫಿಷಿಯಲ್ಸ್‌ನ್ನು ತೆಗೆದುಬಿಟ್ಟಿದ್ದಾರೆ. ತಮಗೆ ಅಧಿಕಾರ ಇದೆ ; ಆದ್ದರಿಂದ ಅವರನ್ನು ತೆಗೆದುಬಿಟ್ಟಿದ್ದೀರಿ. ಆದರೆ ಇದೇ ಸಂದರ್ಭದಲ್ಲಿ ತಾವು ತಮಗೆ ಬೇಕಾದವರನ್ನೇ ಅಲ್ಲಿಗೆ ಹಾಕಿದ್ದೀರಿ. ಅವರು ನಿಮ್ಮ ಪಕ್ಷದವರು ಇದ್ದಾರೆ ಇಲ್ಲ ಬಿ. ಜೆ. ಪಿ.ಯವರು ಇರುತ್ತಾರೆ. ತಾವು ಸತ್ಯಹರಿಶ್ಚಂದ್ರರ ರೀತಿಯಲ್ಲಿ ಮಾತನಾಡಿದ ಪ್ರಕಾರ ನೋಡಿದರೆ ಈಗ ಆಗುತ್ತಿರುವುದನ್ನು ಜನ ಕೂಡ ಮೆಚ್ಚುತ್ತಾರೆಯೇ ? ನಿಮ್ಮ ಸಂಬಂಧೀಕರಿಗೆ, ನಿಮ್ಮ ಗೆಳೆಯರಿಗೆ ಈ ಕ್ಷೇತ್ರದಲ್ಲಿ ಹಾಕತಕ್ಕ ಕೆಲಸವನ್ನು ನೀವು ಮಾಡುತ್ತಿದ್ದೀರಿ. ನಿಮ್ಮ ಮಾತು ಏನು, ನಿಮ್ಮ ಕೃತಿ ಏನು ಎಂದು ನಾನು ಮುಖ್ಯಮಂತ್ರಿಗಳನ್ನು ಪ್ರಶ್ನೆ ಮಾಡಬೇಕಾಗಿದೆ. ಕರ್ನಾಟಕ ಅಪೆಕ್ಸ್ ಬ್ಯಾಂಕಿನ ಹಿಂದಿನ ಅಧ್ಯಕ್ಷರು ಹೋದರು. ಅಲ್ಲಿಗೆ ಈಗ ಮತ್ತೊಬ್ಬರನ್ನು ನಾಮಿನೇಷನ್ ಮಾಡಿದ್ದಾರೆ. ಈ ರೀತಿಯಲ್ಲಿ ಮಾಡುವಾಗ ಬ್ಯಾಂಕ್ ಮೇಲೆ ಅಪ್ರೋಚ್ ಕೂಡ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಅಜ್ಜಿಬಾಳ ಹೆಗಡೆಯವರನ್ನು ಅಲ್ಲಿ ಆಧ್ಯಕ್ಷರನ್ನಾಗಿ ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅವರು ಅಲ್ಲಿ ಮೊದಲೇ ಉಪಾಧ್ಯಕ್ಷರಾಗಿದ್ದರು.

ಶ್ರೀ ಎಂ. ವೀರಪ್ಪಮೊಯಿಲಿ.—ಉಪಾಧಕ್ಷರಾಗಿದ್ದ ಮಾತ್ರಕ್ಕೆ ಅಧ್ಯಕ್ಷರಾಗಬೇಕೆಂದು ಏನೂ ಇಲ್ಲ. ಮೊನ್ನೆ ದಾವಣಗೆರೆಯಲ್ಲಿ ಅಲ್ಪಸಂಖ್ಯಾತರ ಒಂದು ಕೋ-ಆಪರೇಟೀವ್ ಬ್ಯಾಂಕ್...

MR. DEPUTY SPEAKER.—I would like to draw your attention to rule 185 of Rules of Procedure and Conduct of Business. It says :

The debate on the Supplementary grants shall be confined to the items constituting the same and no discussion may be raised on the original grants nor policy underlying them...

SRI M. VEERAPPA MOILY.—I am referring to the functioning of a Co-operarive Society. It is very relevent.

MR. DEPUTY SPEAKER.—I just brought to your notice rule 185

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು ಇಲ್ಲಿ ಪುಸ್ತಕವನ್ನೇ ನೋಡಿಕೊಂಡು ವ್ಯವಹಾರವನ್ನು ಮಾಡುವುದಾದರೆ ಕಷ್ಟವಾಗುತ್ತದ. ಸಭೆಯ ನಡವಳಿಕೆಯ ಪರಂಪರೆ ಮತ್ತು ಸಂಪ್ರದಾಯ ಏನು ಇದೆ ಎನ್ನುವುದನ್ನು ಮಾನ್ಯ ಉಪಾಧ್ಯಕ್ಷರು ನೋಡಿದರೆ ಒಳ್ಳೆಯದು. ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಬಾಂಧವರಿಗೆ ಸೇರಿದಂಥ ಒಂದು ಕೋ-ಆಪರೇಟೀವ್ ಬ್ಯಾಂಕ್. ಇವರು ಅನೇಕ ವರ್ಷಗಳಿಂದ ಸಾಕಷ್ಟು ಹಣವನ್ನು ಡಿಪಾಸಿಟ್ ಮಾಡಿಕೊಂಡು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಇದರ ಅಧ್ಯಕ್ಷರು ತರೀಕೆರೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪ್ರಚಾರ ಮಾಡಿದರು ಎನ್ನುವ ಒಂದು ಕಾರಣಕ್ಕಾಗಿ ಸಹಕಾರಿ ಸಚಿವರು ನೇರವಾಗಿ ದಾವಣಗೆರೆಗೆ ಹೋಗಿ ನಂತರ ಬೆಂಗಳೂರಿಗೆ ಬಂದು ಬ್ಯಾಂಕನ್ನು ಸೂಪರ್ ಸೀಡ್ ಮಾಡಿದರು. ಇದು ಫೇವರಿಟಿಸಂ ಅಥವಾ ನೆಪೋಟಿಸಂ ಏನು ಎನ್ನುವುದನ್ನು ಮಾನ್ಯ ಸದಸ್ಯರೇ ಹೇಳಬೇಕು.

ಶ್ರೀ ಕೆ. ಮಲ್ಲಪ್ಪ.—ನಾನು ದಾವಣಗೆರೆಯವನು, ಸರ್ಕಾರದವರು ಈ ಬ್ಯಾಂಕನ್ನು ಸೂಪರ್‌ಸೀಡ್ ಮಾಡಿದಂಥ ಮೂಲ ಉದ್ದೇಶ...

ಶ್ರೀ ಎಂ. ವೀರಪ್ಪಮೊಯಿಲಿ.—ಇವರು ಹೇಳುವ ಮಾತು ಏನು ಮಾಡುವ ಕೃತಿ ಏನು? ಮಾತಿಗೂ ಕೃತಿಗೂ ಹೆಚ್ಚು ಅಂತರ ಇರಬಾರದು. ಮಾತಿನಂತೆ ನಡೆದುಕೊಳ್ಳುವುದಕ್ಕೆ ಇವರ ಕೈಯಲ್ಲಿ ಆಗದಿದ್ದರೆ ಸ್ವಲ್ಪ ಮಾತನಾಡುವುದನ್ನಾದರೂ ನಿಲ್ಲಿಸಬೇಕು. ರಾಜಕೀಯ ಮಾಡಿಕೊಂಡು ಇಲ್ಲಿ ಆಡಳಿತವನ್ನು ನಡೆಸುವುದಾದರೆ ರಾಜ್ಯಕ್ಕೆ ಒಳ್ಳೆಯದಲ್ಲ. ಜನರಿಗೆ ಈ ತರಹ ಅಭಿಪ್ರಾಯಪಡಲಿಕ್ಕೆ ಅವಕಾಶ ಮಾಡಿಕೊಡಬೇಡಿ. ಮಾತೊಂದು ಕಡೆ, ಕೃತಿಯೊಂದು ಕಡೆಯಾಗಿ ಈ ದೇಶದಲ್ಲಿ ಆಡಳಿತ ಮಾಡುವುದಿದ್ದರೆ ತಮ್ಮನ್ನು ಜನ ವಿಶ್ವಾಸದಿಂದ ನೋಡಲಿಕ್ಕೆ, ಖಂಡಿತವಾಗಿಯೂ ಸಾಧ್ಯವಿಲ್ಲ. ಇನ್ನೊಂದು ವಿಚಾರವೆಂದರೆ ಅರ್ಬನ್ ಡೆವಲಪ್‌ಮೆಂಟ್ ಇದರಲ್ಲಿ ಬಿ.ಡಿ.ಎ. ಪ್ರಶ್ನೆಯಿದೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರ 32 ಕೋಟಿ ರೂಪಾಯಿಗಳ ಸೆಲ್ಫ್ ಫೈನಾನ್ಸಿಂಗ್ ಹೌಸಿಂಗ್ ಸ್ಕೀಂನಲ್ಲಿ ತಾವು ಲೆಟರ್‌ಆಫ್ ಇಂಡೆಂಟ್‌ನ್ನು ಇಬ್ಬರಿಗೆ ಇಷ್ಯೂ ಮಾಡಿದ್ದೀರಿ. ಗೋವೆಯಲ್ಲಿರತಕ್ಕಂಥ ಕಂಟ್ರ್ಯಾಕ್ಟರಿಗೆ ಮತ್ತು ಮತ್ತೊಬ್ಬರಿಗೆ ಇಷ್ಯೂ ಮಾಡಿದ್ದೀರಿ. ಇದರ ಬಗ್ಗೆ 40 ಪರ್ಸೆಂಟ್ ಎಸ್. ಆರ್. ರೇಟಿಗಿಂತ ಮತ್ತು ಎಲ್ಲಾ ಷರತ್ತುಗಳಿಗೂ 75 ಪರ್ಸೆಂಟ್ ಜಾಸ್ತಿಯಾಗುತ್ತದೆ ನಿಮ್ಮ ಅವರ ಕಂಟ್ರ್ಯಾಕ್ಟ್. ನನ್ನ ದೃಷ್ಟಿಯಲ್ಲಿ ಇದೊಂದು ದೊಡ್ಡ ಸ್ಕ್ಯಾಂಡಲ್ ಆಗಬಹುದು. ಇರತಕ್ಕ ಕಾನೂನಿನ ಪ್ರಕಾರ ಐದು ಲಕ್ಷ ರೂಪಾಯಿ ಕಾಂಟ್ರ್ಯಾಕ್ಟ್ ಮಾಡಬೇಕಾದರೆ ಅದು ಸೆಕ್ರೆಟರಿಯೇಟ್‌ಗೆ ಬರಬೇಕು. ಸರ್ಕಾರದ ಮಂಜೂರಾತಿಯನ್ನು ಪಡೆಯದೆ ಅವಸರವಸರವಾಗಿ ಬಿ.ಡಿ.ಎ.ಮುಖಾಂತರ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನು ಕಾರಣ ಎಂದು ನಾನು ಒತ್ತಾಯ ಮಾಡಿ ಕೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿಯ

ಸ್ಪಷ್ಟೀಕರಣ ಕೊಟ್ಟ ಹಾಗೆ ಕಾಣಲಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್ ಅವರು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಾಗ "ನಾನು ಪತ್ರಿಕೆಯಲ್ಲಿ ಬಂದಂಥ ವಿಷಯಗಳಿಗೆ ಗಮನ ಕೊಡುತ್ತೇನೆ" ಎಂದು ಹೇಳಿದರು. ಬಿ.ಡಿ.ಎ. ವಿಚಾರದಲ್ಲಿ ಪತ್ರಿಕೆಯಲ್ಲಿ ಸಂಪಾದಕೀಯ ಕೂಡ ಬರೆದಿದ್ದಾರೆ. ಈಗ ಮಾನ್ಯ ಮಂತ್ರಿಗಳು ಏಕೆ ಸುಮ್ಮನಿದ್ದಾರೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ರಂಗನಾಥ್ ಅವರು, ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಇದರ ಬಗ್ಗೆ ಶ್ವೇತಪತ್ರವನ್ನು ಇಡುತ್ತೇನೆಂದು ಹೇಳಿದಾಗ ಸಭೆಯಲ್ಲಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿಯವರೆಗೆ ಮಾನ್ಯ ಸದಸ್ಯರು ಸ್ವಲ್ಪ ಕಾಯಬೇಕು. ನಾವು ವಿಷಯವನ್ನು ನಿರೂಪಣೆ ಮಾಡುವಾಗ ಚರ್ಚೆ ಮಾಡುವಾಗ ಸಂಬಂಧಪಟ್ಟ ವಿಷಯದ ಬಗ್ಗೆ ಅಂಕಿಅಂಶಗಳನ್ನು ತೆಗೆದುಕೊಂಡು ಇಲ್ಲಿ ನಿರೂಪಣೆ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್.—ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಬಂದ ವಿಷಯಕ್ಕೆ ಗೌರವ ಕೊಡುತ್ತೇನೆಂದು ಹೇಳಿದ್ದರು. ಪತ್ರಿಕೆಯಲ್ಲಿ ಇದರ ಬಗ್ಗೆ ಸಂಪಾದಕೀಯ ಬರೆದರೂ ಕೂಡ ಸುಮ್ಮನಿದ್ದಾರೆ.

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ರಂಗನಾಥ್ ಅವರು ಹಿಂದೆ ಸಭಾಧ್ಯಕ್ಷರಾಗಿದ್ದವರು, ಆಗಲೂ ತಮ್ಮನ್ನು ನೋಡಿದ್ದೇನೆ. ಮಂತ್ರಿಗಳಾಗಿದ್ದಾಗಲೂ ನೋಡಿದ್ದೇನೆ, ಲಾಯರ್ ಆಗಿದ್ದಾಗಲೂ ನೋಡಿದ್ದೇನೆ. ಅವರು ವಿಷಯಗಳನ್ನು ಸುತ್ತಿ ಸುತ್ತಿ ಏನನ್ನೋ ಹೇಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಪತ್ರಿಕೆಯಲ್ಲಿ ಬಂದಂಥ ವಿಷಯವನ್ನು ನಾನು ಅಲ್ಲಗಳೆಯುತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ದಾಖಲು ಪತ್ರಗಳನ್ನು ಕೊಡುತ್ತೇವೆ ನಂತರ ಇದರ ಬಗ್ಗೆ ಚರ್ಚೆ ಮಾಡೋಣ, ಇದಕ್ಕೆ ತಮಗೆ ಅವಕಾಶವಿಲ್ಲವೇ ?

ಶ್ರೀ ಕೆ.ಹೆಚ್.ರಂಗನಾಥ್.—ಪತ್ರಿಕೆಯಲ್ಲಿ ಸಂಪಾದಕೀಯ ಬರೆದ ಮೇಲೆ ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕಾದ್ದು ಸರ್ಕಾರದ ಕರ್ತವ್ಯ.

ಶ್ರೀ ಎ.ಲಕ್ಷ್ಮೀಸಾಗರ್.—ತಾವು ಇದನ್ನು ಯಾವುದಾದರೂ ರೂಪದಲ್ಲಿ ತೆಗೆದುಕೊಂಡು ಬನ್ನಿ, ಸಭೆಯಲ್ಲಿ ಪರಿಶೀಲನೆ ಮಾಡೋಣ.

ಶ್ರೀ ಕೆ.ಹೆಚ್.ರಂಗನಾಥ್.—ಮಾನ್ಯ ಮಂತ್ರಿಗಳ ನಿಲುವು ಈಗ ಗೊತ್ತಾಯಿತು.

ಶ್ರೀ ಎಂ.ವೀರಪ್ಪ ಮೊಯಿಲಿ.—ಈ 42 ಕೋಟಿ ರೂಪಾಯಿಗಳ ಸೆಲ್ಫ್ ಫಿನಾನ್ಸಿಂಗ್ ಸ್ಕೀಂ ಏನು ಇದೆ ಇದು ಮುಂದೆ ನೂರು ಕೋಟಿ ರೂಪಾಯಿಗಳವರೆಗೂ ಹೋಗುವ ಸಂದರ್ಭ ಇದೆ. ಇದು ನಿಮ್ಮ ದೊಡ್ಡ ಸ್ಕ್ಯಾಂಡಲ್ ಎಂದು ನಾನು ಹೇಳುತ್ತೇನೆ.

This may be in a decade. This may be the biggest scandal.

ಶ್ರೀ ಹೆಚ್.ಡಿ.ದೇವೇಗೌಡ.—ಏಕೆ ಸ್ಕ್ಯಾಂಡಲ್ ಎಂದು ಹೇಳುತ್ತೀರಿ ? He is prepared for any type of enquiry. Let me be ver plain on this issue. We are not prepared to shirk the responsibility. In case if there is any scandal we are prepared to hold an enquiry.

SRI M.VEERAPPA MOILY —This is welcome. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ದಯವಿಟ್ಟು ಸದನಕ್ಕೆ ಹೇಳಿ, ಹೇಳಲಿಕ್ಕೆ ಏಕೆ ಅಂಜುತ್ತೀರಿ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಸಾರ್ವಜನಿಕರ ಗಮನಕ್ಕೆ ಕೊಡಬೇಕು ; ಕೊಡುವ ಅವಶ್ಯಕತೆ ಇದೆ ; ಇದರ ಬಗ್ಗೆ ಹೆಚ್ಚು ಸಮಯ ತೆಗೆದುಕೊಳ್ಳಬೇಡಿ.

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೆ, ಬಿ.ಡಿ.ಎ.ಗೆ ಸಂಬಂಧಪಟ್ಟ ವಿವರಗಳನ್ನು ಶ್ವೇತ ಪತ್ರದ ಮೂಲಕ ಪ್ರಕಟಣೆ ಮಾಡುತ್ತೇವೆಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ಒಂದು ಶ್ವೇತ ಪತ್ರ ಬರಲಿ. ಆ ಸಮಯದಲ್ಲಿ ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದಕ್ಕೆ ಅರ್ಹರಾಗಿದ್ದಾರೆ ; ಅವರಿಗೆ ಅವಕಾಶವಿರುತ್ತದೆ. ಈಗ ಪದೇ ಪದೇ ಏನೋ ನಡೆಯುತ್ತಾ ಇದೆ ಎಂದು ಹೇಳತಕ್ಕಂಥ ಮುಸುಕಿನಲ್ಲಿ ಗುದ್ದಾಟ ಏಕೆ. ಯಾವ ಒಂದು ಅಕ್ರಮ ನಡೆದರೂ ಅದರ ಬಗ್ಗೆ ಕಾನೂನುಬದ್ಧವಾದಂಥ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದಾರೆ, ನಾನೂ ಹೇಳುತ್ತಾ ಇದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್.—ಶ್ವೇತಪತ್ರ ಪ್ರಕಟಣೆ ಮಾಡುವ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆಮೇಲೆ ಮೇಲ್ಮನೆಯಲ್ಲಿ ಪ್ರಸ್ತಾಪವಾಗಿದೆ. ತದನಂತರ ಪತ್ರಿಕೆಯಲ್ಲಿ ಅಗ್ರಲೇಖನ ಬರೆದಿದ್ದಾರೆ. ಇಷ್ಟಾದರೂ ಕೂಡ, 10-15 ದಿವಸ ಆದರೂ ಕೂಡ ಈ ಒಂದು ಐಟಂ ಬಗ್ಗೆ ವಿಚಾರಣೆ ನಡೆದಿದೆಯೋ ಎನ್ನತಕ್ಕಂಥಾದ್ದನ್ನು ಈ ಸಭೆಗೆ ತಿಳಿಸಬೇಕಾಗಿತ್ತು. ತಾವಾಗಿಯೇ ಸ್ಟೇಟ್‌ಮೆಂಟ್ ಮಾಡಿದರೆ ಇನ್ನೂ ಗೌರವ ಘನತೆ ಜಾಸ್ತಿಯಾಗುತ್ತದೆ.

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ರಂಗನಾಥ್‌ರವರು ಬಹಳ ಆಶ್ಚರ್ಯವಾದಂಥ ವಿಷಯವನ್ನು ಹೇಳುತ್ತಾ ಇದ್ದಾರೆ. ಪತ್ರಿಕೆಯಲ್ಲಿ ಅಗ್ರಲೇಖನ ಬರೆದರೆ ಸರ್ಕಾರ ಒಂದು ಹೇಳಿಕೆ ಕೊಡಬೇಕು, ಏನು

ಸ್ವಾಮಿ ಇದು ?

ಶ್ರೀ ಕೆ.ಹೆಚ್.ರಂಗನಾಥ್.—ನಾವು ವಾದಕ್ಕೆ ಇಳಿಯುವುದಿಲ್ಲ. ತಮ್ಮ ಅಭಿಪ್ರಾಯ ಜನಕ್ಕೆ ಗೊತ್ತಾಗಲಿ.

ಒಬ್ಬ ಮಾನ್ಯಸದಸ್ಯರು.—ಒಂದು ಕಾಲದಲ್ಲಿ ಪತ್ರಿಕೆಯಲ್ಲಿ ಬಂದಿದ್ದು ಸುಳ್ಳು ಎಂದು ಹೇಳುತ್ತಿದ್ದವರು ಈಗೇಕೆ ಅದರ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್.—ಆಪಾದನೆ ನಮ್ಮ ಮೇಲೆ ಇದೆ, ಸರಿ ಎಂದು ಹೇಳುವವರು ಏಕೆ ಹೀಗೆ ಮಾಡುತ್ತಿದ್ದೀರಲ್ಲ ?

ಶ್ರೀ ಎ.ಲಕ್ಷ್ಮೀಸಾಗರ್.—ಮುಸುಕಿನಲ್ಲಿ ಗುದ್ದಾಟ ಏಕೆ.

ಶ್ರೀ ಕೆ.ಹೆಚ್.ರಂಗನಾಥ್.—ಮುಸುಕಿನಲ್ಲಿ ಗುದ್ದಾಟ ಎಂದು ಹೇಳುತ್ತಾ ಇದ್ದಾರೆ.

ಶ್ರೀ ಎಂ.ವೀರಪ್ಪ ಮೊಯ್ಲಿ.—ಇನ್ನು ಐಟಂ ನಂಬರ್ 42 ತಿಂಕ್‌ಟ್ಯಾಂಕ್. ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಪ್ರಸ್ತಾವವಾಗಿದೆ. ಇದರ ಬಗ್ಗೆ ನಾನು ಹಿಂದೆ ಪ್ರಸ್ತಾಪ ಮಾಡಿದ ಮೇಲೆ ಕೆಲವು ಘಟನೆಗಳು ನಡೆಯಿತು. ಮಿಸ್ಟರ್ ಬುಶ್ ಅವರನ್ನು ಎರಡನೇ ತಾರೀಖು ಆಹ್ವಾನಿಸಿದ್ದಾರೆ. ಇವರಿಗೆ ಅಡ್ವೈಸ್ ಮಾಡಲು 4 ಜನ ಅಡ್ವಾನ್ಸ್ ಪಾರ್ಟಿ ಇವತ್ತು ಅಥವಾ ನಿನ್ನೆ ಮೊನ್ನೆಯೋ ಬಂದಿರಬೇಕು. ಈ 4 ಜನ ಅಡ್ವಾನ್ಸ್ ಪಾರ್ಟಿ To advise Mr.Buch who in turn will advi:e Think tank 4 persons advance party has come. So, Mr Buch requires the services of 4 people to advise him. ಯುನೈಟೆಡ್ ಸ್ಟೇಟ್ಸ್ ಪ್ರೆಸಿಡೆಂಟ್ ಬಂದರೆ ಅವರ ಮುಂದೆ ನಾಲ್ಕೈದು ಜನ ಅಡ್ವಾನ್ಸ್ ಪಾರ್ಟಿ ಬರುತ್ತಾರೆ.

ಶ್ರೀ ಎಂ.ಎಸ್.ಕೃಷ್ಣನ್.—ನಿಮ್ಮ ಸಿ.ಐ.ಡಿ. ಸಿಸ್ಟಂ ಚೆನ್ನಾಗಿದೆ, ಅವರ ನಕ್ಷತ್ರ, ಗೋತ್ರ ಎಲ್ಲಾ ಚೆನ್ನಾಗಿ ಗೊತ್ತಿದೆ.

MR.DEPUTY SPEAKER.—It is out of the subject.

SRI M.VEERAPPA MOILY,—No, it is not out of the subject. There is reference for Think Tank in Demand Number 42. There fore, I mentioned about it. ಅಮೇರಿಕ ಅಧ್ಯಕ್ಷರು ಬಂದರೆ ಮೊದಲು ಒಂದು ಪಾರ್ಟಿಯನ್ನು ಕಳಿಸುವುದು, ಏತಕ್ಕೆಂದರೆ ಅವರು ಎಲ್ಲಾ ವಿಚಾರಮಾಡಿಕೊಂಡು ಸರಿಯಾದ ವೇದಿಕೆ ತಯಾರು ಮಾಡಲಿ ಎಂದು. ಮಿಸ್ಟರ್ ಬುಶ್ ಅಂತಹವರು ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂದು ತಿಳಿದುಕೊಂಡಿದ್ದಾರೆ ತಿಂಕ್ ಟ್ಯಾಂಕ್ ಬಗ್ಗೆ ಅಡ್ವೈಸ್ ಮಾಡಲು ಹೊರಗಡೆಯಿಂದ ಕರೆಸುತ್ತಾ ಇದ್ದಾರೆ. ಇಲ್ಲಿ ಅಂತಹವರಿಲ್ಲ ಎನ್ನುವ ಅಭಿಪ್ರಾಯವಿದೆ. ಅಲ್ಲದೆ ಬುಶ್ ಅವರಿಗೆ ಅಡ್ವೈಸ್ ಮಾಡತಕ್ಕಂಥ ಪರಿಣಿತರು ಕರ್ನಾಟಕ ರಾಜ್ಯದಲ್ಲಿ ಇಲ್ಲವೇ ? ಇಲ್ಲದೇ ಇದ್ದರೆ, MR.Buch could have sought the assistance of the town planners here. 4 ಜನ ಬರುವುದು, ಅವರಿಗೆ ಬೇಕಾದಂಥ ಬ್ಯಾಕ್ ಗ್ರೌಂಡ್ ಪೇಪರ್ಸ್ ತಯಾರು ಮಾಡುವುದು ಏನು ? ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾನು ಒಪ್ಪುತ್ತೇನೆ. ಪೂರಕ ಬಡ್ಜೆಟ್‌ನಲ್ಲಿ ಮಾರ್ಚಿ 1983ರೊಳಗೆ 50 ಸಾವಿರ ರೂಪಾಯಿಗಳನ್ನು ತಿಂಕ್‌ಟ್ಯಾಂಕ್‌ಗೆ ಇಟ್ಟುಬಿಟ್ಟಿದ್ದಾರೆ. 50 ಸಾವಿರ ರೂಪಾಯಿಗಳನ್ನು ಒಂದು ಮೀಟಿಂಗ್‌ಗೆ ಖರ್ಚು ಮಾಡುತ್ತೀರಿ ಎಂದು ನಾನು ಆಪಾದನೆ ಮಾಡಿದೆ. ಆಗ ಸುಮ್ಮನೆ ಎದ್ದು ಆಪಾದನೆ ಮಾಡುತ್ತಿದ್ದೀರಿ ಎಂದು ಹೇಳಿದರು. ಮಾರ್ಚ 31ರೊಳಗೆ ಆಗುವಂಥ ಮೀಟಿಂಗಿಗೆ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಮತ್ತೊಂದು ಹೆಲಿಕ್ಯಾಪ್ಟರ್ ವಿಚಾರ ಮಾಡಿದ್ದೀರಿ. ಇದು ಒಂದು ರೀತಿಯ ಹೆಲಿಕ್ಯಾಪ್ಟರ್ ಆಗಿಬಿಟ್ಟಿದೆ. ಒಂದು ಮೀಟಿಂಗಿಗೆ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಬಾಂಬೆ, ಡೆಲ್ಲಿಯಿಂದ ಬರತಕ್ಕಂಥ ಒಂದು ಪರಿಪಾಠ ಇಟ್ಟುಕೊಂಡಿದ್ದೀರಿ. ಇದು ನಿಜವಾಗಿಯೂ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ತಿಂಕ್‌ಟ್ಯಾಂಕ್‌ನ ಸ್ವರೂಪದಿಂದ ಇದ್ದಂತ ಪ್ಲಾನಿಂಗ್ ಡಿಪಾರ್ಟ್‌ನ ಸಂಪೂರ್ಣವಾದ ಸತ್ವವನ್ನು ಹೀರತಕ್ಕಂಥ ಪ್ರಯತ್ನ ಒಂದು ಕಡೆ ನಡೆದರೆ, ಮತ್ತೊಂದು ಕಡೆ ನಮ್ಮ ಕರ್ನಾಟಕ ರಾಜ್ಯದಲ್ಲಿ Intellectuals ಯಾರಿದ್ದಾರೆ ಅವರಿಗೆ ದೊಡ್ಡ ಡೀಮಾರಲೈಸೇಷನ್ ಮಾಡತಕ್ಕಂಥ ಒಂದುಪ್ರಯತ್ನ ಆಗುತ್ತಿದೆಯೆಂದು ನಾನು ಈಸರ್ಕಾರದ ಮೇಲೆ ಆಪಾದನೆ ಮಾಡಲಿಕ್ಕೆ ಇಚ್ಛಿಪಡುತ್ತಾ ಇದ್ದೇನೆ.

ಇನ್ನು ಅನೇಕ ಕಮಿಷನ್ಸ್ ಆಫ್ ಎನ್‌ಕ್ವೈರಿ ನಡೆದಿದೆ. ಕಡೂರು ಕಮಿಷನ್ ಆಯಿತು. ಬೆಂಗಳೂರು ಯೂನಿವರ್ಸಿಟಿ ವೈಸ್‌ಛಾನ್ಸಲರ್ ಬಗ್ಗೆ ವಿಚಾರಣೆ ಆಯಿತು. ಇನ್ನೂ ಅನೇಕ ರೀತಿಯ ವಿಚಾರಣೆಯಾಗಿದೆ. ಯಾವುದೇ ಒಂದು ವಿಚಾರಣೆ ಬಗ್ಗೆಯೂ ಕೂಡ ಯಾವುದೇ ಒಂದು ರೀತಿಯಾದ ಕಾರ್ಯಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿಲ್ಲ. ಅಂದಮೇಲೆ ಈಗ ಏನು ಈ ಒಂದು ಹೆಚ್ಚು ಹಣವನ್ನು ಕೊಡುತ್ತಾ ಇದ್ದೀವೆ ಇದನ್ನು ಸರಿಯಾಗಿ ಉಪಯೋಗ ಮಾಡುತ್ತೀರಿ ಎನ್ನುವುದನ್ನು ಯಾವ ರೀತಿಯಿಂದ ಸಾಬೀತು ಮಾಡಲಿಕ್ಕೆ ತಯಾರಿದ್ದೀರಿ ಎಂದು ಕೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಬಳ್ಳಾರಿ ಘಟನೆ ಬಗ್ಗೆ ವಿಚಾರಣೆ ಮಾಡುವುದಾಗಿ ಹೇಳಿದಿರಿ. Junior-most District Judge has

has been appointed as the Enquiry Commission. ಜೂನಿಯರ್ ಮೋಸ್ಟ್ ಹೈಕೋರ್ಟ್ ಜಡ್ಜನ್ನು ಇವರು ಕೇಳಿದ್ದಾರೆ. ಹೈಕೋರ್ಟ್ ಜಡ್ಜ್ ಮಟ್ಟದ ಅಧಿಕಾರಿಯಿಂದ ನ್ಯಾಯಾಂಗ ವಿಚಾರಣೆ ಮಾಡಿಸುತ್ತೇವೆ ಎಂದು ಬಳ್ಳಾರಿಯಲ್ಲಿ ಭರವಸೆ ಕೊಟ್ಟಿದ್ದರು. ಇವತ್ತಿನ ದಿವಸ ಯಾವ ಹೈಕೋರ್ಟ್ ಜಡ್ಜೂ ಕೂಡ ವಿಚಾರಣೆ ಮಾಡಲಿಕ್ಕೆ ಬರುವುದಿಲ್ಲ.

Sri A. LAKSHMI SAGAR.—There is no such declaration by the declaration by the Government that the High Court Judge will constitute the Commission of Enquiry, All that was said was that there will be a judicial enquiry into the Bellary incident.

Sri, M. VEERAPPA MOILY,—You can back out from that.

Sri A. LAKSHMI SAGARr—Please refer to the press statements........

ಶ್ರೀ ಎಂ.ವೀರಪ್ಪ ಮೊಯಿಲಿ.—ಈ ಬಗ್ಗೆ ಹೈಕೋರ್ಟಿಗೆ ಏನು ಬೇಡಿಕೆ ಕಳಿಸಿದಿರಿ ಅದನ್ನು ದಯಮಾಡಿ ಕೊಡಬೇಕು. ಯಾವುದೇ ಹೈಕೋರ್ಟ್ ನ್ಯಾಯಾಧೀಶರು ನ್ಯಾಯಾಂಗ ವಿಚಾರಣೆಗೆ ಬರಲಿಕ್ಕೆ ತಯಾರಿಲ್ಲ. ಏಕೆಂದರೆ, ಕಡೂರು ಕಮಿಷನ್ ಮತ್ತು ದೇಸಾಯಿ ಕಮಿಷನ್ ವರದಿಗಳನ್ನು ಯಾವ ರೀತಿ ಪರಿಗಣನೆ ಮಾಡಿದ್ದೀರಿ ಎನ್ನುವುದು ಸಾಬೀತಾಗಿದೆ. ಹೈಕೋರ್ಟ್ ನ್ಯಾಯಾಧೀಶರನ್ನು ನ್ಯಾಯಾಂಗ ತನಿಖೆಗೆ ಕೊಡಲಿಕ್ಕೆ ಅವರು ಸಿದ್ಧರಿಲ್ಲ. ಇದರಿಂದ ಸಮಾಜಕ್ಕೆ ನ್ಯಾಯ ಸಿಗಲಿಕ್ಕೆ ಸಾಧ್ಯವಿಲ್ಲ ಎನ್ನುವ ವಿಚಾರವನ್ನು ಇಡುತ್ತಿದ್ದೇನೆ. ಇನ್ನು ವಿಜಿಲೆನ್ಸ್ ಕಮಿಷನ್ ಬಗ್ಗೆ ಮಾನ್ಯ ದೇವೇಗೌಡರು. ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ಲಕ್ಷ್ಮೀಸಾಗರ್‌ರವರು ವಿರೋಧ ಪಕ್ಷದಲ್ಲಿದ್ದಾಗ ಸಾಕಷ್ಟು ಮಾತನಾಡುತ್ತಿದ್ದರು. ವಿಜಿಲೆನ್ಸ್ ಕಮಿಷನ್‌ನಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ, ಅವರಿಗೆ ದಾಖಲೆಗಳನ್ನು ಕೊಡುತ್ತಾ ಇಲ್ಲ ಎಂದು. ಇವತ್ತು ನಾನು ಕೇಳುತ್ತಾ ಇದ್ದೇನೆ. ಕೆಲವು ದಿವಸಗಳ ಹಿಂದೆ ಪತ್ರಿಕೆಯಲ್ಲಿ ಮುಖಪುಟದಲ್ಲಿ ಲೇಖನ ಕೂಡ ಬಂತು. ಯಾವುದೇ ಪ್ರಸಂಗದಲ್ಲಿ ಯಾವುದೇ ದಾಖಲೆಯನ್ನು ಕೇಳಿದರೆ ಕೊಡುತ್ತಾ ಇಲ್ಲ ಎಂದು.

ಶ್ರೀ ಹೆಚ್.ಡಿ.ದೇವೇಗೌಡ.—ನಾವು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡುವಾಗ ಹೀಗೆ ಹೇಳಿದರು ಎಂದು ಹಾಗೆಲ್ಲಾ ಹೇಳಿದರೆ ಆಗುವುದಿಲ್ಲ. ಸ್ಪೆಸಿಫಿಕ್ಕಾಗಿ ಯಾವ ಇಲಾಖೆ ಫೈಲನ್ನು ಡಿನೈ ಮಾಡಿದ್ದೇವೆಂದು ಹೇಳಿ, We are prepared to face the consequences in the House.

Sri M.VEERAPPA MOILY.—I am sorry. You verify it, it is in your custody.

SRI H.D DEVEGOWDA,—Now, you are talking about judical enquiry reports I want know how many vigilence commission enquiry reports were placed on the table of the House in your regime?

ಶ್ರೀ ಎಂ.ವೀರಪ್ಪ ಮೊಯ್ಲಿ.—ತಾವು ಏನು ಮಾಡುತ್ತಿದ್ದೀರಿ ಎಂಬುದು ಗೊತ್ತಿದೆ ಸ್ವಾಮಿ.

SRI H D.DEVEGOWDA.—We don't spare anybody here. What happened to Hombe Gowda Case?

ಶ್ರೀ ಎಂ.ವೀರಪ್ಪ ಮೊಯ್ಲಿ.—ಜುಡಿಶಿಯಲ್ ರಿಪೋರ್ಟ್ ಬಗ್ಗೆ ಯಾವ ಪ್ರಸಂಗದಲ್ಲಿ ತಾವು ಕಠಿಣವಾದ ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ? ನ್ಯಾಯಾಂಗ ವಿಚಾರಣೆಯನ್ನು ಬದಿಗಿರಿಸಿ ಇವತ್ತಿನ ದಿವಸ ಯಾವುದೇ ಕಾರ್ಯಕ್ರಮವನ್ನು ನೀವು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ.

ಹೆಚ್. ಡಿ. ದೇವೇಗೌಡ.—ನೀವು ಕರೆಕ್ಟ್ ಮಾಡಬೇಕಾಗಿಲ್ಲ...

SRI M.VEERAPPA MOILY.—I know you are incorrigible. There is no quest on of correcting. We can correct people who could be corrected. ಆದುದರಿಂದ ನೀವು ಎಲ್ಲವನ್ನೂ ರಾಜಕೀಯದಿಂದ ನೋಡಿ, ಆ ರೀತಿಯಾಗಿ ನೀವು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಾದರೆ...

ಶ್ರೀ ಎ.ಲಕ್ಷ್ಮೀಸಾಗರ್.—ಸ್ಪೆಸಿಫಿಕ್ ಆಗಿದ್ದರೆ ಹೇಳಿ...

ಶ್ರೀ ಎಚ್.ಡಿ.ದೇವೇಗೌಡ.—ನೀವು ಏನೋ ಒಂದು ಸಮಾಧಾನಕ್ಕೆ ಮಾತನಾಡಬೇಕಾದ್ದು ಇಲ್ಲ. ಕಾನ್‌ಷಿಯಸ್‌ನಿಂದ ಮಾತನಾಡಬೇಕಾಗುತ್ತದೆ....

SRI M.VEERAPPA MOILY.—Your conscience has been blurred....

SRI H.D.DEVEGOWDA.—When you are making a baseless allegation, we should say it is baseless.

ಶ್ರೀ ಎಂ.ವೀರಪ್ಪ ಮೊಯ್ಲಿ.—ಇವತ್ತು ನೀವು ವಿಜಿಲೆನ್ಸ್ ಕಮಿಷನ್‌ರವರಿಗೆ ಯಾವುದೇ ವಿಧವಾ

ದಂಥ ಸಹಕಾರವನ್ನು ಕೊಡುತ್ತಿಲ್ಲ. ಯಾವುದೇ ಒಂದು ದಾಖಲೆಯನ್ನು ಕೇಳಿದಾಗ ಅದನ್ನು ಕೊಡದೇ ಇರತಕ್ಕಂಥ ಪ್ರಸಂಗ ನಡೆದಿದೆ. ಅದರ ಬಗ್ಗೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅಂಥದರ ಬಗ್ಗೆ ತಾವು ಏನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಮಲ್ಲಪ್ಪ.—ಮಾನ್ಯ ಶ್ರೀ ವೀರಪ್ಪಮೊಯ್ಲಿಯವರು ನುರಿತ ರಾಜಕಾರಣಿಗಳು. ಅವರು ಎರಡು ಸಾರಿ ಮಂತ್ರಿಗಳಾಗಿದ್ದರು. ಯಾವುದಾದರೂ ವಿಷಯದ ಬಗ್ಗೆ ಚಾರ್ಜಸ್ ಮಾಡುವ ಹಾಗಿದ್ದರೆ ಸ್ಪೆಸಿಫಿಕ್ ಆಗಿ ಹೇಳಲಿ. ಸುಮ್ಮನೇ ಜನರಲೈಜ್ ಮಾಡುತ್ತಾ ಹೋಗುವುದು ಸರಿಯಲ್ಲ. ಅವರು ಒಳ್ಳೆಯ ಪಾರ್ಲಿಮೆಂಟೇರಿಯನ್ ಎಂಬುದು ನನಗೆ ಗೊತ್ತಿದೆ. ಆದುದರಿಂದ ಅವರು ಜನರಲೈಜ್ ಮಾಡಿ ಹೇಳುವುದಕ್ಕಿಂತ ಸ್ಪೆಸಿಫಿಕ್ ಆಗಿ ಹೇಳಿದರೆ ನಮ್ಮ ಸರ್ಕಾರದ ನ್ಯೂನತೆಗಳೇನು ಎಂಬುದು ನಮಗೂ ಗೊತ್ತಾಗುತ್ತದೆ. ಆಗ ನಾವು ಸಹ ಸರ್ಕಾರಕ್ಕೆ ತಿಳಿಯಹೇಳಬಹುದಾಗಿದೆ; ನಾವು ಅವರಿಗೆ ಸಹಕಾರ ಕೊಡಬಹುದು. ಅದನ್ನು ಬಿಟ್ಟು ಸುಮ್ಮನೇ ಜನರಲೈಜ್ ಮಾಡಿ ಹೇಳುತ್ತಾ ಹೋದರೆ ಅವರ ಬುದ್ಧಿಶಕ್ತಿ, ಬುದ್ಧಿವಂತಿಕಗೆ ಅದು ಸರಿಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯ್ಲಿ.—ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ವಿಜಿಲೆನ್ಸ್ ಕಮಿಷನನ್ನು ನಿಷ್ಕ್ರಿಯತೆ ಮಾಡಿದ್ದಾರೆಂದು ನಾನು ಹೇಳುತ್ತಿದ್ದೇನೆ...

ಶ್ರೀ ಎಚ್.ಡಿ.ದೇವೇಗೌಡ.—ನಿಮಗೆ ಏನಾದರೂ ಅವರು ಅರ್ಜಿ ಬರೆದಿದ್ದಾರೆಯೇ, ಮನವಿ ಕೊಟ್ಟಿದ್ದಾರೆಯೇ ಹೇಳಿ ಸ್ವಾಮಿ.

ಶ್ರೀ ಎಂ.ವೀರಪ್ಪಮೊಯ್ಲಿ.—ನಮಗೆ ಅರ್ಜಿ ಬರೆಯಬೇಕಾದ ಪ್ರಮೇಯವಿಲ್ಲ.

ಶ್ರೀ ಎಚ್.ಡಿ.ದೇವೇಗೌಡ.—ಹಾಗಾದರೆ ಅದು ಗಾಳಿ ಗೋಪುರದ ಮಾತಾಗುತ್ತದೆ, ಅದಕ್ಕೆ ನಾವು ಗಾಳಿಗೋಪುರದ ಉತ್ತರವನ್ನು ಕೊಡಬೇಕಾಗುತ್ತದೆ. I once again say, when you make a baseless allegation, I should say it is baseless and there is no other go.

Sri M.VEERAPPA MOILY.—It is very easy to say so. It is for them....

ಶ್ರೀ ಪಿ.ರಾಮದೇವ್.—ಮಾನ್ಯ ಶ್ರೀ ವೀರಪ್ಪಮೊಯ್ಲಿಯವರು ಏನು ಪತ್ರಿಕೆಯಲ್ಲ ಬಂದಿದೆ ಎಂದು ಹೇಳುತ್ತಿದ್ದಾರೆ, ಮಾರ್ಚ್ 25ರ ಟೈಮ್ಸ್ ಆಫ್ ಡೆಕ್ಕನ್‌ಲ್ಲಿ ಬಂದಿದೆ. ಅದು ಈ ರೀತಿಯಾಗಿದೆ.

GOVERNMENT HAMPERING THE PROBE

> "State Vigilance Commission has complained to the state Government which has promised to root out corruption is not co-operating with the enquiry to the allegation against some top officials especially some Chief Engineer of the Public Works Department."

ಎನ್ನತಕ್ಕದ್ದು ಬಂದಿದೆ. ಇದು ಕೇವಲ ಪತ್ರಿಕೆಯ ವರದಿ ಅಷ್ಟೆ. ತಾವು ಅನೇಕ ಸಾರಿ ರೂಲಿಂಗ್ ಕೊಟ್ಟಿದ್ದೀರಿ ಪತ್ರಿಕೆಯ ವರದಿಮೇಲೆ ಮಾತನಾಡತಕ್ಕದ್ದು ಸರಿಯಲ್ಲವೆಂದು. ಸ್ಪೆಸಿಫಿಕ್ ಆಗಿ ಇಂಥಿಂಥ ಇಂಜಿಯರ್ ಎಂದು ಹೇಳಿಲ್ಲ. ಆದುದರಿಂದ ಪತ್ರಿಕಾ ವರದಿಯ ಮೇಲೆ ಮಾತನಾಡುವುದು ಸರಿಯಲ್ಲ.

ಶ್ರೀ ಎಚ್.ಡಿ.ದೇವೇಗೌಡ.—ಚೀಫ್ ಇಂಜಿನಿಯರ್‌ರವರು ಎನ್‌ಕ್ವೈರಿಗೆ ಸಂಬಂಧಪಟ್ಟ ರಿಕಾರ್ಡ್ ಕೊಟ್ಟಿಲ್ಲ ಎಂದು ಪತ್ರಿಕೆಯಲ್ಲಿ ಬಂದಿದೆ. ಅದು ಶ್ರೀ ವೀರಪ್ಪ ಮೊಯ್ಲಿಯವರ ಪತ್ರಿಕೆಯಲ್ಲಿ ಬಂದಿದೆ. ಅದು ನನಗೆ ಗೊತ್ತಿರಲಿಲ್ಲ.

ಶ್ರೀ ಎಂ.ವೀರಪ್ಪ ಮೊಯ್ಲಿ.—ನಿಮ್ಮ ಪತ್ರಿಕೆ ಯಾವುದು ?

ಶ್ರೀ ಎಚ್.ಡಿ.ದೇವೇಗೌಡ.—ನನ್ನ ಪತ್ರಿಕೆ ಯಾವುದೂ ಇಲ್ಲ. ನಾನು ಯಾವುದಾದರೂ ಹಣ ಕಲೆಕ್ಟ್ ಮಾಡಿ ಪತ್ರಿಕೆಯನ್ನು ನಡೆಸಿದಾಗ ನೋಡೋಣ...ನಾನು ಈ ಎರಡೂವರೆ ತಿಂಗಳ ಅಧಿಕಾರದ ಅವಧಿಯಲ್ಲಿ ಯಾವುದೇ ಒಬ್ಬ ಅಧಿಕಾರಿ ಎನ್‌ಕ್ವೈರಿ ಬಗ್ಗೆಯಾಗಲೀ ಯಾವನೇ ಚೀಫ್ ಇಂಜಿನಿಯರ್‌ಗೆ ಸಂಬಂಧಪಟ್ಟ ಎನ್‌ಕ್ವೈರಿ ಕಾಗದ ಪತ್ರಗಳನ್ನು ಕಳುಹಿಸಿಲ್ಲವೆಂದು ಹೇಳುವುದಾದರೆ ನಾನು ಇಲ್ಲಿ ಒಂದು ನಿಮಿಷವೂ ನಿಲ್ಲುವುದಕ್ಕೆ ತಯಾರಿಲ್ಲ.

As a Minister I do not want to stay here even for a minute.

Sri A. LAKSHMISAGAR —Wild and baseless allegations should not be made here. If he has got any specific instance, let it be placed on the table of the House. We shall enquire into it and necessary action would be initiated. There is no point in simply talking like this.

ಶ್ರೀ ಕೆ. ಜಿ. ಪರಮೇಶ್ವರಪ್ಪ.—ಮಾನ್ಯ ಶ್ರೀ ಮೊಯ್ಲಿಯವರೆ ಯಾವ ಹೈಕೋರ್ಟ್ ನ್ಯಾಯಾಧೀಶರೂ ಸಹ ನ್ಯಾಯಾಂಗ ತನಿಖೆಗೆ ಒಪ್ಪುತ್ತಿಲ್ಲ ಎನ್ನುವುದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೈಕೋರ್ಟ್ ಜಡ್ಜ್‌ಗಳು ಒಪ್ಪುತ್ತಿಲ್ಲವೆಂದು ತಾವು ಹೇಳುತ್ತಿದ್ದೀರಿ ? ಯಾವ ಆಧಾರದ ಮೇಲೆ ತಾವು ಹೇಳುತ್ತಿದ್ದೀರಿ ? ತಮಗೆ ಯಾರಾದರೂ ಕಾಗದ ಬರೆದಿದ್ದಾರೆಯೇ ? ತಾವು ಅರ್ಥ ಮಂತ್ರಿಗಳಾಗಿದ್ದವರು ಸರ್ಕಾರ ನಡೆಸಿದವರು ; ಹೀಗೆ ಹೇಳಿದರೆ ಹೇಗೆ ಸ್ವಾಮಿ ? ತಾವೇ ಹೇಳಿ...

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಕಾನೂನು ಮಂತ್ರಿಗಳವರೂ ಸಹ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ ; ಅವರಿಗೂ ಗೊತ್ತಿದೆ. ನಮಗೆ ನ್ಯಾಯಾಧೀಶರು ಇಲ್ಲವೇ ಬೇರೆ ಯಾರಾದರೂ ಜಡ್ಜ್‌ಗಳು ಪತ್ರ ಬರೆದೇ ತಿಳಿಸಬೇಕೇ ? ಬೇರೆ ಬೇರೆ ರಿಸೋರ್ಸ್‌ಸ್ ಇರುವುದಿಲ್ಲವೇ ? ನಾನು ನೇರವಾಗಿ ಪಿ.ಡಬ್ಲ್ಯು.ಡಿ. ಮಂತ್ರಿಗಳವರ ಮೇಲೆ ಆಪಾದನೆ ಮಾಡುತ್ತಿಲ್ಲ. ವಿಜಿಲೆನ್ಸ್ ಕಮಿಷನರ್‌ರವರು ಕೆಲಸ ಮಾಡುವುದಕ್ಕೆ ಸರ್ಕಾರದವರು ದಾಖಲೆ ಪತ್ರಗಳನ್ನು ಕೊಟ್ಟಿಲ್ಲವೆಂದು ಹೇಳಿದೆ. ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ನಾನು ಏನೂ ಓದಿ ಹೇಳಲಿಲ್ಲ. ಶ್ರೀ ರಾಮದೇವ್‌ರವರೇ ಓದಿ ಹೇಳಿದರು. ಪಿ.ಡಬ್ಲ್ಯು.ಡಿ. ಚೀಫ್ ಇಂಜಿನಿಯರ್‌ರವರಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಸರ್ಕಾರ ಕೊಡುತ್ತಿಲ್ಲವೆಂದು ಅವರೇ ಓದಿ ಹೇಳಿದ್ದಾರೆ... I did not exactly base on this. I have not based my information exactly on this press report only. I have got some other reports also. I am entitled to speak here on that basis. People talk about it.

SRI H. D. DEVEGOWDA.— I am very sorry. You spell out under which circumstance the Government is shirking its responsibility in handing over files to the vigilence Commission ?

SRI M. VEERAPPA MOILY.—Please verify. ಈ ವಿಷಯದಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ. ಸರ್ಕಾರದ ಆಡಳಿತ ಯಂತ್ರದ ವಿಚಾರದಲ್ಲಿ ಕೂಡ ಜನಗಳ ಸ್ಪಂದನವಿದೆ ಎನ್ನುವುದನ್ನು ದಯಮಾಡಿ ತಾವು ತಿಳಿದುಕೊಳ್ಳಬೇಕು. ಆದುದರಿಂದ ನಾನು ಹೇಳತಕ್ಕ ವಿಷಯವನ್ನೆಲ್ಲಾ ಕೇಳಿ ಸರಿಯಾಗಿ ಉತ್ತರವನ್ನು ಕೊಡಿ...

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರವರು ಯಾವ ರಿಸೋರ್ಸಸ್‌ನಿಂದ ಇನ್‌ಫರ್ಮೇಷನ್ ತೆಗೆದುಕೊಳ್ಳುತ್ತಾರೆಂಬುದು ಮುಖ್ಯವಲ್ಲ. ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡತಕ್ಕ ಕಾಲದಲ್ಲಿ ಯಾವುದೇ ಮೂಲದಿಂದ ಮಾಹಿತಿಯನ್ನು ತರಿಸಿಕೊಳ್ಳಲಿ ಅದರ ಬಗ್ಗೆ ನಮಗೆ ಯಾವುದೇ ಕಾಳಜಿ ಇಲ್ಲ. ಏತಕ್ಕೆಂದರೆ ನಾನು ಕೂಡ ಆ ಕಡೆ ಕೂತು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿ ನೋಡಿದ್ದೇನೆ. ಒಬ್ಬರಿಗೊಬ್ಬರು ಅಧಿಕಾರಿಗಳ ತಿಕ್ಕಾಟದಲ್ಲಿ ಒಬ್ಬರು ಇನ್ನೊಬ್ಬರ ವಿರುದ್ಧ ಇನ್‌ಫರ್ಮೇಷೆನ್ ಕೊಡುತ್ತಾರೆ. ಆಗ ನಾವು ಕಾಂಟರ್‌ಚೆಕ್ ಮಾಡಿ ನೋಡಬೇಕಾದುದು. ನಮ್ಮ ಜವಾಬ್ದಾರಿಯಾಗಿರುತ್ತದೆ. ಆ ಸಂದರ್ಭದಲ್ಲಿ ಯಾವುದೇ ಮಾಹಿತಿ ನನ್ನ ಪಾಲಿಗೆ ಬಂದಂಥ ಕಾಲದಲ್ಲಿ ಕೂಡ ಹಲವಾರು ವಿಧದಲ್ಲಿ ಅದನ್ನು ಚೆಕ್ ಆಫ್ ಮಾಡಿ ನೋಡುತ್ತಿದ್ದೆ. ಇವತ್ತು ಏನೋ ಒಂದು ವಿಷಯ ಪತ್ರಿಕೆಯಲ್ಲಿ ಬಂದಿದೆ. ಅದನ್ನು ಓದುವುದಕ್ಕೂ ನಾನು ಹೋಗಿಲ್ಲ. ಏತಕ್ಕೆಂದರೆ ಎಲ್ಲಾ ಪತ್ರಿಕೆಗಳಲ್ಲಿ ಬರತಕ್ಕದ್ದನ್ನು ಓದುವುದಕ್ಕೆ ನನಗೆ ಕಾಲವಿಲ್ಲ. ಆದುದರಿಂದ ಅನ್ಯಥಾ ಭಾವನೆ ಮಾಡಬೇಕಾಗಿಲ್ಲ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಯಾವನೇ ಚೀಫ್ ಇಂಜಿನಿಯರ್ ಆಗಲೀ ಸಣ್ಣ ಅಧಿಕಾರಿಯಾಗಲೀ, ಎಸ್. ಇ. ಆಗಲೀ ಇ.ಇ. ಆಗಲೀ, ಇ. ಇ. ಆಗಲೀ ಸಿ. ಇ. ಯಾಗಲೀ ಯಾವನೇ ಅಧಿಕಾರಿಯ ಬಗ್ಗೆ ವಿಜಿಲೆನ್ಸ್ ಕಮಿಷನರವರಿಗೆ ದಾಖಲೆಯನ್ನು ಕೊಡುವ ಬಗ್ಗೆ ನಿರಾಕರಣೆ ಮಾಡಿದ್ದಾರೆಂದರೆ ಬಹುಶಃ ಈ ಸಂದರ್ಭದಲ್ಲಿ ನಾನು ಯಾವುದೇ ಶಿಕ್ಷೆಗೆ ಗುರಿಯಾಗುವುದಕ್ಕೆ ಸಿದ್ಧನಾಗಿದ್ದೇನೆ. ಇನ್ನು ಒಂದು ಹೆಜ್ಜೆ ಮುಂದು ಹೋಗಿ ಹೇಳುವುದಾದರೆ ಪಿ. ಡಬ್ಲ್ಯು. ಡಿ. ಕಾರ್ಯದರ್ಶಿಯವರು ಒಂದು ವೇಳೆ ದಾಖಲೆಯನ್ನು ಕೊಡುವುದನ್ನು ತಡೆಹಿಡಿದಿದ್ದರೆ ಅವರ ಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಬೀಳುವುದಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಸಚಿವರು ಸಮರ್ಪಕವಾಗಿ ಉತ್ತರ ಕೊಡಬಹುದು. ವಿರೋಧ ಪಕ್ಷದ ನಾಯಕರಾಗಿದ್ದ ತಮಗೆ ಗೊತ್ತಿದೆ. ಯಾವುದೇ ವಿಚಾರ ಪತ್ರಿಕೆಯಲ್ಲಿ ಬರಲಿ ಅದರ ಮೇಲೆ ಕೌಂಟರ್ ಚೆಕ್ ಮಾಡಿಕೊಂಡು ಸತ್ಯಾಸತ್ಯತೆಯನ್ನು ವಿಚಾರಿಸತಕ್ಕ ವಿವೇಚನೆ ನಮ್ಮಲ್ಲಿ ಇದೆ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಇಲ್ಲವೆಂದು ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿರೋಧ ಪಕ್ಷದ ನಾಯಕರಾಗಿ ತಾವು ಕೂಡ ಅಭ್ಯಾಸ ಮಾಡಿದ್ದೀರಿ. ನಮಗೂ ಕೂಡ ಅವಕಾಶ ಇರುವುದರಿಂದ ವಿಚಾರ ಮಾಡಿಕೊಂಡು ಸದನದಲ್ಲಿ ಎತ್ತುತ್ತಿದ್ದೇವೆ.

ಸಮರ್ಪಕವಾಗಿ ಉತ್ತರ ಕೊಡತಕ್ಕ ಜವಾಬ್ದಾರಿ ತಮ್ಮ ಸರ್ಕಾರದಲ್ಲಿ ಇದೆ. ಆದರೆ ಆ ಜವಾಬ್ದಾರಿಯಲ್ಲಿ ರಾಜಕೀಯ ಪ್ರವೇಶ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನು ನಾವು ಸಹಿಸುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ಅಂಥದ್ದು ಏನಾದರೂ ಉದಾಹರಣೆಗಳು ಇದ್ದು ಸಭೆಯ ಮುಂದೆ ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಸರ್ವೇಸಾಮಾನ್ಯವಾಗಿ ಬೇಕಾದಷ್ಟು ದೂರುಗಳಿವೆ ಎಂದು ಜನಗಳು ಹೇಳುತ್ತಿದ್ದಾರೆಂದು ಹೇಳಿ ಇದು ವಿರೋಧ ಪಕ್ಷದ ನಾಯಕರು ಮಾಡತಕ್ಕ ಕರ್ತವ್ಯ ಅಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇಂಥ ಸಂದರ್ಭದಲ್ಲಿರತಕ್ಕದ್ದು ಎರಡು ದಾರಿಗಳು. ಯಾವ ಸದಸ್ಯರು ಈ ರೀತಿಯಾಗಿ ವಿಜಿಲೆನ್ಸ್ ಕಮೀಷನರ್ ಅಭಿಪ್ರಾಯ ಪಟ್ಟಿದ್ದಾರೆಂಬ ಮಾತನ್ನು ಹೇಳುತ್ತಾರೆ ಅವರ ಹತ್ತಿರ ದಾಖಲಾತಿಗಳು ಇರುತ್ತವೆ. ಆ ವಿಚಾರಗಳನ್ನು ಹೇಳತಕ್ಕದ್ದು ಅವರಿಗೆ ಬಿಟ್ಟ ವಿಚಾರ. ನೇಚರ್ ಆಫ್ ಇನ್‌ಫರ್ಮೇಷನ್ ಅವರಿಗೆ ಸಂಬಂಧಪಟ್ಟದ್ದು. ಈ ಸದನಕ್ಕೆ ಬಂದಾಗ ವೀರಪ್ಪ ಮೊಯಿಲಿಯವರು ಹೇಳುವುದಕ್ಕೆ ಅಧಿಕಾರ ಇಲ್ಲವೆಂದು ಹೇಳುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಒಂದು ವೇಳೆ ಹಾಗೆ ಅಭಿಪ್ರಾಯ ಪಟ್ಟಿದ್ದರೆ ದೇವೇಗೌಡರು ಹೇಳುವ ಹಾಗೆ ಅವರ ಗಮನಕ್ಕೆ ಬಾರದೆ ಇರಬಹುದು. ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿ ವಿಚಾರ ಇರಲಿಕ್ಕೆ ಸಾಧ್ಯತೆ ಇದೆ. ಒಂದು ಉತ್ತರ ನಿರೀಕ್ಷಿಸಿದರೆ ತಪ್ಪಾಗಲಾರದೆಂದು ನನ್ನ ಭಾವನೆ. ಹಾಗೇನಾದರೂ ಇದ್ದರೆ ಅದು ನಿಮ್ಮ ಸೌಜನ್ಯದ ಉತ್ತರವಾಗುತ್ತದೆ. ಹೇಗೆಂದರೆ, ನಾನು ಚೆಕ್‌ಅಪ್ ಮಾಡಿಸುತ್ತೇನೆ. ಹಾಗೇನಾದರೂ ವಿಜಿಲೆನ್ಸ್ ಕಮಿಷನ್‌ನವರು ಅಭಿಪ್ರಾಯ ಪಟ್ಟಿದ್ದರೆ ನಾನು ಅದರ ಬಗ್ಗೆ ನೋಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ದೇವೇಗೌಡರು ಹೇಳಿದ್ದರೆ ವಿಷಯ ಅಂತಿಮವಾಗಿ ಮುಕ್ತಾಯವಾಗಬಹುದು.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ಇದು ಮಂತ್ರಿಗಳಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ಶಾಸಕರು ಆ ಕಡೆ ಇರಲಿ, ಈ ಕಡೆ ಇರಲಿ ಇದು ಎಲ್ಲರಿಗೂ ಅನ್ವಯಿಸುತ್ತದೆ ಎಂಬುದನ್ನು ಅವಶ್ಯಕವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ವಿರೋಧ ಪಕ್ಷದ ನಾಯಕರಾಗಿ ಹೇಳುವಾಗ ಇಂಥ ಉದಾಹರಣೆಗಳು ಸಿಗುತ್ತವೆ. ಅವುಗಳಲ್ಲಿ ನೀವು ಇವನ್ನು ತಡೆಹಿಡಿದಿದ್ದೀರಿ. ನಿಮ್ಮ ಅಧಿಕಾರಿಗಳು ತಡೆಹಿಡಿದಿದ್ದಾರೆಂದು ಸ್ಪಷ್ಟವಾಗಿ ಹೇಳಿದರೆ ನಮಗೆ ಗೊತ್ತಾಗುತ್ತದೆ. ಸುಮ್ಮನೇ ಕುಳಿತುಕೊಂಡು ಸರ್ಕಾರ ಮಾಡಿದ್ದು ಸರಿ ಎಂದು ಹೇಳುವುದಕ್ಕೆ ನಾವೂ ಸಿದ್ಧವಿಲ್ಲ. ಇಂಥ ತಪ್ಪು ಮಾಡುತ್ತಿದೆ ಎಂದು ಹೇಳುವುದಕ್ಕೆ ನಾವು ಸಿದ್ಧರಿದ್ದೇವೆ ಆದ್ದರಿಂದ ವಿಚಾರವನ್ನು ಸಭೆಗೆ ತಿಳಿಸುವುದು ಸೂಕ್ತ.

ಶ್ರೀ ಎಸ್. ಬಂಗಾರಪ್ಪ.—ನಾನ ಹೇಳಿದ್ದೂ ಅದೇ ಅಭಿಪ್ರಾಯ. ಆ ರೀತಿ ವ್ಯವಹರಿಸಿ ಯಾವ ಒಬ್ಬ ಸದಸ್ಯರು ಏನು ಹೇಳುತ್ತಾರೆ ಅದು ಅವರಿಗೆ ಬಿಟ್ಟ ವಿಚಾರ. ಅವರು ವಿರೋಧ ಪಕ್ಷದ ನಾಯಕರಾಗಿರಲಿ ಮತ್ತೊಬ್ಬರಾಗಿರಲಿ, ಆ ಕಡೆಯವರಾಗಿರಲಿ, ಈ ಕಡೆಯವರಾಗಿರಲಿ, ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೊಡಬಹುದು. ಇದನ್ನು ನಾನು ಒಪ್ಪುತ್ತೇನೆ. ಕೆಲವು ವೇಳೆ ಆ ಸದಸ್ಯರಿಗೆ ಬೇರೆ ಕಾರಣ ಇರಬಹುದು ; ವಿಚಾರಗಳು ಇನ್ನೂ ಬರುತ್ತಿರಬಹುದು. ಆ ಶಂಕೆಯ ದೃಷ್ಟಿಯಿಂದ ಈ ಸದನದಲ್ಲಿ ಆಡಿದರೆ ತಪ್ಪಾಗುವುದಿಲ್ಲ. ಜನರಲ್ ಆಗಿ ಒಂದು ಕೋಟ್ ಮಾಡಿ ವಿಜಿಲೆನ್ಸ್ ಕಮೀಷನ್‌ನವರು ಸರ್ಕಾರಕ್ಕೆ ಬರೆದಿದ್ದರೆ ಸರ್ಕಾರದವರೇ ಚೆಕ್‌ಅಪ್ ಮಾಡಿಸಿ ತಪ್ಪಿದ್ದರೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದರೆ ಸರ್ಕಾರಕ್ಕೆ ಕೀರ್ತಿ ಬರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಬಂಗಾರಪ್ಪನವರು ಹೇಳಿದ್ದನ್ನು ಕೇಳಿದೆ. ಅವರು ಹೇಳಿದ್ದನ್ನು ನಾನು ತಿರಸ್ಕಾರ ಮಾಡುವುದಿಲ್ಲ. ಕಾರಣ ಇಷ್ಟೆ : ಇಲಾಖೆಯ ಆಡಳಿತವನ್ನು ಸುಧಾರಣೆ ಮಾಡಬೇಕೆಂಬ ತೀವ್ರತೆ, ಹಂಬಲ ನಿಮಗೆ ಎಷ್ಟಿದೆಯೋ ನನಗೆ ಕೂಡ ಅಷ್ಟೇ ಇದೆ. ಸಾರ್ವಜನಿಕರಿಂದ ಬರತಕ್ಕ ಯಾವುದೇ ಅರ್ಜಿಯಾದರೂ ಗಮನವಿಟ್ಟು ನೋಡುತ್ತೇವೆ. ಏನಾದರೂ ಮಾಡಿ ಇಲಾಖೆಯನ್ನು ಸರಿ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಇದೆ. ಅವರು ಆ ಜಾಗದಲ್ಲಿ ಕುಳಿತು ಮಾತನಾಡುವಾಗ ಜವಾಬ್ದಾರಿಯಿಂದ ನೋಡಬೇಕಾಗುತ್ತದೆ. ದೇಶದ ಜನ ಏನು ಅಭಿಪ್ರಾಯ ಪಡುತ್ತಾರೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ವಿಜಿಲೆನ್ಸ್ ಕಮೀಷನ್ನಿನ ಕೆಲಸವನ್ನು ಕೂಡ ಸ್ಥಗಿತಗೊಳಿಸಿ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೇವೆಂಬ ಭಾವನೆ ಬರುವುದಾದರೆ ಸರ್ಕಾರದ ಮೇಲೆ ಗುರುತರವಾದ ಆಪಾದನೆ ಆಗುತ್ತದೆ. ಆದ್ದರಿಂದ ನಾನು ಆ ಮಾತನ್ನು ಹೇಳಿದೆ. ತಮಗೆ ವರದಿ ಬೇಕೆಂದರೆ ಕೆಲವೇ ನಿಮಿಷಗಳಲ್ಲಿ ಮುಖ್ಯ ಕಾರ್ಯದರ್ಶಿಯವರನ್ನು ಭೇಟಿ ಮಾಡಿ ಹೇಳುತ್ತೇನೆ. ಅದಕ್ಕೇನಾದರೂ ಹಿರಿಯ ಅಧಿಕಾರಿಗಳು ಸರ್ಕಾರದ ಮಟ್ಟದಲ್ಲಿ ವಿಜಿಲೆನ್ಸ್ ಕಮಿಷನ್‌ಗೆ ಸಹಕಾರ ಕೊಡದಿದ್ದರೆ ನನ್ನ ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿರೋಧ ಪಕ್ಷದಲ್ಲಿ ದೇವೇಗೌಡರು ಇದ್ದರು. ನಾವು ಆಳುವ ಪಕ್ಷದಲ್ಲಿದ್ದಾಗ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರಿಗೆ ಯಾವ ರೀತಿ ಸೌಜನ್ಯತೆ ತೋರಿಸಿದ್ದೇವೆ, ಸಭೆಯಲ್ಲಿ ಯಾವ ನಡವಳಿಕೆಯಿಂದ ಮಾತನಾಡಿದ್ದೇವೆ ಎಂಬುದು ದೇವೇಗೌಡರಿಗೆ ಗೊತ್ತು. ವಿರೋಧ ಪಕ್ಷದ

ಬಗ್ಗೆ ಬಹಳ ಪ್ರೀತಿ ವಿಶ್ವಾಸ ಗೌರವಗಳನ್ನು ಇಟ್ಟುಕೊಂಡಿದ್ದೇವೆ. ಆದರೆ ಇವತ್ತಿನ ದಿವಸ ಮಂತ್ರಿವರ್ಗ್ಯರು ಮತ್ತು ಕೆಲವು ಸದಸ್ಯರು ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರಿಗೆ ತೋರಿಸತಕ್ಕ ಒಂದು ವರ್ತನೆಯನ್ನು ನೋಡಿದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸೂಕ್ತವಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ದಯಮಾಡಿ ಕುಳಿತುಕೊಳ್ಳಬೇಕು. ಅವರು ಮಾತನಾಡುವುದನ್ನು ಕ್ಷಮಿಸಬೇಕು. ಈ ಸದನದಲ್ಲಿ ಇಬ್ಬರು ಹಿರಿಯ ಸದಸ್ಯರು, ಶ್ರೀಮಾನ್ ರಂಗನಾಥ್ ಮತ್ತು ಶ್ರೀಮತಿ ನಾಗರತ್ನಮ್ಮ ಕುಳಿತಿದ್ದಾರೆ ; ಅವರು, ನಾನು, ಒಂದೇ ಸಾರಿ ಈ ಸದನಕ್ಕೆ ಬಂದವರು. ನಾನು ವಿರೋಧ ಪಕ್ಷದ ಮುಖಂಡನಾಗಿ, ಸಾಮಾನ್ಯ ಸದಸ್ಯನಾಗಿ ಕೆಲಸ ಮಾಡತಕ್ಕ ಕಾಲದಲ್ಲಿ ಈ ಸದನದ ಗೌರವಕ್ಕೆ, ಘನತೆಗೆ, ಸದನದ ಕಾರ್ಯಕಲಾಪಕ್ಕೆ ಯಾವುದೇ ರೀತಿಯ ಚ್ಯುತಿ ತರುವಂಥ ಅಕ್ಷಮ್ಯ ಅಪರಾಧವನ್ನು ಮಾಡದಂತೆ ನಡೆದುಕೊಂಡಿದ್ದೇನೆ. ಸರ್ಕಾರದ ಘನತೆ ಗೌರವಕ್ಕೆ ಕುಂದು ಬರುವಂಥ ಕೆಲಸವನ್ನು ನಾನು ಎಂದೂ ಮಾಡಿದವನಲ್ಲ. ಹಲವಾರು ಘಟನೆಗಳಲ್ಲಿ ನಾನು ಎಷ್ಟರ ಮಟ್ಟಿಗೆ ನಡೆದುಕೊಂಡಿದ್ದೇನೆ ಎಂಬುದನ್ನು ಆ ಜಾಗದಲ್ಲಿ ಕುಳಿತವರು ಹೇಳಬೇಕು. ಆದ್ದರಿಂದ, ಈ ರೀತಿಯಾಗಿ ಅನ್‌ಚಾರ್ಟಿಬಲ್ ರಿಮಾರ್ಕ್ಸ್ ಮಾಡಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಜೊತೆಯಲ್ಲಿ ನಾವು ಯಾವ ರೀತಿ ನಡೆದುಕೊಂಡಿದ್ದೇವೆಂಬುದೂ ತಮಗೆ ಗೊತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಸುಮ್ಮನೆ ವಾದ ಏತಕ್ಕೆ, ಉದಾಹರಣೆಗಳಿದ್ದರೆ ಹೇಳಿ.

ಒಬ್ಬ ಮಾನ್ಯ ಸದಸ್ಯರು.—ದೇವೇಗೌಡರು ಹಲವಾರು ಬಾರಿ ವಿರೋಧ ಪಕ್ಷಕ್ಕೆ ಕೇಳಿಕೊಳ್ಳುವುದರಿಂದ ಕಷ್ಟವಾಗುತ್ತದೆ. ಸುಮ್ಮಸುಮ್ಮನೆ ಏನೇನೋ ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಸದನದಲ್ಲಿ ನನಗೆ ಸಂಬಂಧಪಟ್ಟ ವಿಷಯ ಚರ್ಚೆಗೆ ಬರುತ್ತದೆ. ಆದ್ದರಿಂದ ನಾನು ಈಗ ಹೋಗಿ ಮತ್ತೆ ವಾಪಸ್ಸು ಬರುತ್ತೇನೆ. ಅವರು ಏನು ಹೇಳುತ್ತಾರೋ ಅದಕ್ಕೆಲ್ಲ ಆಮೇಲೆ ಉತ್ತರಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವತ್ತು ಪತ್ರಿಕೆ ಬಗ್ಗೆ ಇಷ್ಟು ಲಘುವಾಗಿ ಮಾತನಾಡತಕ್ಕ ಜನ ಪತ್ರಿಕಾ ಸ್ವಾತಂತ್ರ್ಯವನ್ನು ಎಷ್ಟರಮಟ್ಟಿಗೆ ಕಾಯ್ದುಕೊಳ್ಳುತ್ತಾರೆಂದು ಪ್ರಶ್ನೆ ಮಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಸಭೆಯು ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ 2-30) ಪಿ. ಎಂ.

ಉಪಾಧ್ಯಕ್ಷರು.—ದಯಮಾಡಿ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಿ. ಎಸ್. ಆಚಾರ್ಯ.—ಇವರುಗಳ ಸಿದ್ಧಾಂತಗಳೆಲ್ಲಾ ಕಾರ್ಯಗತವಾಗಿದ್ದರೆ ಪತ್ರಕರ್ತರೆಲ್ಲರೂ ಅರಬ್ಬೀ ಸಮುದ್ರದಲ್ಲಿ ಇರುತ್ತಿದ್ದರು. ಆದುದರಿಂದ ಆ ಬಗ್ಗೆ ಅವರು ಮಾತನಾಡುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಯಮಾಡಿ ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ಸರ್ಕಾರದ ಜೊತೆ ವಿರೋಧ ಪಕ್ಷ ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ ಎನ್ನುವ ಭಾವನೆ ವ್ಯಕ್ತಪಡಿಸತಕ್ಕ ಈ ಒಂದು ವರ್ತನೆ, ಸೌಜನ್ಯತೆಯ ಒಂದು ಮಿತಿಯನ್ನು ಮೀರತಕ್ಕದ್ದು ಎಂದು ಹೇಳಿ ನಾನು ನನ್ನ ವ್ಯಾಕುಲವನ್ನು ವ್ಯಕ್ತಪಡಿಸುತ್ತಿದ್ದೇನೆ. ವಿರೋಧ ಪಕ್ಷದ ನಾಯಕರ ಮತ್ತು ವಿರೋಧ ಪಕ್ಷದ ಸದಸ್ಯರಿಗೆ ಗೌರವ ಕೊಡುವ ಒಂದು ಭಾವನೆ ಇಲ್ಲದೇ ಇರತಕ್ಕ ಜನ ತಾವು ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ನಡೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನನಗೆ ಅನುಮಾನ ಬಂದಿದೆ.

ಶ್ರೀ ವಿ. ಎಸ್. ಆಚಾರ್ಯ.—ವಿರೋಧ ಪಕ್ಷದ ನಾಯಕರನ್ನು ಇವರು ಜೈಲಿನಲ್ಲಿ ಇಟ್ಟಿದ್ರು...

ಉಪಾಧ್ಯಕ್ಷರು.—ನಿಮ್ಮ ಸರದಿ ಬಂದಾಗ ನೀವು ಮಾತನಾಡುವಿರಂತೆ ಈಗ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂದು ಅನೇಕ ವಿಜಿಲೆನ್ಸ್ ಕಮಿಷನ್ ವರದಿಗಳು ಬಂದಿವೆ. ವರದಿಗಳ ಆಧಾರದ ಮೇಲೆ ನ್ಯಾಯಾಲಯಗಳಲ್ಲಿ ಚಾರ್ಜ್‌ಶೀಟ್ ಹೋಗಿವೆ. ತಾವು ದಯಮಾಡಿ ವಿವರಗಳನ್ನು ಕೊಡಬೇಕು. ತಾವು ಎಷ್ಟು ಸ್ಪೆಷಲ್ ಪ್ರಾಸಿಕ್ಯೂಟರ್ಸ್‌ನ್ನು ನೇಮಕ ಮಾಡಿದ್ದೀರಿ ? ನೇಮಕ ಮಾಡದಿದ್ದರೆ ಕಾರಣ ಏನು ? ಅನೇಕ ರೀತಿಯ ದಾಖಲೆಗಳನ್ನು ಇವತ್ತು ಡಿವಿಜನಲ್ ಕಮಿಷನರ್ ಕೇಳಿದ್ದಾರೆ. ವಿಜಿಲೆನ್ಸ್ ಕಮಿಷನರ್‌ರವರು ಸರ್ಕಾರಕ್ಕೆ ಎಷ್ಟು ರಿಮೈಂಡರ್‌ಗಳನ್ನು ಕಳಿಸಿದ್ದಾರೆ ? ಯಾವುದೇ ಒಂದು ಆಧಾರ ಇಲ್ಲದೇ ಇಂತಹ ಆಪಾದನೆಗಳನ್ನು ನಾನು ಮಾಡುತ್ತಿದ್ದೇನೆಂದು ತಾವು ಭಾವಿಸಬಾರದು. ತಾವು ಈ ಬಗ್ಗೆ ಸರಿಯಾದ ಸ್ಪಷ್ಟೀಕರಣವನ್ನು ಕೊಟ್ಟಾಗ ಅದನ್ನು ಒಪ್ಪಿ ನಾವು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ. ಆದ್ದರಿಂದ ದಯಮಾಡಿ ತಾವು ಸ್ಪಷ್ಟೀಕರಣ ಕೊಡಿ. ಅಧಿಕಾರಿಗಳ ವಿಚಾರವಾಗಿ ಹಿಂದಿನ ಸರ್ಕಾರ ಅವರ ಮನೆಗಳ ಮೇಲೆ ಧಾಳಿ ಮಾಡಿ ಕ್ರಮ ತೆಗೆದುಕೊಂಡಿದೆ. ಕಳೆದ 3 ತಿಂಗಳಿಂದ ಸ್ವಚ್ಛವಾದ ಆಡಳಿತವನ್ನು ಕೊಡುತ್ತೇವೆನ್ನುವ ಪ್ರತಿಜ್ಞೆ ಮಾಡಿದ ಸರ್ಕಾರ ಎಷ್ಟು ಅಧಿಕಾರಿಗಳನ್ನು ಹಿಡಿದು ಶಿಕ್ಷೆ ಮಾಡಿದ್ದೀರಿ ಎಂಬುದನ್ನು ಸಭೆಗೆ ತಿಳಿಸಬೇಕಾಗುತ್ತದೆ. ವಿಜಿಲೆನ್ಸ್ ಕಮಿಷನರ್ ಕೊಟ್ಟ ವರದಿಯ ಆಧಾರದ ಮೇಲೆ ಎಷ್ಟು ಜನರ ಮೇಲೆ ಕಾನೂನು ಕ್ರಮ ಕೈಗೊಂಡಿದ್ದೀರಿ ? ಈ ಬಗ್ಗೆ ತಾವು ಜರೂರು ಕ್ರಮ ತೆಗೆದು

ಕೊಂಡಾಗ ತಮ್ಮ ಪ್ರಾಮಾಣಿಕತೆಯನ್ನು ನೋಡಬೇಕೇ ಹೊರತು ಭ್ರಷ್ಟಾಚಾರಿಗಳ ಭ್ರಷ್ಟ ಅಧಿಕಾರಿಗಳ, ದಾಸ್ತಾನುಕೋರರ ಮೇಲೆ ಏನೂ ಕ್ರಮ ಕೈಗೊಳ್ಳದೇ ಇರತಕ್ಕ ಸಂದರ್ಭದಲ್ಲಿ ತಮ್ಮ ಪ್ರಾಮಾಣಿಕತೆ ಬಗ್ಗೆ ಇವತ್ತು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಆದುದರಿಂದ ತಾವು ಸ್ವಚ್ಛವಾದ ಆಡಳಿತವನ್ನು ಕೊಡಬೇಕಾಗುತ್ತದೆ. ಅದನ್ನು ತಾವು ಕೊಟ್ಟಾಗ ನಾವು ಸ್ವಾಗತ ಮಾಡುತ್ತೇವೆ. ಅದನ್ನು ಕೊಡುವ ದೃಷ್ಟಿಯಿಂದ ನಾವು ನಡೆದುಕೊಂಡಂತಹ ದಾರಿ ಮತ್ತು ವರ್ತನೆ ಜನರಿಗೆ ಮೆಚ್ಚುಗೆಯಾಗತಕ್ಕ ರೀತಿಯಲ್ಲಿ ಇರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ವಿರೋಧ ಪಕ್ಷದಲ್ಲಿ ಇರುವ ನಾವು ಸರ್ಕಾರದ ಕೆಲವು ವಿಚಾರಗಳ ಬಗ್ಗೆ, ಎಲ್ಲಿ ತೊಂದರೆ ಇದೆ, ಎಲ್ಲಿ ಹುಳುಕು ಇದೆ ಅದನ್ನು ಎತ್ತಿ ತೋರಿಸಬೇಕಾಗುತ್ತದೆ, ಇದರಿಂದ ತಮಗೆ ಸಹಾಯವಾಗುತ್ತದೆಯೇ ಹೊರತು ತಮ್ಮ ಮುಖಕ್ಕೆ ಮಸಿ ಬಳಿಯಲು ವಿರೋಧ ಪಕ್ಷದವರು ಹೊರಟಿದ್ದಾರೆಂದು ಭಾವನೆಯನ್ನು ತಾವು ಇಟ್ಟುಕೊಂಡರೆ ಇದು ಪ್ರಜಾಪ್ರಭುತ್ವದಲ್ಲಿ ತಕ್ಕುದಾದ ಭಾವನೆ ಅಲ್ಲ ಎಂದು ತಾವು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ನಾವು ಎತ್ತಿರತಕ್ಕ ಪ್ರಶ್ನೆಗಳಿಗೆ ದಾಖಲೆಗಳಿಂದ ತಕ್ಕುದಾದ ಉತ್ತರಗಳನ್ನು ಕೊಟ್ಟಾಗ ಅದು ಸಮಂಜಸವಾದ ಉತ್ತರಗಳಾಗಿದ್ದರೆ ಅವುಗಳಿಗೆ ತಲೆದೂಗತಕ್ಕ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆ. ಯಾವುದೇ ಒಂದು ಪ್ರಗತಿಯ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋದಾಗ ಆ ಬಗ್ಗೆ ನಮ್ಮ ಬೆಂಬಲ ಇದ್ದೇ ಇದೆ. ನಾವು ಯಾವುದೇ ಒಂದು ವಿಷಯದ ಬಗ್ಗೆ ಆಪಾದನೆ ಮಾಡಿದಾಗ ಅದು ವೈಯುಕ್ತಿಕವಾಗಿ ಯಾವುದೇ ಒಬ್ಬ ಮಂತ್ರಿಯ ಮೇಲೆ ಮಾಡಿದ ಆಪಾದನೆ ಎಂದು ತಿಳಿದುಕೊಳ್ಳದೇ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆಡಳಿತ ಯಂತ್ರವನ್ನು ನಡೆಸುವಾಗ ಮಂತ್ರಿಗಳ ಗಮನಕ್ಕೆ ಕೆಲವು ವಿಷಯಗಳು ಬಾರದಿರಬಹುದು. ವಿಜಿಲೆನ್ಸ್ ಕಮಿಷನರ್‌ರವರಿಗೆ ಯಾವುದೇ ಒಂದು ದಾಖಲೆಗಳನ್ನು ಕೊಡುವಾಗ, ಸ್ಪೆಷಲ್ ಪ್ರಾಸಿಕ್ಯೂಟರನ್ನು ನೇಮಕ ಮಾಡುವಾಗ ಎಲ್ಲಾ ವಿಷಯಗಳು ಮಂತ್ರಿಗಳ ಗಮನಕ್ಕೆ ಬರುವುದಿಲ್ಲ. ನಾವೂ ಕೂಡ ಮಂತ್ರಿಗಳಾಗಿ ಕೆಲಸಮಾಡಿದ್ದೇವೆ. ಅಧಿಕಾರಿಗಳಮಟ್ಟದಲ್ಲಿ ಕೆಲವು ಸಾರಿ ವಿಳಂಬವಾಗುತ್ತದೆ. ತಾವು ಬೇಕಾದರೆ ಕಡತವನ್ನು ತರಿಸಿ ನೋಡಬಹುದು ನಾನು ಮಾನ್ಯ ದೇವೇಗೌಡರ ಮೇಲೆ ಆಗಲೀ, ಅಥವಾ ಬೇರೆ ಯಾರೇ ಸದಸ್ಯರ ಮೇಲೆ ಆಗಲೀ ನೇರವಾಗಿ ಯಾವ ಸಮಯದಲ್ಲೂ ಆಪಾದನೆ ಮಾಡಿಲ್ಲ. ಆದರೆ ಒಂದು ವಿಚಾರ ನಡೆದಿದೆ, ಅದರ ಬಗ್ಗೆ ಸಮರ್ಪಕವಾದ ಉತ್ತರವನ್ನು ಕೊಡಿ ಎಂದು ಕೇಳಿದರೆ ನಮ್ಮ ಮೇಲೇ ಗದಾಪ್ರಹಾರ ಮಾಡತಕ್ಕ ಪ್ರಯತ್ನವನ್ನು ತಾವು ಮಾಡುವುದಾದರೆ ಬಹುಶಃ ಯಾವುದೇ ಒಂದು ವಿಚಾರವನ್ನು ವಿರೋಧ ಪಕ್ಷದ ಮುಖಾಂತರ ಸದನದ ಹಾಗೂ ಸಾರ್ವಜನಿಕರ ಗಮನಕ್ಕೆ ತರುವುದು ಬಹಳ ಕಷ್ಟವಾದೀತು ; ವಿರೋಧ ಪಕ್ಷ ಕೆಲಸ ಮಾಡುವ ಹಂತದಲ್ಲಿ ಇಡೀ ಪ್ರಜಾಪ್ರಭುತ್ವಕ್ಕೆ ಇದು ಕಂಟಕಪ್ರಾಯವಾದೀತು ಎಂದು ತಾವು ತಿಳಿದುಕೊಳ್ಳಬೇಕು. ಮಾನ್ಯ ಹುಚ್ಚಮಾಸ್ತಿಗೌಡರು ಬಹಳ ಹಿರಿಯ ಸದಸ್ಯರಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಿಗೆ ಪಾಠ ಹೇಳತಕ್ಕಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಬೇಕಾದರೆ ನನಗೆ ಪ್ರೈವೇಟಾಗಿ 2 ಗಂಟೆ ಕಾಲ ಅಥವಾ ಒಂದು ದಿವಸ ಪಾಠ ಹೇಳಲಿ. ಅವರು ಹಿರಿಯ ಸದಸ್ಯರಿದ್ದಾರೆ. ನಾನು ಇಲ್ಲಿ ನನ್ನ ವೈಯುಕ್ತಿಕ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಂದಿಲ್ಲ. ಅವರು ನನ್ನ ಬಗ್ಗೆ ಅಷ್ಟು ಲಘುವಾಗಿ ಮಾತನಾಡುವುದಾದರೆ ಆದರಿಂದ ಅವರ ವ್ಯಕ್ತಿತ್ವಕ್ಕೆ ಭೂಷಣ ಬರುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಹುಚ್ಚಮಾಸ್ತಿಗೌಡ.—ಎದುರು ಪಕ್ಷದ ನಾಯಕರ ಬಗ್ಗೆ ಲಘುವಾಗಿ ಮಾತನಾಡತಕ್ಕ ಅಭ್ಯಾಸ ನನಗೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ನನ್ನ ವೈಯುಕ್ತಿಕ ಪ್ರಶ್ನೆಗಳಿಗಾಗಿ ನಾನು ವಿರೋಧ ಪಕ್ಷದ ನಾಯಕನಾಗಿ ನಿಂತಿಲ್ಲ. ಪ್ರಜಾಪ್ರಭುತ್ವದಲ್ಲಿ ಸದನ ನಡೆಯುವಾಗ ವಿರೋಧ ಪಕ್ಷ ಒಂದು ಪ್ರಮುಖ ಅಂಗವೆಂದು ತಿಳಿದುಕೊಳ್ಳಬೇಕು. ತಾವು ವಿರೋಧ ಪಕ್ಷವನ್ನು ಹಾಗೂ ವಿರೋಧ ಪಕ್ಷದ ನಾಯಕರನ್ನು ಇಷ್ಟು ಸಣ್ಣದಾಗಿ ಕಂಡಿರುವುದರಿಂದ ಸದಸ್ಯರಿಗೆ ಬಹಳ ನೋವಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರೂ ಸಹ ವಿರೋಧ ಪಕ್ಷದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದವರು. ಆಡಳಿತ ಪಕ್ಷದವರು ವಿರೋಧ ಪಕ್ಷವನ್ನು ಇಷ್ಟು ಲಘುವಾಗಿ ಕಾಣುವುದಾದರೆ ಬಹುಶಃ ಈ ಸದನದಲ್ಲಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ ಎಂದು ಹೇಳೇತ್ತೇನೆ. ಇದು ಸದನಕ್ಕೆ ಭೂಷಣವಲ್ಲ. ಇಂತಹ ಒಂದು ಸಂಸ್ಕೃತಿ ಏನು ನಡೆದಿದೆ ಇದು ಕರ್ನಾಟಕ ರಾಜ್ಯದ ಒಂದು ಪ್ರಜಾಪ್ರಭುತ್ವ ಸಂಸ್ಕೃತಿಗೆ ಭೂಷಣ ತರತಕ್ಕ ವಿಚಾರವಲ್ಲವೆಂದು ನಾನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಹುಚ್ಚಮಾಸ್ತಿಗೌಡ.—ನಾನು ವಿರೋಧ ಪಕ್ಷದ ನಾಯಕರನ್ನು ನೇರವಾಗಿ ಆಕ್ಷೇಪಣೆ ಮಾಡಿದೆನೆಂದೂ ಲಘುವಾಗಿ ಅವರ ಬಗ್ಗೆ ಮಾತನಾಡಿದೆನೆಂದೂ ಹೇಳಿದರು. ನಾನು ವಿರೋಧ ಪಕ್ಷದ ನಾಯಕರ ಬಗ್ಗೆಯಾಗಲೀ, ಅಥವಾ ಇತರೇ ಸದಸ್ಯರ ಬಗ್ಗೆಯಾಗಲೀ, ಅಥವಾ ಇತರ ಸದಸ್ಯರ ಬಗ್ಗೆಯಾಗಲೀ ಅಷ್ಟು ಲಘುವಾಗಿ ಮಾತನಾಡುವ ಸ್ವಭಾವದವನಲ್ಲ. ಎದುರು ಪಕ್ಷ ಬಲಯುತವಾಗಿ ಬೆಳೆಯಬೇಕೆಂದು ಹೇಳುವುದರಲ್ಲಿ ಅದರಿಂದ ಪ್ರಜಾಪ್ರಭುತ್ವ ಉಳಿಯುತ್ತದೆಂದು ಹೇಳುವುದರಲ್ಲಿ ನಂಬಿಕೆ ಉಳ್ಳವನು ನಾನು. ಎದುರು ಪಕ್ಷದ ನಾಯಕರಿಗೂ ಬಹಳ ಜವಾಬ್ದಾರಿಗಳು ಇವೆ. ಸರ್ಕಾರದ ಮೇಲೆ ಒಂದು ಆಕ್ಷೇಪಣೆಯನ್ನು ಮಾಡುವಾಗ ಅದಕ್ಕೆ ಅಂಕಿಅಂಶಗಳನ್ನು ಕೊಡತಕ್ಕ ರೀತಿಯಲ್ಲಿ ಅವರು ವಿಷಯವನ್ನು ಸಂಗ್ರಹ ಮಾಡಬೇಕು. ಆ

ಬಗ್ಗೆ ಒಂದು ಪಕ್ಷ ಬಹಿರಂಗವಾಗಿ ಹೇಳುವುದಕ್ಕೆ ಇಷ್ಟವಿಲ್ಲದಿದ್ದರೆ ಮುಖ್ಯಮಂತ್ರಿಗಳವರ ಬಳಿಯಾಗಲೀ ಇಂತಹ ಆಕ್ಷೇಪಣೆ ಬಂದಿದೆ ಎಂದು ಹೇಳುವುದಕ್ಕಾದರೂ ವಿಷಯ ಗೊತ್ತಿರಬೇಕಾಗುತ್ತದೆ. ಹೀಗೆ ಹೇಳದೇ ವಿಷಯವನ್ನು ಎಷ್ಟೇ ತಿರುವಿ ತಿರುವಿ ಮಾತನಾಡಿದರೂ ಕೂಡ ಅಂತಹ ಉದಾಹರಣೆಯನ್ನು ಕೊಡದೇ ಸರ್ವೇಸಾಮಾನ್ಯವಾಗಿ ಆಕ್ಷೇಪಣೆ ಮಾಡಿದಾಗ ಅವರು ಜವಾಬ್ದಾರಿಯನ್ನು ಅರಿತುಕೊಳ್ಳದೇ ಎದುರು ಪಕ್ಷ ದಕ್ಷಲ್ಲಿಲ್ಲಿ ಇದ್ದೇವೆ, ಜವಾಬ್ದಾರಿ ಅಷ್ಟು ಇದೆ ಎಂದು ಹೇಳಿದರೆ ಅದನ್ನು ತಿಳಿಯದೇ ಹೇಳುತ್ತಾರೋ ಅಥವ ತಿಳಿದೇ ಹೇಳುತ್ತಾರೋ ಎನ್ನುವ ಭಾವನೆ ಬರುತ್ತದೆ. ಇದನ್ನು ಹೇಳಿದರೇ ಹೊರತು ಇದನ್ನು ಅಲ್ಲಗಳೆಯು ತಕ್ಕ ರೀತಿಯಲ್ಲಿ ಅವರು ಮಾತನಾಡಲಿಲ್ಲ. ಅವರು ಮಾಡಿದ ಭಾಷಣದ ಕೊನೆಯವರೆಗೂ ನೇರವಾದ ಇಂತಹ ಆಕ್ಷೇಪಣೆ ಇದೆಯೇ ಹೊರತು ಭಾಷಣದಲ್ಲಿ ಸಮರ್ಥನೆ ಇರಲಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಯವಿಟ್ಟು ಕ್ಷಮಿಸಬೇಕು. ನಾನು ಅದನ್ನು ಹೇಳಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ದಾವಣಗೆರೆ ಮಿಲ್ಲತ್ ಬ್ಯಾಂಕ್ ಬಗ್ಗೆ ಮಾತನಾಡಿದರು ಎಂದು ಕೇಳ್ಪಟ್ಟೆ. ನಾವು ದಾವಣಗೆರೆ ಮಿಲ್ಲತ್ ಬ್ಯಾಂಕ್ ಬಗ್ಗೆ ಸೂಪರ್‌ಸೀಡ್ ಮಾಡಿದ್ದೇವೆ. ಸೂಪರ್‌ಸೀಡ್ ಮಾಡುವುದಕ್ಕಿಂತ ಮುಂಚೆ ಹಿಂದಿನ ಸರ್ಕಾರದಲ್ಲಿ ಶೋ ಕಾಸ್ ನೋಟೀಸ್ ಕೊಡಲಾಗಿತ್ತು. ಅಲ್ಲಿ 2 ಲಕ್ಷ 84 ಸಾವಿರ ರೂಪಾಯಿಗಳ ಶೇರ್ ವಸೂಲು ಮಾಡಿ ಕೇವಲ 2 ಲಕ್ಷ ರೂಪಾಯಿಯ ಶೇರನ್ನು ಕೊಟ್ಟಿದ್ದಾರೆ. ಸುಮಾರು 75 ಸಾವಿರ ರೂಪಾಯಿಗೆ ಅಲ್ಲಿ ಲೆಕ್ಕ ಇಟ್ಟಿಲ್ಲ. ಶೇರ್‌ಗೆ ಎಂಟ್ರಿ ತೆಗೆದುಕೊಂಡಿಲ್ಲ, ರಶೀದಿ ಕೊಟ್ಟಿದ್ದಾರೆ. ಈ ಬಗ್ಗೆ ಹಲವು ಸದಸ್ಯರು ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರ ಮೇಲೆ ದಾವಾ ಹಾಕಿದ್ದಾರೆ. ನಿಯಮ ಮುರಿದು ಸುಮಾರು 70 ವರ್ಷ ವಯಸ್ಸಿನ ಒಬ್ಬ ಮುದುಕನನ್ನು ಮೇನೇಜರ್ ಆಗಿ ನೇಮಿಸಿದ್ದಾರೆ. ಈ ಸಹಕಾರ ಸಂಘದ ಪ್ರಾರಂಭೋತ್ಸವಕ್ಕೆ 10 ಸಾವಿರ ರೂಪಾಯಿಗಳಿಗೆ ಪರಿಮಿತಿ ಕೊಟ್ಟಿದ್ದು 26 ಸಾವಿರ ರೂಪಾಯಿ ಲೆಕ್ಕ ತೋರಿಸಿದ್ದಾರೆ. ಬೈಲಾ ಸಂಖ್ಯೆ 67ರ ವಿರುದ್ಧ ಹಳೇ ವಾಹನವನ್ನು ಕೊಳ್ಳುವುದಕ್ಕೆ 1 ಲಕ್ಷ 65 ಸಾವಿರ ರೂಪಾಯಿಗಳ ಮುಂಗಡವನ್ನು ಕೊಟ್ಟಿದ್ದಾರೆ. ಮತ್ತು 56 ಸುಸ್ತೀದಾರರ ಮೇಲೆ ಕ್ರಮ ಕೈಗೊಂಡಿಲ್ಲ. ಈ ಎಲ್ಲ ಕಾರಣಗಳಿಂದ ಹಿಂದಿನ ಸರ್ಕಾರದವರು ನೋಟೀಸ್ ಕೊಟ್ಟಿದ್ದರು. ಈ ಸರ್ಕಾರ ಬಂದಮೇಲೆ ಅದು ಸೂಪರ್‌ಸೀಡ್ ಆಗಿದೆ. ಇದರಲ್ಲಿ ರಾಜಕೀಯ ಏನೂ ಇಲ್ಲ ಎಂಬುದನ್ನು ನಾಯಕರ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿರೋಧ ಪಕ್ಷದ ನಾಯಕರು ಅಂಕಿಅಂಶಗಳ ಆಧಾರದಮೇಲೆ ಸರ್ಕಾರದ ಗಮನಕ್ಕೆ ಲೋಪದೋಷಗಳನ್ನು ತರತಕ್ಕದ್ದು ಸರಿ. ಅದು ಅವರ ಕರ್ತವ್ಯ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾನು ಅನೇಕ ವರ್ಷಗಳಿಂದ ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿ ಇಲ್ಲಿ ಈಗ ಬಂದಿದ್ದೇನೆ. ವಿರೋಧಪಕ್ಷದ ಸದಸ್ಯರ ಬಗ್ಗೆ ಮತ್ತು ವಿರೋಧಪಕ್ಷದ ನಾಯಕರ ಬಗ್ಗೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೀರೆಂಬುದನ್ನು ನೆನಪಿಟ್ಟರೆ ಸಾಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ನೆನಪಿದೆ. ನಾನು ಪದೇಪದೇ ಹೇಳುತ್ತಿದ್ದೇನೆ ಮುಖ್ಯಮಂತ್ರಿಯ ನಂತರ ಇರತಕ್ಕ ಸ್ಥಾನ ವಿರೋಧ ಪಕ್ಷದ ನಾಯಕರದು ಎಂದು ತಮಗೆ ಅಷ್ಟು ಗೌರವ ಇದೆ ಈ ಸಭೆಯಲ್ಲಿ. ಮಂತ್ರಿಗಳಿಗಿಂತ ಹೆಚ್ಚಿನ ಸ್ಥಾನ ತಮ್ಮದು. ಇದು ಪ್ರಜಾಪ್ರಭುತ್ವದಲ್ಲಿ ನಡೆದುಕೊಂಡು ಬಂದ ಸಂಪ್ರದಾಯ ಪತ್ರಿಕೆಗಳಲ್ಲಿ ಅನೇಕ ವಿಷಯಗಳು ಬರುತ್ತವೆ. ಅದರ ಸತ್ಯಾಂಶಗಳನ್ನು ತಿಳಿದುಕೊಂಡು ಅದರ ಬಗ್ಗೆ ಆಧಾರಗಳ ಸಹಿತ ಟೀಕೆ ಮಾಡಿದರೆ ಅದಕ್ಕೆ ಹೆಚ್ಚಿನ ತೂಕ ಬರುತ್ತದೆ. ಸರ್ಕಾರ ಕೂಡ ಅದನ್ನು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಸುಮ್ಮನೆ ಟೀಕೆಗಾಗಿ ಟೀಕೆ ಮಾಡತಕ್ಕ ರೀತಿಯಲ್ಲಿ ಮಾಡಿದರೆ ಸರಿಯಾಗುವುದಿಲ್ಲ. ಪತ್ರಿಕೆಯಲ್ಲಿ ಬಂದ ವಿಚಾರದಲ್ಲಿ ಹೇಳುವುದಾದರೆ ಅದರ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತದೆ. ಒಂದು ವಿಷಯವನ್ನು ತಮಗೆ ಹೇಳಬೇಕೆಂದರೆ ಅದು ಹಿಂದಿನದನ್ನು ಕೆಣಕಿದಂತಾಗುತ್ತದೆ. ಅಧಿಕಾರಿಗಳ ಮೇಲೆ ಚಾರ್ಜ್‌ಷೀಟ್ ಇದ್ದರೂ ಬಡ್ತಿ ಕೊಟ್ಟಿದ್ದಾರೆ. ನಮಗಿರತಕ್ಕ ಕಷ್ಟ ಎಂದರೆ ಹಿಂದಿನದನ್ನು ಕೆದಕದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗಿದೆ. ವಿಜಿಲೆನ್ಸ್‌ನವರು ಯಾವ ತಾರೀಖಿನಲ್ಲಿ ಕಂಪ್ಲೇಂಟ್ ಮಾಡಿದ್ದಾರೆ ಎಂಬುದು ತಮಗೆ ಗೊತ್ತಿದೆಯೇ ? ಈ ಸರ್ಕಾರ ಬಂದಮೇಲೆ ಆಗಿದೆಯೋ ಅಥವಾ ಹಿಂದೆ ಆಗಿದೆಯೋ ? ತಾವು ವೆರಿಫೈ ಮಾಡಿಕೊಳ್ಳಬೇಕು. ಇದನ್ನು ಈ ಸರ್ಕಾರ ಬರುವುದಕ್ಕಿಂತ ಮೊದಲೇ ಆಗಿದ್ದರೆ ಅದರ ಅರ್ಥ ಏನಾಗುತ್ತದೆ ? ನಮ್ಮ ಸರ್ಕಾರ ಬಂದಮೇಲೆ ಮಾಡಿದ್ದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಕಂಪ್ಲೇಂಟ್ ಬಂದಿದ್ದು ಯಾವಾಗ? ಯಾವ ಸರ್ಕಾರ ಇದ್ದಾಗ ಬಂದಿದೆ ? ತಾವು ಹೇಳುವುದಕ್ಕಿಂತ ಮೊದಲು ಇದನ್ನು ವೆರಿಫೈ ಮಾಡಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ತಾವು ಹೇಳಿರುವ ಬಗ್ಗೆ ವಿಚಾರ ಮಾಡುತ್ತೇವೆ, ಯಾರೇ ತಪ್ಪಿತಸ್ಥರಿರಲಿ ಭ್ರಷ್ಟಾಚಾರಿಗಳಿರಲಿ ಅವರ ಮೇಲೆ ನೇರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಭರವಸೆ ಕೊಡುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಚಾರ್ಜ್‌ಷೀಟ್ ಇದ್ದಾಗ ಪ್ರಮೋಷನ್ ಕೊಡತಕ್ಕದ್ದಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದರ ಬಗ್ಗೆ ನಾನು ವಾದಕ್ಕಿಳಿಯುವುದಿಲ್ಲ. ಅದು ಆಗಿರಬಹುದು. ಆಡಳಿತ ಕ್ರಮದಲ್ಲಿ ಒಂದೊಂದು ಸಾರಿ ಆಪಾದನೆಗಳು ಬರುತ್ತವೆ. ಚಾರ್ಜ್‌ಷೀಟ್ ಇರುತ್ತವೆ. ಎಷ್ಟೋ

ವರ್ಷಗಳು ಕೇಸ್ ನಡೆಯುತ್ತಿರುತ್ತದೆ. ಆಗ ಆ ಅಧಿಕಾರಿಗಳಿಗೆ ಸಂಬಳ ಕೂಡ ಕೊಡತಕ್ಕ ಪರಿಸ್ಥಿತಿ ಬರುತ್ತದೆ ಹಾಗಿರುವಾಗ ಅವರನ್ನು ಸುಮ್ಮನೆ ಕೂರಿಸಿ ಸಂಬಳ ಏತಕ್ಕೆ ಕೊಡಬೇಕು ಎಂದು ನೇಮಕ ಮಾಡತಕ್ಕದ್ದು, ಬಡ್ತಿ ಕೊಡತಕ್ಕದ್ದು ನಡೆಯುತ್ತಿರುತ್ತದೆ. ಇದು ನಿನ್ನೆ ಮೊನ್ನೆಯ ಕ್ರಮವಲ್ಲ, ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದನ್ನು ತಕ್ಷಣ ನಿಲ್ಲಿಸಬೇಕೆಂದು ಪ್ರಯತ್ನಪಟ್ಟರೂ ಕಷ್ಟವಾಗಬಹುದು. ತಕ್ಷಣ ಎರಡು ಮೂರು ತಿಂಗಳಲ್ಲೇ ಕೇಸ್ ತೀರ್ಮಾನವಾಗಿ ಕೆಲಸ ಆದರೆ ಒಳ್ಳೆಯದಾಗುತ್ತದೆ. ಸಹಕಾರ ಇಲಾಖೆಯಲ್ಲಿ ಒಂದು ಕೇಸ್ 10 ವರ್ಷಗಳಿಂದ ನಡೆಯುತ್ತಿದೆ. ಹಾಗಾದರೆ ಅಷ್ಟು ವರ್ಷ ಅಧಿಕಾರಿಗಳಿಗೆ ಕೂರಿಸಿ ಸಂಬಳ ಕೊಡುತ್ತೀರಾ ? ಅವನಿಗೆ ಕೊಡುವಂಥ ಬಡ್ತಿಯನ್ನು ಹೇಗೆ ನಿಲ್ಲಿಸುತ್ತೀರಿ ? ಇಂಥ ಜಟಿಲವಾದ ಪ್ರಶ್ನೆಗಳು ಬರುತ್ತದೆ. ಆದ್ದರಿಂದ ಬಡ್ತಿ ಕೊಟ್ಟಿರಬಹುದು. ಒಂದು ವೇಳೆ ನಾವು ಒಂದು ನಿಯಮ ಮಾಡಿ ಚಾರ್ಜ್‌ಷೀಟ್ ಇದ್ದಾಗ ಸಂಬಳ ಕೊಡುವುದು ಬೇಡ, ನೌಕರಿ ಕೊಡುವುದು ಬೇಡ, ಬಡ್ತಿ ಕೊಡುವುದು ಬೇಡ ಎಂದು ಹೇಳಿದರೆ ಆ ಕೇಸ್ ಎಷ್ಟೋ ವರ್ಷಗಳು ಹಾಗೇ ಉಳಿದಾಗ ಬಹಳ ಕಷ್ಟವಾಗುತ್ತದೆ. ಇದನ್ನು ಬದಲಾವಣೆ ಮಾಡಬೇಕಾದರೆ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಪುನರ್ ವಿಚಾರ ಮಾಡಬೇಕಾಗುತ್ತದೆ. ಇಂಥ ವಿಚಾರಗಳು ಬೇಕಾದಷ್ಟಿವೆ. ನನಗೆ ಗೊತ್ತಿರುವ ಹಾಗೆ ಎಷ್ಟೋ ಅಧಿಕಾರಿಗಳು ಹಣ ದುರುಪಯೋಗ ಮಾಡಿರುತ್ತಾರೆ, ಫೈಲ್‌ಗಳನ್ನು ಹಾಗೇ ಇಟ್ಟಿರುತ್ತಾರೆ, ಇನ್ನೇನು ನಿವೃತ್ತರಾಗಬೇಕು ಎನ್ನುವಾಗ ಫೈಲ್ ಕೊಡುತ್ತಾರೆ. ನಿವೃತ್ತರಾದ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ; ಇಂಥ ಪರಿಸ್ಥಿತಿಯೂ ಬರುತ್ತದೆ. ಆಡಳಿತ ದೃಷ್ಟಿಯಿಂದ ಜಾಗ್ರತೆ ತೆಗೆದುಕೊಳ್ಳತಕ್ಕ ಕ್ರಮ ಮಾಡಬೇಕೇ ವಿನಹ ಚಾರ್ಜ್‌ಷೀಟ್ ಇದೆ ಎಂದು ಹಾಗೆ ಕೂತರೆ ತೊಂದರೆಯಾಗುತ್ತದೆ. ನಾನು ಯಾವುದೇ ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಹೇಳುತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿರಿಯ ಸದಸ್ಯರಾದ ರಂಗನಾಥ್ ಅವರು ಹೇಳಿದಹಾಗೆ ವಿಚಾರಣೆ ನಡೆಯುತ್ತಿದ್ದಾಗ ನೇಮಕ ಮಾಡತಕ್ಕದ್ದು, ಬಡ್ತಿ ಕೊಡತಕ್ಕದ್ದು ನಡೆಯಬಹುದು. ಆದರೆ ಪ್ರೈಮಾಫೇಸಿ ಕೇಸ್ ಇದ್ದು ಕೋರ್ಟ್‌ಗೆ ಚಾರ್ಜ್‌ಷೀಟ್ ಹೋದರೆ ಅಂಥ ಕಡೆ ಕೊಡಬಾರದು ಎಂದು...

ಶ್ರೀ ಕೆ. ಹೆಚ್. ರಂಗನಾಥ್.—ಜಾಗ್ರತೆ ವ್ಯವಸ್ಥೆ ಮಾಡಬೇಕು. ಲೇಬರ್ ಕೋರ್ಟ್ ಬೇರೆ ಮಾಡುತ್ತೇವೆಂದು ಹೇಳಿದ್ದೀರಿ. ಹೀಗಿದ್ದಾಗ Why should the cases be pending for years together ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸರ್ಕಾರ ಬಂದಮೇಲೆ 6 ತಿಂಗಳಿಗಿಂತ ಹೆಚ್ಚಾದರೂ ಸಸ್ಪೆಂಡ್‌ನಲ್ಲಿರುವ ಅಧಿಕಾರಿಗಳ ಪಟ್ಟಿ ತಯಾರಿಸಿ ಅವರನ್ನು ಪುನರ್ ನೇಮಕ ಮಾಡುವ ಬಗ್ಗೆ ಆಲೋಚನೆ ಮಾಡಿದ್ದೇವೆ. ಆ ಪಟ್ಟಿಯನ್ನು ಸಹ ನಾವು ಕೇಳಿದ್ದೇವೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೆ, 1982-83ರ ಪೂರಕ ಆಯವ್ಯಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುತ್ತಾ ನಾನು 24 ನೇ ಬೇಡಿಕೆ ಕುರಿತು ಒಂದು ಮಾತು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಈ ಬಗ್ಗೆ ಹೇಳಿದ ಮಾತಿನಲ್ಲಿ ಸತ್ಯಾಂಶ ಇದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಯಾರೋ ಕೆಲವುವ್ಯಕ್ತಿಗಳು ಜಾಗೃತ ಆಯೋಗವನ್ನು ನಿಷ್ಕ್ರಿಯಗೊಳಿಸಿದ್ದಾರೆ. ಅದು ಯಾರು ಎಂಬುದು ನನಗಂತೂ ತಿಳಿದಿಲ್ಲ. ಜಾಗೃತ ಆಯೋಗ ನಿಷ್ಕ್ರಿಯಗೊಂಡಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳಂತೂ ಇವೆ. ಆ ದೃಷ್ಟಿಯಿಂದ ಹೇಳುವುದಾದರೆ ಅಬಕಾರಿ ಇಲಾಖೆಯಲ್ಲಿದ್ದು ಇನ್ನೇನು ಮುಖ್ಯ ಕಾರ್ಯದರ್ಶಿಯಾಗುತ್ತಾರೆ ಎಂಬ ಅಧಿಕಾರಿಯ ಮನೆಯ ಮೇಲೆ ದಾಳಿ ಮಾಡಿದನಂತರ ಅಲ್ಲಿ ಎಷ್ಟು ಹಣ ಸಿಕ್ಕಿದೆ, ಅವರ ಮೇಲೆ ಏನು ಮೊಕದ್ದಮೆ ಹೂಡಿದ್ದಾರೆ ಎಂಬುದು ಇದುವರೆಗೂ ಗೊತ್ತಾಗಿಲ್ಲ. ಇದು ಸದನದಲ್ಲಿ ಚರ್ಚೆಯಾಗಿತ್ತು. ಆದರೂ ಈ ವಿಷಯ ಬಹಿರಂಗವಾಗಲಿಲ್ಲ. ಅಂದಮೇಲೆ ವಿಜಿಲೆನ್ಸ್ ನಿಷ್ಕ್ರಿಯವಾಗಿದೆಯೋ ಇಲ್ಲವೋ ಎಂಬುದು ಗಮನಾರ್ಹವಾದುದು. ಅದೇ ರೀತಿ ಕಳೆದ ಒಂದು ವರ್ಷದ ಹಿಂದೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ಮನೆ ಮೇಲೆ ಧಾಳಿ ನಡೆದು ಕೋಟ್ಯಾಂತರ ರೂಪಾಯಿ ಅಲ್ಲಿ ಸಿಕ್ಕಿತು ಎಂದು ಪತ್ರಿಕೆಯಲ್ಲಿ ಬಂತು. ಆಮೇಲೆ ವಿಜಿಲೆನ್ಸ್ ಏನು ಮಾಡಿತೋ ಗೊತ್ತಿಲ್ಲ. ಅದನ್ನು ಯಾರು ನಿಷ್ಕ್ರಿಯಗೊಳಿಸಿದರು ಎಂಬುದನ್ನು ವಿಚಾರ ಮಾಡಬೇಕು. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅಧ್ಯಕ್ಷರ ಮೇಲೆ ಆಪಾದನೆಗಳುಬಂತು. ಸದನದ ಮುಂದೆ ಚರ್ಚೆಯಾಯಿತು. ಅದೇನಾಯಿತೋ ಗೊತ್ತಾಗಲಿಲ್ಲ. ಇದರಲ್ಲೂ ವಿಜಿಲೆನ್ಸ್ ಸಕ್ರಿಯವಾಗಿದೆಯೋ ನಿಷ್ಕ್ರಿಯವಾಗಿದೆಯೋ ನೋಡಬೇಕು. ಇನ್ನೊಂದು ವಿಷಯವನ್ನು ನಾನು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. 28ನೇ ಫೆಬ್ರುವರಿಯ "ಆನ್‌ಲುಕರ್" ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಯಾರೋ ಒಬ್ಬರು ಆಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಮುಖ್ಯಮಂತ್ರಿಗಳ ಮನೆಯಲ್ಲಿ ಧಾಳಿ ನಡೆಸಿದಾಗ 11 ಕೋಟಿ ರೂಪಾಯಿ ಸಿಕ್ಕಿತು, ಅರ್ಥಸಚಿವರ ಮನೆಯಲ್ಲಿ ಧಾಳಿ ನಡೆಸಿದಾಗ 13 ಕೋಟಿ ರೂಪಾಯಿ ಸಿಕ್ಕಿತು ; ಆಮೇಲೆ ಈ ಹಣವೆಲ್ಲಾ ಪಾರ್ಟಿ ಫಂಡ್‌ಗೆ ಎಂದು ತಿಳಿಸಿದ್ದಾರೆ ದಂಬುದಾಗಿ ವರದಿಯಾಗಿದೆ. ವಿಜಿಲೆನ್ಸ್ ಈ ಬಗ್ಗೆ ಏನು ಮಾಡಿತು ? ಈ ಹಣದಲ್ಲಿ ನಮ್ಮ ರಾಜ್ಯದ ಹಣ ಎಷ್ಟು ? ಯಾವ ಸರ್ಕಾರ ಈ ವಿಜಿಲೆನ್ಸ್‌ನ್ನು ನಿಷ್ಕ್ರಿಯಗೊಳಿಸಿತು ಎಂಬುದು ಇಲ್ಲಿ ಕುಳಿತಿರತಕ್ಕವರಿಗೆ ಸಂದೇಹಾಸ್ಪದ ವಿಷಯವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಸ್ವಾಗತಾರ್ಹವಾದ ಮಾತು

ಎಂದರೆ ನ್ಯಾಯಮೂರ್ತಿಗಳು ಕೊಟ್ಟಂಥ ವರದಿಗಳು ಚರ್ಚೆಯಾಗುವುದಿಲ್ಲ, ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಗಳು ಚರ್ಚೆಯಾಗುವುದಿಲ್ಲ. ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿರುವುದು. ಇದಕ್ಕೆ ಒಂದು ನಿದರ್ಶನ ಎಂದರೆ ಹತ್ತಾರು ಜನ ರೈತರನ್ನು ಸರ್ಕಾರದವರು ಗುಂಡಿಟ್ಟು ಕೊಂದ ಬಗ್ಗೆ ನ್ಯಾಯಮೂರ್ತಿ ಕೆಂಪೇಗೌಡ ತನಿಖಾ ಸಮಿತಿಯನ್ನು ನೇಮಿಸಲಾಗಿದ್ದು ಅವರು ವರದಿಯನ್ನು ಸಲ್ಲಿಸಿದರು. ಅದು ಸದನದ ಮುಂದಿಟ್ಟು ಒಂದು ವರ್ಷಗಳಾದರೂ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ನ್ಯಾಯಮೂರ್ತಿಗಳಿಗೆ ಸರ್ಕಾರ ಕೊಡುವ ಗೌರವ ಇದೇನಾ ಎಂದು ಕೇಳಬೇಕಾಗಿದೆ. ಇಂಥ ವರದಿಗಳು ಎಷ್ಟಿವೆ ? ಗೋಪಿನಾಥಂ ಕೆರೆ ಒಡೆದಾಗ 60 ಜನ ಸತ್ತುಹೋದರು. ಅದರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಕೊಟ್ಟ ವರದಿಯ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ಹೀಗೆ ಅನೇಕ ನ್ಯಾಯಮೂರ್ತಿಗಳ ವರದಿ ಇದ್ದಾಗ್ಯೂ ಕೂಡ ಯಾವುದೇ ಕ್ರಮವನ್ನು ಸರ್ಕಾರದವರು ಇದುವರೆಗೂ ತೆಗೆದುಕೊಂಡಿಲ್ಲ. ಯಾವುದೇ ಕ್ರಮವನ್ನೂ ಜರುಗಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿಲ್ಲ. ನಾವು ಮಾಡಲಿಲ್ಲ, ನೀವಾದರೂ ಮಾಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿರುವುದನ್ನು ಎಚ್ಚರಿಕೆಯ ಮಾತು ಎಂದು ಸ್ವೀಕಾರ ಮಾಡಿ ಇಂಥ ವರದಿಗಳು ಯಾರಿಂದಲೇ ಬಂದಿರಲಿ ಅದನ್ನು ಕಾರ್ಯಗತಗೊಳಿಸುವುದು ಅಗತ್ಯ ಎಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ON LOOKER ಪತ್ರಿಕೆಯಲ್ಲಿ ಬಂದಿರುವುದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆನೋ ?

ಶ್ರೀ ಹೆಚ್. ಗಂಗಾಧರನ್.—ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು ಹಾಗೂ ಕಾರ್ಮಿಕ ಮಂತ್ರಿಗಳು ; 28ನೇ ಫೆಬ್ರವರಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಫೆಬ್ರವರಿ 28ನೇ ಆನ್‌ಲುಕರ್ ಪತ್ರಿಕೆಯನ್ನು ನಾನು ನೋಡಿದ್ದೇನೆ ಇದರ ಬಗ್ಗೆ ಆ ಪತ್ರಿಕೆಯ ಸಂಪಾದಕರಿಗೆ ಕೂಡ ಪತ್ರ ಬರೆದಿದ್ದೇನೆ. ನನ್ನ ಮನೆ ರೈಡಾಗಿದೆಯೆಂದು ಆನ್‌ಲುಕರ್ ಪತ್ರಿಕೆಯಲ್ಲಿ ಪ್ರಕಟವಾಗಿದೆ; ನನ್ನ ಮನೆ ರೈಡೂ ಆಗಿಲ್ಲ; ನನ್ನ ಮನೆಯಲ್ಲಿ ಹಣವೂ ಇಲ್ಲ; ನನ್ನ ಸ್ನೇಹಿತರ ಮನೆಯಲ್ಲಿ, ಸಂಬಂಧೀಕರ ಮನೆಯಲ್ಲಿ ಕೂಡ ಹಣ ಸಿಕ್ಕಿದ್ದರೆ ನಾನು ನನ್ನ ರಾಜಕೀಯ ಜೀವನದಿಂದ ನಿವೃತ್ತಿಯಾಗುತ್ತಿದ್ದೇನೆಂದು ಪತ್ರಿಕೆಯ ಸಂಪಾದಕರಿಗೂ ಹಾಗೂ ನನ್ನ ಹಣಕಾಸಿನ ಮಂತ್ರಿಯವರಿಗೂ ಪತ್ರ ಬರೆದಿದ್ದೇನೆ. I will deposit my resignation letter in this house, if you are ready to hold an enquiry. If it is proved that ride has taken place you can take any action against me

ಇಂಥಾದ್ದು ಏನೂ ನಡೆದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದೆ.

ಶ್ರೀ ಕೆ. ಹೆಚ್. ರಂಗನಾಥ್.—ವಿಜಿಲೆನ್ಸ್ ಕಮಿಷನ್ ರೂಲ್ಸ್‌ನಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಲೋಕಾಯುಕ್ತ ಬಂದಿರುವುದು.

ಶ್ರೀ ಹೆಚ್. ಗಂಗಾಧರನ್—ಅನ್ನವಿಲ್ಲದೆ, ಉದ್ಯೋಗ ಇಲ್ಲದೆ ಈ ದೇಶದ ಕನ್ನಡ ನಾಡಿನ ಜನತೆಗೆ ಕಾಳು ಕೊಟ್ಟು ಉದ್ಯೋಗ ಕೊಡಿ ಎಂದು ಕೇಂದ್ರ ಸರ್ಕಾರ ಕೊಟ್ಟರೆ ಅದರಲ್ಲಿ ಮಂತ್ರಿಗಳು ಶಾಮೀಲಾಗಿ ತಿಂದಿರುವ ವಿಷಯ ಕೂಡ ಈ ಸದನದಲ್ಲಿ ಚರ್ಚೆ ಆಗಿದೆ. ಆಗನಾವು ಹೊಸ ಸದಸ್ಯರುಗಳಾಗಿದ್ದೆವು, ಜನತೆಗೆ ಕೊಡಬೇಕಾದ್ದನ್ನು ಮಂತ್ರಿಗಳು ತಿಂದಿರುವುದನ್ನು ವಿಚಾರಿಸಲು ಸಿ.ಓ.ಡಿ. ತನಿಖೆ ನಡೆಯಿತು. ವಿಜಿಲೆನ್ಸ್‌ನವರು ವರದಿ ಕೊಟ್ಟರೋ ಏನೋ ಗೊತ್ತಾಗಲಿಲ್ಲ. ಯಾವುದೇ ಸರ್ಕಾರ ಇರಲಿ, ಈ ಕಡೆ ಆಪಾದನೆ ಬಂದಾಗ, ವರದಿಗಳು ಬಂದಾಗ ಅವುಗಳ ಬಗ್ಗೆ ಕ್ರಮ ಜರುಗಿಸದೇ ಹೋದರೆ ಸಾರ್ವಜನಿಕರಿಗೆ ಅನುಮಾನ ಬರುತ್ತದೆ. ಸರ್ಕಾರದವರು ಮತ್ತು ಅಧಿಕಾರಿಗಳು ಶಾಮೀಲಾಗಿದ್ದಾರೆಂದು ಅನುಮಾನ ಬರಲಿಕ್ಕೆ ಸಾಧ್ಯವಿದೆ. ಇಂಥ ಅನುಮಾನಗಳು ಪರಿಹಾರವಾಗಬೇಕಾದರೆ ವರದಿಗಳನ್ನು ಸಭೆಯ ಮುಂದಿಟ್ಟು, ಇವುಗಳ ಬಗ್ಗೆ ತೀವ್ರವಾದ ಕ್ರಮಗಳನ್ನು ಜರುಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಸರ್ಕಾರ ತೀವ್ರವಾದ ಗಮನಕೊಡಬೇಕೆಂಬ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಇನ್ನು ಬೇಡಿಕೆ (5) ಐಟಂ ನಂ. 4-7-12ರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಮೈಸೂರು ಸಕ್ಕರೆ ಕಾರ್ಖಾನೆಗೆ ಅನುದಾನ ಕೊಡುವುದನ್ನು ಬಹಳ ವರ್ಷಗಳಿಂದ ನೋಡಿಕೊಂಡು ಬರುತ್ತಿದ್ದೇವೆ. ಕಳೆದ ವರ್ಷ ತನ್ನ ವರದಿಯನ್ನು ಕೊಟ್ಟಂಥ ಕಾಲದಲ್ಲಿ ಒಂದೂವರೆ ಕೋಟಿ ರೂಪಾಯಿಗಳು ಲಾಭ ಬಂದಿದೆ ಎಂದು ತಿಳಿಸಲಾಗಿತ್ತು. ಆದರೂ ಕಬ್ಬಿನ ಬೆಲೆ ಏರಲಿಲ್ಲ ; ರೈತರಿಗೆ ಹಣ ಸಿಕ್ಕಲಿಲ್ಲ ; ಕೆಲಸ ಮಾಡತಕ್ಕ ಜನರಿಗೆ ಕೂಲಿ ಹೆಚ್ಚಲಿಲ್ಲ. ಸಕ್ಕರೆ ಬೆಲೆ ಮಾತ್ರ ಅಧಿಕವಾಯಿತು. It is stated that the amount to be adjusted against the purchase tax arrer Rs. 205.27 Lakhs. It is further stated that a sum of Rs. 50 Lakhs be treated as investment in the equity share capital of Mysore Sugar Company Pvt. Ltd., ಮತ್ತೆ ಮತ್ತೆ ನುಂಗತಕ್ಕ ಕಾರ್ಖಾನೆಗಳಿಗೆ ಬಂಡವಾಳ ಹಾಕತಕ್ಕಂಥ ಪ್ರವೃತ್ತಿಯನ್ನು

ಬೆಳೆಸಿಕೊಂಡು ಬಂದು ಈ ದೇಶದ ಬಡಜನತೆಯ ಹಣವನ್ನು ನೀರಿನ ಹೊಳೆಯಂತೆ ವೆಚ್ಚ ಮಾಡುವುದು ಸರಿಯೆ ಎಂದು ನಾನು ಕೇಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ವರದಿ ಕೊಟ್ಟಿದ್ದಾರೆ. ಮೈಸೂರು ಅಸಿಟೇಟ್ ಕೆಮಿಕಲ್ ಫ್ಯಾಕ್ಟರಿಗೆ 60 ಲಕ್ಷ ರೂಪಾಯಿ ಅನುದಾನ ಕೊಡುವುದಕ್ಕೆ ಹೋಗಿದ್ದೀರಿ. ಸುಮಾರು 30 ಕೋಟಿ ರೂಪಾಯಿ ಬಂಡವಾಳ ಇರತಕ್ಕ ಕಾರ್ಖಾನೆಯನ್ನು 5 ಕೋಟಿ ರೂಪಾಯಿಗಳಿಗೆ ಮಹಾರಾಷ್ಟ್ರ ಸರ್ಕಾರದವರಿಗೆ ಮಾರಾಟ ಮಾಡಬೇಕೆಂದು ತೀರ್ಮಾನ ಮಾಡಿದ ಸಂದರ್ಭದಲ್ಲಿ ಪ್ರತಿಭಟನೆ ಮಾಡಿದ್ದಕ್ಕೆ ಅದು ನಿಂತುಹೋಯಿತು. ಇವತ್ತು ದಿನ ಒಂದಕ್ಕೆ ಒಂದು ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಇದರ ಮೇಲೆ ಹಾಕಿರತಕ್ಕ ಹಣ ಯಾರ ಮೇಲೆ ಹೊರೆಯಾಗುತ್ತದೆ. ಸರ್ಕಾರ ಇದರ ಕಡೆ ತಾವು ತೀವ್ರವಾಗಿ ಗಮನಹರಿಸಬೇಕು. ಇನ್ನು ಕರ್ನಾಟಕ ಷಿಪ್ಪಿಂಗ್ ಕಾರ್ಪೊರೇಷನ್‌ನಲ್ಲಿ ಎರಡು ಹಡಗುಗಳು ಇವೆ. ಒಂದು ಎಂ.ವಿ. ಕರ್ನಾಟಕ ಇನ್ನೊಂದು ಎಂ ವಿ ಕೃಷ್ಣರಾಜ ಎಂದು, ಇವು 1978-79ರಿಂದ ನಷ್ಟದಲ್ಲಿಯೇ ಬಂದಿವೆ.

ಶ್ರೀ ಕೆ. ಹೆಚ್. ರಂಗನಾಥ್.—ಹಡಗಿನ ವ್ಯಾಪಾರ ಸುಮ್ಮನೆ ಏನು ?

ಶ್ರೀ ಹೆಚ್. ಗಂಗಾದರನ್— ಮಾನ್ಯ ಸಭಾಧ್ಯಕ್ಷರೇ ಒಟ್ಟು ನಾಲ್ಕು ಕೋಟಿ ರೂಪಾಯಿ ನಷ್ಟ ಅನುಭವಿಸಿದೆ, ನಮ್ಮ ಹಿಂದಿನ ಹಣಕಾಸಿನ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ :

"Two ships belonging to the Karnataka Shipping Corporation will be sold to the Union Government in a couple of weeks the Karnataka Finance Minister Mr. Veerappa Moily told the assembly answering a question. Mr Moily said that the Shipping Corporation has incurred a carry over lose of 3.87 crores and the buyers should take over the ship along with liability." ಎಂಬ ಮಾತನ್ನು ಸುಮಾರು 6 ತಿಂಗಳ ಹಿಂದೆ ಹೇಳಿದ್ದಾರೆ. ಮುಳುಗುತ್ತಿರುವ ಹಡಗಿಗೆ ಮತ್ತೆ ದುಡ್ಡು ಮುಳುಗಿಸುತ್ತಿರುವುದು ದುಃಖದ ಸಂಗತಿಯಾಗಿದೆ. 6 ತಿಂಗಳು ಹಿಂದೆಯೇ ಮಾರಾಟ ಮಾಡಬೇಕಾಗಿತ್ತು. ಆ ಕೆಲಸವನ್ನು ಏತಕ್ಕೆ ಮಾಡಲಿಲ್ಲ ? ನಾಲ್ಕು ಕೋಟಿ ನಷ್ಟವಾಗಿರತಕ್ಕ ಸಂಸ್ಥೆಗೆ ಮತ್ತೆ 28 ಲಕ್ಷ ಹೆಚ್ಚಿಗೆ ಕೊಡುವುದು ಯುಕ್ತವೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಐಟಂ ನಂ.10ರಲ್ಲಿ ಕೆಲವು ಇಂಜಿನಿಯರಿಂಗ್ ಕಾಲೇಜುಗಳಿಗೆ ಸಲಕರಣೆಗಳನ್ನು ಒದಗಿಸುವ ಸಲುವಾಗಿ ಹಣ ಇಟ್ಟಿದ್ದೀರಿ. ಆದರೆ ಯಾವ ಯಾವ ಕಾಲೇಜಿಗೆ ಎಷ್ಟೆಷ್ಟು ಕೊಡುತ್ತೀರೆಂಬುದನ್ನು ಸಭೆಯ ಮುಂದಿಡಬೇಕು.

3 ಪಿ. ಎಂ.

ಇನ್ನು ಡಿಮ್ಯಾಂಡ್ ನಂಬರ್ 12ರ ಬಗ್ಗೆ ಹೇಳಬೇಕೆಂದರೆ, ಹಿಂದಿನ ಅರ್ಥ ಸಚಿವರು ಚಾಮರಾಜ ಆರ್ಟ್ ಅಕಾಡಮಿ ಪ್ರತ್ಯೇಕವಾಗಿ ಮಾಡಬೇಕೆಂದು ಅದಕ್ಕೆ ಒಂದು ದೊಡ್ಡ ಕಾಲೇಜ್ ಸ್ಟೇಟಸ್ ತರಬೇಕೆಂದು ಹಣ ಮಂಜೂರು ಮಾಡಿದ್ದರು. ಅದಕ್ಕೆ ಈಗ ಹಣ ಕೇಳಿದ್ದೀರಿ. ಈ ಒಂದು ಕಲಾ ಶಾಲೆ ಏನಾಗಿದೆ ಎಂದರೆ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್ ಕೈವಶಕ್ಕೆ ಸಿಕ್ಕಿ ಅದು ಬೆಳೆಯಲಿಕ್ಕೆ ಅವಕಾಶವಾಗಿಲ್ಲ. ಅದು ಹಾಳಾಗುತ್ತಿದೆ. ಹಿಂದಿನ ಸರ್ಕಾರ ತೆಗೆದುಕೊಂಡ ನಿಲುವಿಗೆ ಪುಷ್ಟೀಕರಿಸಿ, ಬಾಂಬೆಯಲ್ಲಿ ಆರ್ಟ್ ಕಾಲೇಜು ಏನಿದೆ ಅದಕ್ಕಿಂತಲೂ ಹೆಚ್ಚಿನ ಅವಕಾಶ ಇದಕ್ಕೆ ಮಾಡಿಕೊಡಬೇಕೆಂದು ಒತ್ತಾಯಪಡಿಸುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಮಾತು ಹೇಳಬೇಕೆಂದರೆ, ಜಯದೇವ ಸ್ಕೂಲ್ ಆಫ್ ಆರ್ಟ್ಸ್ ರೀತಿಯಲ್ಲಿ ನಮ್ಮಲ್ಲಿರತಕ್ಕ ಕಲಾ ಕಾಲೇಜು ಅಭಿವೃದ್ಧಿ ಪಡಿಸಿದರೆ ಮಹದುಪಕಾರವಾಗುತ್ತದೆ. ಮೈಸೂರು ಕಲಾಕೇಂದ್ರ. ಈ ಸದನದಲ್ಲಿರತಕ್ಕ ರಾಷ್ಟ್ರದ ಮಹಾನ್ ನಾಯಕರ ಆರು ಭಾವಚಿತ್ರಗಳನ್ನು ಬರೆದವರು ಮೈಸೂರಿನವರು. ಜಗತ್‌ಪ್ರಸಿದ್ಧಿಯಾದ ಕಲೆಯನ್ನು ಅವರು ಸೃಷ್ಟಿಸಿದ್ದಾರೆ. ಮಹಾತ್ಮಗಾಂಧಿ, ಡಾ॥ರಾಜೇಂದ್ರಪ್ರಸಾದ್, ಡಾ॥ ರಾಧಾಕೃಷ್ಣನ್, ಜವಾಹರಲಾಲ್ ನೆಹರೂ, ವಲ್ಲಭಾಯಿ ಪಟೇಲ್ ಅವರ ಚಿತ್ರವನ್ನು ಬರೆದವರು ಮೈಸೂರಿನವರೆ. ಮಧುಗಿರಿ ರಾಮು ಅವರು ಡಾ॥ಅಂಬೇಡ್ಕರ್ ಭಾವ ಚಿತ್ರವನ್ನು ಬರೆದರು. ಕಲಾಶಾಲೆಗೆ ಮಾರ್ಗದರ್ಶಿಗಳಾದ ಸಿದ್ಧಲಿಂಗ ಶಾಸ್ತ್ರಿಯವರು ಜರ್ಮನಿಯಲ್ಲಿ ಕೀರ್ತಿಯನ್ನು ಪಡೆದಿದ್ದಾರೆ. ದಿನಾಂಕ 24ನೇ ಜನವರಿ 1980ರಲ್ಲಿ ಈ ಸದನದಲ್ಲಿ ಒಬ್ಬ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಸಂದರ್ಭದಲ್ಲಿ ನಾವು ಒಂದು ಮನವಿಯನ್ನು ಮಾಡಿಕೊಂಡೆವು. ಜಯಪ್ರಕಾಶ್ ನಾರಾಯಣ್ ಅವರು ನಿಧನರಾದಾಗ ಅವರ ಭಾವಚಿತ್ರವನ್ನು 6 ತಿಂಗಳಲ್ಲಿ ಹಾಕಬೇಕೆಂದು ಅಂದಿನ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೆವು. ಅದು ಇದುವರೆಗೂ ಈಡೇರಿಲ್ಲ. ಆದುದರಿಂದ, ಜನತಾ ಸರ್ಕಾರ ಅವರಒಂದು ಭಾವಚಿತ್ರವನ್ನು ಹಾಕಬೇಕು. ಅಕ್ಟೋಬರ್ 8ನೇ ತಾರೀಖಿನ ಅವಧಿಗೆ ನಾಲ್ಕುವರ್ಷದ ವೈಕುಂಠ ಸಮಾರಂಭದ ಹೊತ್ತಿಗೆ ಆಳೆತ್ತರದ ಅವರ ಒಂದು ಭಾವಚಿತ್ರವನ್ನು ಅನಾವರಣ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಕೆ. ಮಲ್ಲಪ್ಪ.—ಅವರ ಭಾವಚಿತ್ರದ ಜೊತೆಗೆ ನಗರದ ಮುಖ್ಯವಾದ ಸ್ಥಳದಲ್ಲಿ ಅವರ ಪ್ರತಿಮೆ

ಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಈ ಸದನದಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಭಾವ ಚಿತ್ರ ಬರುತ್ತದೆ ಎನ್ನುವ ಆಸೆ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದೇನೆ. ಇನ್ನು 13ನೇ ಬೇಡಿಕೆಯ ಮೇಲೆ ಮಾತನಾಡಬೇಕೆಂದರೆ, 39 ಸೆಕೆಂಡರಿ ಸ್ಕೂಲುಗಳನ್ನು ಜ್ಯೂನಿಯರ್ ಕಾಲೇಜುಗಳಾಗಿ ಪರಿವರ್ತಿಸಿದ್ದೀರಿ. ಜೂನಿಯರ್ ಕಾಲೇಜ್ ಪ್ರಿನ್ಸಿಪಾಲರಿಗೆ ಫ್ಯಾಕ್ಟರಿ ಕೆಲಸಗಾರರನ್ನಾಗಿ ಮಾಡಿದ್ದೀರಿ. ಅವರು ಬೆಳಿಗ್ಗೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ದುಡಿಯಬೇಕಾಗಿದೆ. ಇವೊತ್ತು ಜ್ಯೂನಿಯರ್ ಕಾಲೇಜ್ ಪ್ರಿನ್ಸಿಪಾಲರು ತಮ್ಮ ಕೆಲಸ ಬಿಟ್ಟು ಹೊರಗೆ ಹೋಗಲಿಕ್ಕೆ ಅವಕಾಶ ಇಲ್ಲದಂತೆಮಾಡಿದ್ದೀರಿ. ಅವರುಗಳಿಗೆ ಪ್ರಮೋಷನ್ ಇಲ್ಲ, ಹೈಸ್ಕೂಲ್ ಹೆಡ್-ಮಾಸ್ಟರೂ ಅವರೇ, ಜೂನಿಯರ್ ಕಾಲೇಜು ಪ್ರಿನ್ಸಿಪಾಲರೂ ಅವರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಿತ್ರರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. ಡಿಮ್ಯಾಂಡ್‌ಗಳ ಮೇಲೆ ಡೀಟ್ಹೈಲ್ ಡಿಸ್‌ಕಷನ್ ನಡೆಯುತ್ತವೆ. ಆ ಸಮಯದಲ್ಲಿ ಈ ವಿವರಗಳನ್ನು ಹೇಳಿದರೆ ಪರಿಣಾಮಕಾರಿಯಾದ, ಅರ್ಥಪೂರ್ಣವಾದ ಉತ್ತರ ಬರಲಿಕ್ಕೆ ಸಾಧ್ಯವಾಗುತ್ತದೆ. ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ಬಗ್ಗೆ ಇಷ್ಟು ವಿವರಗಳನ್ನು ಹೇಳಿದರೆ ಪೂರ್ಣವಾದಂಥ ಉತ್ತರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಗಂಗಾಧರನ್.—ಉತ್ತರ ಸಂಕ್ಷಿಪ್ತವಾಗಿ ಹೇಳಿದರೆ ಸಾಕು.

ಛೇರ್ಮನ್.—ಪೂರಕ ಬೇಡಿಕೆಗಳ ಮೇಲೆ ದೀರ್ಘ ಚರ್ಚೆ ಬೇಡ.

ಶ್ರೀ ಹೆಚ್. ಗಂಗಾಧರನ್.—ಹಿಂದೆ ಮೂರು ಗಂಟೆಗಳ ಕಾಲ ಚರ್ಚೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಇವೊತ್ತಿನ ಕಾರ್ಯಕಲಾಪ ಏನಿದೆ ? ಹಣ ಖರ್ಚು ಮಾಡುವುದಕ್ಕೆ ಅವಕಾಶ ಕೊಡಬೇಕು. ಅದಕ್ಕಿಂತಲೂ ಮೊದಲು ಬಿಲ್ಸ್ ಇಂಟ್ರಡ್ಯೂಸ್ ಮಾಡಲಾಗಿದೆ. ಲೋಕಾಯುಕ್ತ ಬಿಲ್ಸ್ ಇದೆ. ಇವೊತ್ತು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಗಂಗಾಧರನ್ ಅವರು ಮಾತನಾಡುವಾಗ ನಾನು ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಬೇಕೆಂದು ಹೇಳಿದೆ. ಮಾನ್ಯ ಗಂಗಾಧರನ್ ಅವರಿಗೆ ಪರಿಪೂರ್ಣವಾಗಿ ಬಹಳ ಪರಿಣಾಮಕಾರಿಯಾಗಿ ಮಾತನಾಡತಕ್ಕ ಶಕ್ತಿ ಇದೆ. ನಾವೆಲ್ಲಾ ಒಂದು ಕಡೆ ಕೂಡಿ ಕೆಲಸಮಾಡಿದ್ದೇವೆ. ಹಿಂದೆಯೂ ಅಷ್ಟೆ, ಈಗಲೂ ಅಷ್ಟೆ...

ಶ್ರೀ ಕೆ. ಹೆಚ್. ರಂಗನಾಥ್.—ಹಿಂದೆ ಓಟ್ ಆನ್ ಅಕೌಂಟ್ 4 ತಿಂಗಳಿಗೆ ತೆಗೆದುಕೊಳ್ಳಲಾಗುತ್ತಿತ್ತು. ಈಗ 6 ತಿಂಗಳಿಗೆ ಬಂದಿದೆ. ಆದ್ದರಿಂದ, ಮಾನ್ಯ ಸದಸ್ಯರು ಇನ್ನು 6 ತಿಂಗಳು ಅಸೆಂಬ್ಲಿ ಸೇರುವುದಿಲ್ಲ ಎಂದು ತಿಳಿದುಕೊಂಡು ಮಾತನಾಡುತ್ತಿದ್ದಾರೆ. ಹೌದೋ ಅಲ್ಲವೋ ಮಾನ್ಯ ಸದಸ್ಯರನ್ನೇ ಕೇಳಿ.

ಶ್ರೀ ಹೆಚ್. ಗಂಗಾಧರನ್.—ಹೌದು.

ಶ್ರೀ ಎಸ್. ಬಂಗಾರಪ್ಪ.—ಅಪ್ರೊಪ್ರಿಯೇಷನ್ ಬಿಲ್ ನಿಮಗೆ ಪಾಸ್ ಮಾಡಿಕೊಡುತ್ತೇವೆ. ಅದಕ್ಕೆ ನಿಮಗೆ ಅಡ್ಡಿ ಬರುವುದಿಲ್ಲ. ಅದನ್ನು ನಿಲ್ಲಿಸಲಿಕ್ಕೂ ಆಗುವುದಿಲ್ಲ. ಇನ್ನು 6 ತಿಂಗಳವರೆಗೆ ಅಸೆಂಬ್ಲಿ ಸೇರುವುದಿಲ್ಲ...

ಶ್ರೀ ಎ. ಲಕ್ಷ್ಮೀಸಾಗರ್.—ಮಧ್ಯೆ ಸೇರಬಾರದು ಎಂದು ಏನೂ ನಿರ್ಬಂಧವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸೇರಬಾರದೆಂದು ಹೇಳುವಂಥಾದ್ದು ಗೊತ್ತಾಗಿದೆ. ನಮಗೂ ಸಾಗರ್ ಅವರಿಗೆ ಗೊತ್ತಿದ್ದಂತೆ ಮೂರು ನಾಲ್ಕು ತಿಂಗಳಿಗೆ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಿದ್ದರು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸಾಗರ್ ಅವರೇ ಓಟ್ ಆನ್ ಅಕೌಂಟ್ ಬೇಡ ವರ್ಷ ವರ್ಷ ಇದನ್ನು ಏತಕ್ಕೆ ತರುತ್ತೀರಾ ಎಂದು ಇಂಗ್ಲೀಷ್‌ನಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಕನ್ನಡದಲ್ಲಿ ತಿಳಿಯಲಿಲ್ಲ ಎಂದು ಮತ್ತೆ ಇಂಗ್ಲಿಷ್‌ನಲ್ಲಿ ಭಾಷಣ ಮಾಡಿದ್ದಾರೆ, ಅವರೇ ಇವೊತ್ತು 6 ತಿಂಗಳಿಗೆ ಓಟ್ ಆನ್ ಅಕೌಂಟ್ ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ರಂಗನಾಥ್ ಅವರ ವಾದವನ್ನು ಒಪ್ಪುತ್ತೇನೆ. ಒಂದು ಸರ್ಕಾರ ಪ್ರಪ್ರಥಮವಾಗಿ ಅಧಿಕಾರಕ್ಕೆ ಬಂದ ಸಮಯದಲ್ಲಿ ಶೀಘ್ರವಾಗಿ ಆಯವ್ಯಯ ಪಟ್ಟಿ ವಿಚಾರ ಮಾಡಲಿಕ್ಕೆ ಸಮಯ ಇರುವುದಿಲ್ಲ. ಅದಕ್ಕೋಸ್ಕರ ಈ ಓಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕ ಪದ್ಧತಿ ಜಾರಿಯಲ್ಲಿದೆ. ಅದು ಅನುಕ್ರಮವಾಗಿ ಬಂದಿರತಕ್ಕ ಅಭ್ಯಾಸ.

ಶ್ರೀ ಕೆ. ಹೆಚ್. ರಂಗನಾಥ್.—ಈ ಸಾರಿ ಓಟ್ ಆನ್ ಅಕೌಂಟ್ 6 ತಿಂಗಳಿಗೆ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ. ಪ್ರತಿಯೊಂದು ವರ್ಷ ಓಟ್ ಆನ್ ಅಕೌಂಟ್ ಮಾಡಬಾರದೆಂದು ಹಿಂದೆ ನಾನು ತಕರಾರು ಮಾಡಿದ್ದು ಉಂಟು...

ಶ್ರೀ ಎಸ್. ಬಂಗಾರಪ್ಪ.—ಈಗ 6 ತಿಂಗಳು ಓಟ್ ಆನ್ ಅಕೌಂಟ್ ಬಗ್ಗೆ ಬಂದಾಗ ನಾನು ಮಾತನಾಡುತ್ತೇನೆ. ಈಗ ಮಾನ್ಯ ಗಂಗಾಧರನ್ ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಅಪ್ರೊಪ್ರಿಯೇಷನ್‌ಬಿಲ್ ಬಗ್ಗೆ ಮಾತನಾಡಲಿ, ಅದು ನನಗೆ ಗೊತ್ತಿದೆ,ಇದು ಮತ್ತೆ ಕೌನ್ಸಿಲ್‌ಗೆ ಹೋಗಬೇಕಾಗುತ್ತದೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಗಂಗಾಧರನ್ ಅವರು ಜಯಪ್ರಕಾಶ್ ನಾರ ೯೮ ಣ್ ಅವರ ಭಾವ

ಚಿತ್ರವನ್ನು ಹಾಕಬೇಕೆಂದು ಹೇಳಿದ್ದಾರೆ, ಅದು ತುಂಬಾ ಸ್ವಾಗತಾರ್ಹವಾದುದು. ಕಳೆದ ಸರ್ಕಾರದವರು ಹನುಮಂತಯ್ಯನವರ ಭಾವಚಿತ್ರ ಹಾಕುವ ಬಗ್ಗೆ ಹೇಳಿದ್ದರು. ನಾವೆಲ್ಲ ಸೇರಿರತಕ್ಕ ಈ ಸದನ ಏನಿದೆ ಇದಕ್ಕೆ ಅವರು ಒಬ್ಬರು ಕಾರ್ಯಕರ್ತರು ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಸರ್ಕಾರ ತೀರ್ಮಾನ ಮಾಡಿದಾಗ ತುಂಬಾ ಚರ್ಚೆಯಾಗಿದೆ.

ಛೇರ್‌ಮನ್.—ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಬಿ. ಮಲ್ಲಪ್ಪ.—ಹಿಂದಿನ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ, ಅದನ್ನು ಬೇಗ ಕಾರ್ಯರೂಪಕ್ಕೆ ತರಲಿ ಎಂದು ನಾನು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಸಭಾಪತಿಯವರೆ, ತಾವು ಈ ಜೂನಿಯರ್ ಕಾಲೇಜುಗಳನ್ನೇನೊ ಪರಿವರ್ತನೆ ಮಾಡಿದಿರಿ; ಅಲ್ಲಿ ಪ್ರಿನ್ಸಿಪಾಲರು ಯಾರಿದ್ದಾರೆ ಅವರಿಗೆ ಪ್ರೊಮೋಷನ್ ಕೊಡುವುದೊ ಅಥವಾ ಹೈಸ್ಕೂಲ್ ಮತ್ತು ಕಾಲೇಜನ್ನು ಬೇರೆಬೇರೆ ಮಾಡುವುದೋ ಏನಾದರೂ ಒಂದು ನಿರ್ಧಿಷ್ಟವಾದ ಕ್ರಮ ವನ್ನು ತೆಗೆದುಕೊಳ್ಳಿ. ಇದಕ್ಕೆ ಒಂದು ವಿಶೇಷವಾದ ಸ್ಟೇಟಸ್ ಕೊಡುವ ಸಲುವಾಗಿ ಈ ಬಜೆಟ್‌ನಲ್ಲಿ ಅಳ ವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರೈಮರಿ ಸ್ಕೂಲ್ ಟೀಚರ್ಸ್ ಸಂಬಳದ ಬಗ್ಗೆ ಹೇಳುವುದಾದರೆ ಶೇಕಡ 80 ಜನರಿಗೆ ಹೈದರಾ ಬಾದ್ ಪೇ ಸ್ಕೇಲನ್ನು ಕೊಟ್ಟು ಇನ್ನೂ 20 ಪರ್ಸೆಂಟ್ ಜನರಿಗೆ ಕೊಟ್ಟಿಲ್ಲ. ಇದರಲ್ಲಿ ತಾರತಮ್ಯ ಇರುವು ದರಿಂದ ಇದರ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 25ರ ಬಗ್ಗೆ ಹೇಳುವುದಾದರೆ ಜೈಲಿನಲ್ಲಿ ಖೈದಿಗಳಿಗೆ ಕೊಡತಕ್ಕ ಆಹಾರ ಕ್ಕೋಸ್ಕರ ಹೆಚ್ಚಿನ ಹಣವನ್ನು ಕೇಳುತ್ತಿದ್ದೀರಿ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳ ಬೇಕಾಗಿದೆ. ಆ ಜೈಲಿನಲ್ಲಿ ಖೈದಿಗಳಿಗೆ ಕೊಡತಕ್ಕ ಆಹಾರವನ್ನು ಮನುಷ್ಯರಾಗಲಿ, ದನಗಳಾಗಲಿ ಕಡೇಪಕ್ಷ ಬೇರೆ ಯಾವ ಪ್ರಾಣಿಯೂ ಕೂಡ ತಿನ್ನುವುದಕ್ಕಾಗುವುದಿಲ್ಲ. ತಾವು ಇನ್ನು ಮುಂದೆ ಈ ಖೈದಿಗಳ ವಿಚಾರ ದಲ್ಲಿ ಇಷ್ಟೊಂದು ನಿಕೃಷ್ಟವಾದ ರೀತಿಯಲ್ಲಿ ವರ್ತಿಸಬಾರದೆಂದು ಹೇಳಬಯಸುತ್ತೇನೆ.

ಇನ್ನು ಬೇಡಿಕೆ ಸಂಖ್ಯೆ 26ರ ಬಗ್ಗೆ ಹೇಳುವುದಾದರೆ, ಪ್ರೆಸ್ ಅಕೆಡೆಮಿ ಬೆಳೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಬಹಳ ಸಣ್ಣ ಪತ್ರಿಕೆಗಳ ಬಗ್ಗೆ ತಾವು ಹೆಚ್ಚಿನ ಔದಾರ್ಯದಿಂದ ವರ್ತಿಸಬೇಕು. ಅವರಿಗೆ ಹೆಚ್ಚಿನ ಜಾಹೀ ರಾತನ್ನು ಕೊಡಬೇಕು. ಚೆನ್ನಾಗಿ ಬೆಳೆದಿರುವ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವುದು ಅಷ್ಟೊಂದು ಸರಿ ಯಲ್ಲ. ಇದನ್ನು ತಾವು ಗಮನಿಸಬೇಕು.

ಇನ್ನು ಬೇಡಿಕೆ ಸಂಖ್ಯೆ 30ರ ಬಗ್ಗೆ ಹೇಳುವುದಾದರೆ, ಹೌಸಿಂಗ್ ಬೋರ್ಡ್ ಮುಖಾಂತರ ಕಟ್ಟತಕ್ಕ ಮನೆಗಳಿಗೆ ತಾವು 285 ಲಕ್ಷ ರೂ. ಅನುದಾನವನ್ನು ಕೇಳುತ್ತಿದ್ದೀರಿ. ನಾವು ಇವತ್ತು ಹಣವನ್ನು ಖರ್ಚು ಮಾಡುತ್ತಿರುವುದು ಯಾರಿಗೆ ಮನೆಗಳಿಲ್ಲ, ಯಾರು ಕಡುಬಡವರಾಗಿದ್ದು ಒಂದು ಸ್ವಂತ ಮನೆಯನ್ನು ಕಟ್ಟಿ ಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ ಅಂಥವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ, ಇವತ್ತು ಏನಾಗಿದೆ ಎಂದರೆ ಹುಡ್ಕೋ ಸ್ಕೀಂನಲ್ಲಿ ನಾವು ಸಾಲವಾಗಿ ತಂದ ಹಣವನ್ನು ಹೈಯರ್ ಇನ್‌ಕಂ ಗ್ರೂಪ್‌ನವರಿಗೆ 2 ಲಕ್ಷ 3 ಲಕ್ಷ ರೂ. ಖರ್ಚು ಮಾಡಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೇವೆ. ಕಟ್ಟಿಸಿಕೊಡುವುದು ಬೇಡ. ಇದಕ್ಕೆ ಬದಲಾಗಿ ಅಲ್ಪ ವರಮಾನದವರಿಗೆ, ಮತ್ತು ಮಧ್ಯಮ ವರಮಾನದವರಿಗೆ ಅನುಕೂಲವಾಗುವಂಥ ಸಣ್ಣ ಸಣ್ಣ ಮನೆಗಳನ್ನು ಹೆಚ್ಚುಹೆಚ್ಚಾಗಿ ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೇಡಿಕೆ ಸಂಖ್ಯೆ 41ರಲ್ಲಿ ಮಾತನಾಡುವುದಾದರೆ ಮೈಸೂರು ಅರಮನೆಯಲ್ಲಿರತಕ್ಕ ಕಾಗದಪತ್ರ ಗಳನ್ನು ರಕ್ಷಣೆ ಮಾಡುವುದಕ್ಕೆ ತಾವು ಹಣವನ್ನು ಕೇಳಿದ್ದೀರಿ. ಇದುವರೆಗೆ ಅನೇಕ ಐತಿಹಾಸಿಕ ಹಾಗೂ ಬಹಳ ಪ್ರಮುಖವಾದ ಕಾಗದಪತ್ರಗಳನ್ನು ಗಾಯಿತ್ರಿ ದೇವಸ್ಥಾನದಲ್ಲಿ ಹಾಕಿದ್ದರು. ಅಷ್ಟೇ ಅಲ್ಲ ನಮ್ಮ ಮೈಸೂರು ಅರಮನೆಯಲ್ಲಿರತಕ್ಕ ಗ್ರಂಥಾಲಯ ಬಹುಶಃ ಇಡೀ ನಮ್ಮ ರಾಜ್ಯದಲ್ಲೇ ಎಲ್ಲೂ ಇಲ್ಲ. ಅಲ್ಲಿರ ತಕ್ಕ ಉತ್ಕೃಷ್ಟ ಗ್ರಂಥಗಳು, ಕಲ್ಕತ್ತಾದಲ್ಲಿರತಕ್ಕ ನ್ಯಾಷನಲ್ ಲೈಬ್ರರಿಯಲ್ಲಿ ಕೂಡ ಸಿಕ್ಕುವುದಿಲ್ಲ. ಅಂಥ ಅಮೂಲ್ಯ ಗ್ರಂಥಾಲಯವನ್ನು ಶ್ರೇಷ್ಠ ಪುಸ್ತಕಗಳು ಹಾಗೂ ಕಾಗದಪತ್ರಗಳನ್ನು ನಮ್ಮ ದಿವಂಗತ ಜಯ ಚಾಮರಾಜೇಂದ್ರ ಒಡೆಯರ್‌ರವರು ಇಟ್ಟಿದ್ದರು. ಅಲ್ಲಿ ಅನೇಕ ಕೈಪತ್ರಗಳು ಅಂದರೆ ಮ್ಯಾನುಸ್ಕ್ರಿಪ್ಟ್‌ಗಳು ಇವೆ. ಇಷ್ಟೇ ಅಲ್ಲದೆ ಚಿಕಾಗೊದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ಟೇಪ್ ಕೂಡ ಅಲ್ಲಿದೆ. ಇದು ನಮ್ಮ ದೇಶದಲ್ಲೇ ಅಲ್ಲ ಇಡೀ ಜಗತ್ತಿನಲ್ಲೇ ಹುಡುಕಿದರೂ ಈ ಟೇಪ್ ಸಿಕ್ಕುವುದಿಲ್ಲ. ಆ ಒಂದು ಧ್ವನಿಮುದ್ರಿಕೆ ಅಲ್ಲಿದೆ. ಎಷ್ಟೇ ಖರ್ಚಾದರೂ ಪರವಾಗಿಲ್ಲ. ತಾವು ಇದನ್ನೆಲ್ಲಾ ಸಂರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು 83-84ನೇ ಸಾಲಿನ ಬೇಡಿಕೆಯ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ತಾವು ಸ್ಟೇಟ್ ಲೆಜಿಸ್ಲೇಚರ್‌ಗೆ ಸಾಕಷ್ಟು ಅನುದಾನವನ್ನು ಕೇಳಿದ್ದೀರಿ. ಈ ಶಾಸಕರಿಗೆ ಪೆನ್‌ಷನ್ ಕೊಡಬೇಕೇ, ಬೇಡವೇ ಎನ್ನುವ ಬಗ್ಗೆ ಇಲ್ಲಿ ಸಾಕಷ್ಟು ಸುದೀರ್ಘವಾಗಿ ಚರ್ಚೆ ನಡೆದಿದೆ. ನಾನು ತಮ್ಮಲ್ಲಿ ಒಂದು ಮನವಿಯನ್ನು

ಮಾಡಿಕೊಳ್ಳಬಯಸುತ್ತೇನೆ. ಯಾರೇ ಶಾಸಕರಿರಲಿ ಅವರವರ ತಾಲೂಕಿನಲ್ಲಿ ಅದರಲ್ಲೂ ತಾಲೂಕು ಆಫೀಸ್‌ನಲ್ಲಿ ಪ್ರತ್ಯೇಕವಾಗಿ ಒಂದು ಕಛೇರಿಯನ್ನು ತೆರೆದು ಅಲ್ಲಿಗೆ ನಿರುದ್ಯೋಗಿಗಳಾಗಿರುವ ಗುಮಾಸ್ತರನ್ನೂ ಮತ್ತು ಒಬ್ಬ ಟೈಪಿಸ್ಟ್‌ನ್ನೂ ಕೊಟ್ಟು ಪ್ರತಿದಿನ ಈ ಶಾಸಕ ಖಾಯಂ ಆಗಿ ಆ ಕಛೇರಿಗೆ ಹೋಗಿ ಅಲ್ಲಿ ಬರತಕ್ಕ ಜನರ ಕುಂದುಕೊರತೆಗಳನ್ನು ಕೇಳುವಂತೆ ವ್ಯವಸ್ಥೆ ಮಾಡಬೇಕು. ಒಂದುವೇಳೆ ನಗರಗಳಲ್ಲಿ ಆದರೆ ನಗರಸಭೆಯಲ್ಲೇ ಒಂದು ಕಛೇರಿಯನ್ನು ತೆರೆಯಬೇಕು. ಈ ರೀತಿ ಮಾಡುವುದರಿಂದ ನಿಮಗೆ ಯಾವುದೇ ಖರ್ಚೂ ಹೆಚ್ಚಿನದಾಗಿ ಬರುವುದಿಲ್ಲ. ಏಕೆಂದರೆ ಈಗಾಗಲೇ ಗುಮಾಸ್ತರು ಇದ್ದಾರೆ ಅವರ ಜೊತೆಗೆ ಒಬ್ಬ ಬೆರಳಚ್ಚುಗಾರನನ್ನು ಕೊಟ್ಟರೆ ಸಾಕು. ಈ ರೀತಿ ಮಾಡುವುದರಿಂದ ಸಾರ್ವಜನಿಕರ ಕೆಲಸ ಸುಗಮವಾಗಿ ಆಗುತ್ತದೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಬೇಕೆಂದರೆ, 1956ರಲ್ಲಿ ನಮ್ಮ ಕರ್ನಾಟಕ ರಾಜ್ಯ ಒಂದಾಯಿತು. ಆದರೂ ಕೂಡ ಹಿಂದೂ ರಿಲಿಜಿಯಸ್ ಅಂಡ್ ಛಾರಿಟಬಲ್ ಆ್ಯಕ್ಟ್ ಕೊಳ್ಳೇಗಾಲಕ್ಕೇ ಒಂದುರೀತಿ, ಬಳ್ಳಾರಿಗೇ ಒಂದು ರೀತಿ ಹೈದರಾಬಾದ್ ಕರ್ನಾಟಕಕ್ಕೇ ಒಂದುರೀತಿ, ಬಾಂಬೆ ಕರ್ನಾಟಕಕ್ಕೇ ಒಂದುರೀತಿ, ಹಳೇಮೈಸೂರಿಗೆ ಒಂದುರೀತಿ ಇರುವುದು ಬೇಡ, ಇವೆಲ್ಲವನ್ನೂ ಸೇರಿಸಿ ಇಡೀ ಕರ್ನಾಟಕಕ್ಕೇ ಅನ್ವಯಿಸುವ ರೀತಿಯಲ್ಲಿ ಒಂದು ಸಮಗ್ರ ಎಂಡೋಮೆಂಟ್ ಕಾನೂನನ್ನು ಮಾಡಬೇಕೆಂದು ಕೇಳಿಕೊಂಡು ನಾನು ಈ ಬೇಡಿಕೆಯನ್ನು ಅನುಮೋದಿಸುತ್ತೇನೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯ ವಿಚಾರದಲ್ಲಿ ಈಗಾಗಲೇ ಇಬ್ಬರು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ನಾನು ಬಹಳ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಒಂದೊಂದು ವಿಚಾರವನ್ನು ತೆಗೆದುಕೊಂಡರೂ ಬಹಳ ಹೊತ್ತಾಗುತ್ತದೆ. ಆಯಾಯ ಇಲಾಖೆಗಳ ಬಗ್ಗೆ ಬೇಡಿಕೆ ಬಂದಾಗ ವಿವರವಾಗಿ ಚರ್ಚೆ ಮಾಡೋಣ. ಈ ಸಂದರ್ಭದಲ್ಲಿ ಯಾವುದೇ ಸದಸ್ಯರು ಮಾತನಾಡಿದರೂ ಕೂಡ ಕೇವಲ ಪ್ರಮುಖವಾದ ಕೆಲವು ಅಂಶಗಳನ್ನು ಮಾತ್ರ ಮಾತನಾಡಲು ಸಾಧ್ಯವಿದೆ.

ಅದೇ ರೀತಿ ನಾನು ಈಗ ಬೇಡಿಕೆ ಸಂಖ್ಯೆ 7ಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ನಾವು ಈ ಸದನದಲ್ಲಿ ಪದೇ ಪದೇ ಹೇಳುತ್ತಲೇ ಇರುತ್ತೇವೆ. ನಮ್ಮ ರಾಷ್ಟ್ರದಲ್ಲಿರತಕ್ಕ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರು ಯಾರಿದ್ದಾರೆ ಆ ಜನರ ಆರ್ಥಿಕಾಭಿವೃದ್ಧಿಯ ಬಗ್ಗೆ, ಗ್ರಾಮೀಣ ಅಭಿವೃದ್ಧಿಯ ಬಗ್ಗೆ ನಾವು ವಿಶಿಷ್ಟವಾಗಿ ಗಮನವನ್ನು ಹರಿಸದೇಹೋದರೆ ಈ ಜನರ ಆರ್ಥಿಕ ಶಕ್ತಿಯನ್ನು ಉತ್ತಮಗೊಳಿಸಲು ಸಾಧ್ಯವಿಲ್ಲ. ಪ್ರತಿವರ್ಷ ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿ ಕೆಳಮಟ್ಟಕ್ಕೆ ಹೋಗುತ್ತಿದೆ. ಪಟ್ಟಣ ಮತ್ತು ನಗರಪ್ರದೇಶಗಳಲ್ಲೂ ಕೂಡ ಬಡವರಿದ್ದಾರೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಸದಸ್ಯರಿಗೆ ವಿಚಾರಗಳು ಬಹಳ ಸ್ಪಷ್ಟವಾಗಿ ಗೊತ್ತಿವೆ. ಅಪ್ಪರ್ ಕೃಷ್ಣಾ ಯೋಜನೆಯ ಕೆಳಗೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕ ಯೋಜನೆಯ ಕೆಳಗೆ ನೀರಾವರಿ ಪ್ರದೇಶವನ್ನು ಬಿಟ್ಟು ಇನ್ನುಳಿದಂತೆ 1 ಎಕರೆ, 2 ಎಕರೆ, ಅಥವಾ 3 ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕ ಯಾವುದೇ ವ್ಯಕ್ತಿಯಾದರೂ ಕೂಡ ಮೇಲಿನ ಮೋಡವನ್ನೇ ನೋಡಿಕೊಂಡು ತನ್ನ ಜೀವನವನ್ನು ನಡೆಸಬೇಕಾಗಿದೆ. ಇವತ್ತು ರೈತರ ಸಾಲವನ್ನು ಮನ್ನಾ ಮಾಡಿ ಎಂದು ಏತಕ್ಕೆ ಹೇಳುತ್ತಿದ್ದೇವೆಂದರೆ ಅವರು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಮಳೆ ಬೆಳೆ ಇಲ್ಲದೆ ತೆಗೆದುಕೊಂಡ ಸಾಲವನ್ನು ವಾಪಸು ಕೊಡಲು ಅಸಮರ್ಥರಾಗಿದ್ದಾರೆ. ಆದ್ದರಿಂದ ಇವರ ಸಾಲವನ್ನು ಮನ್ನಾ ಮಾಡಿ ಎಂದು ನಾವು ಕೇಳುತ್ತಿರುವುದು. ಆದರೆ ಇದು ಸರ್ಕಾರಕ್ಕೆ ಬಿಟ್ಟ ವಿಚಾರ. ರಿಸರ್ವ್ ಬ್ಯಾಂಕ್‌ನವರು ಎಷ್ಟೇ ಷರತ್ತುಗಳನ್ನು ಇದರ ಬಗ್ಗೆ ವಿಧಿಸಬಹುದು. ಆದರೆ ನಮ್ಮ ಮುಂದಿರತಕ್ಕ ಸಮಸ್ಯೆ ಏನೆಂದರೆ ಯಾವುದೇ ಒಂದು ಕುಟುಂಬ ಅಥವಾ ವ್ಯಕ್ತಿ ಬ್ಯಾಂಕ್‌ನಿಂದ 10 ರೂ. ಸಾಲವನ್ನು ತೆಗೆದುಕೊಂಡರೆ ಅದನ್ನು ತೀರಿಸತಕ್ಕ ಶಕ್ತಿ ಅವರಿಗಿದೆಯೆ ಎಂಬುದು. ನಾನು ಕೈಗಾರಿಕೆ ವಿಷಯವಾಗಿ ಮಾತನಾಡಿದರೆ ಇದು ಮತ್ತೊಂದು ವಿಷಯಕ್ಕೆ ಸಂಬಂಧವಿಲ್ಲವೆಂದು ತಾವು ತಿಳಿಯಬಾರದು. ಆರ್ಥಿಕ ಶಕ್ತಿ ಒಂದು ಕುಟುಂಬಕ್ಕೆ ಬರಬೇಕಾದರೆ ಹಲವಾರು ವಿಚಾರದಲ್ಲಿ ಹಲವಾರು ಸೌಲಭ್ಯಗಳು ಆ ಕುಟುಂಬಕ್ಕೆ ಇರಬೇಕು. ಇಲ್ಲದಿದ್ದರೆ ಅವರು ಉದ್ಧಾರವಾಗುವುದಿಲ್ಲ. ಅದಕ್ಕಾಗಿಯೇ ಮಹಾತ್ಮಾ ಗಾಂಧೀಜಿಯವರು ಗ್ರಾಮೀಣ ಭಾರತದ ಬಗ್ಗೆ, ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಬಗ್ಗೆ ಹೆಚ್ಚಿನ ಆಸ್ಥೆಯನ್ನು ವಹಿಸಿದ್ದರು. ನೂಲುವುದರಿಂದ ಹಿಡಿದು, ಯಾವುದೇ ಒಂದು ಕುಟುಂಬ ತನ್ನ ಆರ್ಥಿಕ ಶಕ್ತಿಯನ್ನು ರೂಪಿಸಿಕೊಳ್ಳಬೇಕು. ಈ ಒಂದು ಶಕ್ತಿ ಯಾವ ಕುಟುಂಬ ಅಥವಾ ರಾಷ್ಟ್ರಕ್ಕೆ ಬರುತ್ತದೆ ಆಗಮಾತ್ರ ಅದು ತನ್ನ ಆರ್ಥಿಕ ಶಕ್ತಿಯನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಚಿಂತನೆಯನ್ನು ಅವರು ಹೊಂದಿದ್ದರು. ನಮ್ಮ ಭಾರತದಲ್ಲಿರತಕ್ಕ ಬಡತನದ ಉದ್ದ, ಆಳ, ಎತ್ತರಗಳನ್ನು ನೋಡಿ ಅವರು ಈ ಮಾತನ್ನು ಹೇಳಿದ್ದಾರೆಂದು ನಾನು ನನ್ನ ರಾಜಕೀಯ ಜೀವನದಲ್ಲಿ ಒಬ್ಬ ಹಳ್ಳಿಯವನಾಗಿ ತಿಳಿದುಕೊಂಡಿದ್ದೇನೆ.

ಆದ್ದರಿಂದ ನಾನು ಏನು ಹೇಳುತ್ತೇನೆ ಎಂದರೆ ಮುಗಿಲನ್ನು ನೋಡಿ ಬೆಳೆಯನ್ನು ನಿರೀಕ್ಷೆ ಮಾಡಿ ಸಾಲವನ್ನು ತೀರಿಸತಕ್ಕಂಥ ಮನೋಭಾವ ರೈತರಿಗೆ ಕಡಿಮೆಯಾಗಬೇಕು. ಕೃಷಿ ಕಾರ್ಮಿಕ ಕುಟುಂಬವರ್ಗದವರು

ಯಾವುದೇ ವ್ಯಕ್ತಿ ಇರಲಿ ಆ ಮನೋಭಾವ ಬೆಳೆಸಿಕೊಳ್ಳಬಾರದು. ದೊಡ್ಡ ಮೇಟಿಯವರಿಗೆ ರೋಣದಲ್ಲಿ 50 ಎಕರೆ ಜಮೀನು ಇದ್ದರೆ ಏನು ಪ್ರಯೋಜನ ? ಮುಗಿಲು ಕರುಣೆಯನ್ನು ತೋರದಿದ್ದರೆ ಏನು ಪ್ರಯೋಜನವಾಗುವುದಿಲ್ಲ. ಗುಲ್ಬರ್ಗಾದಲ್ಲಿ ಯಾವಾಗಲೋ ಮಳೆ ಬರುತ್ತದೆ. ಆದ್ದರಿಂದ ಒಂದು ಕುಟುಂಬಕ್ಕೆ ಎಷ್ಟು ಎಕರೆ ಜಮೀನು ಇರುತ್ತದೆ ಎಂಬುದು ಲೆಕ್ಕವಲ್ಲ ; ನೀರಾವರಿ ಸೌಲಭ್ಯ ಎಷ್ಟು ಇದೆ ಹಾಗೂ ಪ್ರಕೃತಿಯ ನೀರಾವರಿಯಿಂದ ಕೂಡಿದ ಸೌಲಭ್ಯ ಎಷ್ಟು ಇರುತ್ತದೆ ಎಂಬುದನ್ನು ನೋಡಬೇಕು. ಕೋಲಾರ ಜಿಲ್ಲೆ ಯಾವಾಗಲೂ ಬರಗಾಲಕ್ಕೆ ತುತ್ತಾಗುವ ಜಿಲ್ಲೆ. ಮಂಡ್ಯ, ಹಾಸನ ಜಿಲ್ಲೆಗಳು ಯಾವಾಗಲೂ ನೀರಾವರಿಯಿಂದ ಬೆಳೆಯನ್ನು ಬೆಳೆಯತಕ್ಕಂಥ ಪ್ರದೇಶವಾಗಿರುತ್ತದೆ. ಅದಕ್ಕಾಗಿ ನಾನು ಏನು ಸಲಹೆ ಮಾಡುತ್ತೇನೆ ಎಂದರೆ ಸರ್ಕಾರ ಇದನ್ನು ವಿಚಾರಮಾಡಬೇಕು. ಏತಕ್ಕೆಂದರೆ ಸರ್ಕಾರ ಜನತೆಯ ಬೆಂಬಲವನ್ನು ಪಡೆದು ಬಂದು ಇಲ್ಲಿ ಸೇರಿರತಕ್ಕಂಥ ಕಾಲದಲ್ಲಿ ಜನತೆಯ ಕಲ್ಯಾಣ ಕಾರ್ಯಗಳನ್ನು ಮಾಡಬೇಕಾದ್ದು ಸರ್ಕಾರದ ಕರ್ತವ್ಯ. ಜನಹಿತ ಸಾಧನೆ ಮಾಡದಿದ್ದರೆ ಅದು ನಿರುಪಯುಕ್ತವಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರ ವಿಚಾರಮಾಡಿ ಗೃಹ ಕೈಗಾರಿಕೆಗಳನ್ನು ಕೈಗೊಳ್ಳುವ ಯೋಚನೆ ಮಾಡಬೇಕು. ಭಾರತದಲ್ಲಿ ಹಳ್ಳಿಗಳ ಪ್ರದೇಶಗಳಲ್ಲಿ ಒಂದು ಕುಟುಂಬದ ಆರ್ಥಿಕ ಶಕ್ತಿಯನ್ನು ಮೇಲಕ್ಕೆ ಎತ್ತುವುದಕ್ಕೆ ಮಹಾತ್ಮಾ ಗಾಂಧೀಜಿಯವರು ಚಿಂತನೆ ಮಾಡಿದ ಆರ್ಥಿಕ ಚಿಂತನೆ ಮೂಲಾಧಾರವಾಗಿ ಇರಬೇಕು. ಈವತ್ತು ಜನಶಕ್ತಿ ನಮಗೆ ಇದೆ. ಅದನ್ನು ಸದುಪಯೋಗಪಡಿಸಿಕೊಳ್ಳತಕ್ಕಂಥ ದಿಸೆಯಲ್ಲಿ ಆಲೋಚನೆ ಮಾಡಬೇಕು. ಅದಕ್ಕೋಸ್ಕರವಾಗಿ ಗ್ರಾಮ ಆರ್ಥಿಕ ಅಭಿವೃದ್ಧಿಯ ಬಗ್ಗೆ ಬೃಹತ್ ಯೋಜನೆಯನ್ನು ಮಾಡಬೇಕು. ಹಾಗೆ ಮಾಡದೆ ಇದ್ದರೆ ನಮ್ಮ ಜನರನ್ನು ಮೇಲಕ್ಕೆ ಎತ್ತುವುದಕ್ಕೆ ಸಾಧ್ಯವೇ ಇಲ್ಲ. ಯಾವ ಪಕ್ಷದವರು ಆಡಳಿತ ಮಾಡುತ್ತಿರಲಿ ಅದನ್ನು ಸ್ಪಷ್ಟವಾಗಿ ಗುರಿ ಇಟ್ಟುಕೊಳ್ಳಬೇಕು. ಪ್ರಪಂಚದ ನಿರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೆ ಸಾಧ್ಯತೆ ಇದೆ ಎನ್ನುವುದು ನನ್ನ ಅಭಿಪ್ರಾಯ. ಟ್ರಯಲ್ ಅಂಡ್ ಎರರ್ ಮೆತಡ್-ಇದನ್ನು ಅಧಿಕಾರದಲ್ಲಿರತಕ್ಕಂಥವರು ವಿಚಾರ ಮಾಡುವುದು ಒಳ್ಳೆಯದು. ಗಲ್ಫ್ ಕಂಟ್ರೀಸ್ ಮಿಡಲಿಸ್ಟ್ ಕಂಟ್ರೀಸ್ ಪೆಟ್ರೋಲ್ ಉತ್ಪಾದನೆ ಮಾಡತಕ್ಕಂಥ ದೇಶಗಳು. ಲಿಬಿಯ, ಕುವೈತ್, ಸೌದಿಅರಬ್ಬೀ ಇವೇ ಮುಂತಾದ ದೇಶಗಳಲ್ಲಿ ಹಣ ಬೇಕಾದಷ್ಟು ಇದೆ, ಕೋಟಿಗಟ್ಟಲೆ ಹಣ ಇದೆ. ಆದರೆ ಆ ದೇಶಗಳಲ್ಲಿ ಮಳೆಯೇ ಆಗುವುದಿಲ್ಲ. ಅವರು ಉಪ್ಪಿನ ಕಾಯಿ ಹಾಕುವುದಕ್ಕೆ ಒಂದು ಮಾವಿನ ಮರ ಇರುವುದಿಲ್ಲ. ಹಪ್ಪಳ ಸಂಡಿಗೆ ಆ ದೇಶದವರು ಎಷ್ಟು ಇಷ್ಟಪಡುತ್ತಾರೆಂದರೆ ನಾವು ಬಾಂಬೆಗೆ ಹೋಗಿ ನೋಡಿದರೆ ಎಷ್ಟೆಷ್ಟು ತಿನ್ನುತ್ತಾರೆಂದರೆ ಹೇಳಲು ಸಾಧ್ಯವಿಲ್ಲ. ಈವತ್ತು ಕೆಲವು ಕಂಪೆನಿಗಳು ತಯಾರಾಗಿವೆ. ಹಣ ಯಾವರೀತಿ ಶೇಖರಣೆಯಾಗುತ್ತಿದೆ ಎಂದರೆ ಕೆಲವು ಬಂಡವಾಳ ಶಾಹಿಗಳು ಸೃಷ್ಟಿಯಾಗಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಇಲ್ಲಿರತಕ್ಕಂಥ ಜನ ಯಾರೇ ಆಗಲಿ ಬಡವರು ಯಾರು ಇದ್ದಾರೆ ಅವರಿಗೆ ಕೈ ಕೆಲಸ ಸಿಗುವಂತೆ ಯೋಚನೆ ಮಾಡಿ. ಕಾಲ ವ್ಯರ್ಥವಾಗದಂತೆ ಮಾಡಬೇಕು. ತಾವು ಹೋಟಲ್‌ಗಳಲ್ಲಿ ಊಟ ಮಾಡಿರಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಹೋಟೆಲ್ ನಮಗೆ ಯಾವಾಗಲೂ ಖಾಯಂ ಆಗಿ ಇರತಕ್ಕಂಥಾದ್ದು ; ನಿಮಗಾದರೂ ಮನೆ ಇದೆ. ಖಾಯಂ ಗಿರಾಕಿನೇ ಅಂಥವರಿಗೆ ಬೇಕಾಗಿರುವುದು. ತಾವು ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಮನೆ ಇದೆ. ಮನೆಯಲ್ಲಿ ಅಡಿಗೆ ಮಾಡುತ್ತಾರೆ,

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಮ್ಮ ಬಾಯಲ್ಲಿ ಏತಕ್ಕೆ ಹೇಳಿಸಬೇಕು. ನಿಮ್ಮ ಬಾಯಲ್ಲಿಯೇ ಹೇಳಿಸಬೇಕೆಂದು ಹೇಳಿದೆ. ಈಗ ಏನಾಗುತ್ತದೆ ಉಪ್ಪಿನಕಾಯಿ ಹಾಕುವುದರಲ್ಲಿ ಅನೇಕ ರೀತಿಯಲ್ಲಿ ಮಾಡಬಹುದು. ಅಮಟೆ ಉಪ್ಪಿನಕಾಯಿ, ನಿಮ್ಮ ಸಿದ್ದಾಪುರ ತಾಲ್ಲೂಕಿನಲ್ಲಿ ವಿಶೇಷವಾಗಿ ಇದು ದೊರೆಯಬಹುದು. ಮಾವಿನಕಾಯಿ ಉಪ್ಪಿನಕಾಯಿ, ನಿಂಬೆ ಹಣ್ಣಿನ ಉಪ್ಪಿನಕಾಯಿ ಈ ರೀತಿ ಬೇರೆ ಬೇರೆ ವಿಧಗಳಲ್ಲಿ ಉಪ್ಪಿನಕಾಯಿಯನ್ನು ತಯಾರು ಮಾಡಬಹುದು. ಗುಲ್ಬರ್ಗಾ ಧಾರವಾಡ ಜಿಲ್ಲೆಗಳಲ್ಲಿ ಇದು ದೊರೆಯುವುದಿಲ್ಲವೆಂದು ಕಾಣುತ್ತದೆ. ಸಿಕ್ಕಿದರೆ ನೀವು ಸಪ್ಲೈ ಮಾಡಿ. ಇಂಥ ವಸ್ತುಗಳನ್ನು ನಾವು Middle East Contries ಸಪ್ಲೈ ಮಾಡಿ ಹಣವನ್ನು ಗಳಿಸಬಹುದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ನಮ್ಮ ಹೆಣ್ಣುಮಕ್ಕಳು ಬಹಳ ಚೆನ್ನಾಗಿ ತಯಾರು ಮಾಡುತ್ತಾರೆ. ಬಹಳ ರುಚಿಕರವಾಗಿ ತಯಾರು ಮಾಡುವಷ್ಟು ಅನುಭವಸ್ಥರಿರುತ್ತಾರೆ. ಅವರಿಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದಂತಾಗುತ್ತದೆ. ಇದನ್ನು ನಾವು ಸರ್ಕಾರಿ ಕ್ಷೇತ್ರದಲ್ಲಿ ಮಾತ್ರ ಮಾಡಬೇಕು. ಬಂಡವಾಳಶಾಹಿ ಕ್ಷೇತ್ರಕ್ಕೆ ಮಾತ್ರ ವಹಿಸಬಾರದು. ಹತ್ತು ರೂಪಾಯಿ ಲಾಭ ಬಂದರೆ ಅದು ಸರ್ಕಾರಿ ಖಜಾನೆಗೆ ನೇರವಾಗಿ ಬರಲಿ. ಹಪ್ಪಳ ಸಂಡಿಗೆ ಉಪ್ಪಿನಕಾಯಿಗೆ ಮಿಡಲಿಸ್ಟ್ ಕಂಟ್ರಿಗಳಿಂದ ಬಹಳಷ್ಟು ಡಿಮ್ಯಾಂಡ್ ಇರುತ್ತದೆ. ಇವುಗಳನ್ನು ತಯಾರು ಮಾಡಿ ಎಕ್ಸ್‌ಪೋರ್ಟ್ ಮಾಡಿದರೆ, ನಾವು ಇದರಿಂದ ಹಣವನ್ನು ಗಳಿಸಬಹುದು. ಇದರಿಂದ ನಮ್ಮ ಗ್ರಾಮಾಂತರ ಜನರಿಗೆ ಒಂದು ಕೈಗಾರಿಕೆಯನ್ನು ಕಲ್ಪಿಸಿಕೊಟ್ಟಂತೆಯೂ ಆಗುತ್ತದೆ. ಮತ್ತು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ನೇರವಾಗಿ ಪರದೇಶಗಳ ಸಂಪರ್ಕವನ್ನು ಬೆಳೆಸುವುದಕ್ಕೆ ಕಾನೂನು

ಪ್ರಕಾರ ಅವಕಾಶ ಇದೆ. ಇದನ್ನೂ ಕೂಡ ತಾವು ವಿಚಾರ ಮಾಡಬೇಕೆಂದು ಸಲಹೆಯನ್ನು ಕೊಡುತ್ತೇನೆ.

ಇಂಥ ಇನ್ನೂ ಹಲವಾರು ಯೋಜನೆಗಳನ್ನು ನಾನು ತಯಾರಿಸಿದ್ದೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ಮಾಡುತ್ತೇವೆಂದರೆ ಬೇಕಾದಷ್ಟು ಸಿಗುತ್ತದೆ. ಇದು ನಾವು ಜನರಿಗೆ ಕೆಲಸವನ್ನು ಕೊಡಲು ಒಂದು ಅವಕಾಶವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಜನತಾ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಈಗ ಮೆಟೀರಿಯಲ್ಸ್ ಕಾಸ್ಟ್ ಬಹಳ ಜಾಸ್ತಿಯಾಗಿರುತ್ತದೆ.

3-30Pm ನನ್ನ ಸಲಹೆಯಾದರೂ ಇಷ್ಟೆ, ದಿನವೂ ಹೆಣ್ಣುಮಕ್ಕಳಾದರೆ 5 ರಿಂದ 10 ರೂಪಾಯಿಗಳವರೆಗೆ ಮತ್ತು ಗಂಡಸಾದರೆ ಹತ್ತರಿಂದ 30 ರೂಪಾಯಿಗಳವರೆಗೆ ದುಡಿಯಲು ಅವರುಗಳು ಇರುವಂಥ ಜಾಗಗಳಲ್ಲಿಯೇ ಅವಕಾಶ ಮಾಡಿಕೊಟ್ಟರೆ ಸರ್ಕಾರದವರು ಈ ಜನರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕಾಗುವುದಿಲ್ಲ, ಮತ್ತು ವೃದ್ಧಾಪ್ಯವೇತನವನ್ನೂ ಸಹ ಕೊಡುವ ಅವಶ್ಯಕತೆ ಬರುವುದಿಲ್ಲ. ನನಗೆ ತಿಳಿದಂತೆ ಹಲವಾರು ಯೋಜನೆಗಳು ಇವೆ. ನಾನು ಕೆಲವು ಯೋಜನೆಗಳ ಬಗ್ಗೆ ಮಾತ್ರ ಈಗ ಹೇಳಿದೆ. ಇಂತಹ ಹಲವಾರು ಯೋಜನೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತಂದಿದ್ದೇ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಪ್ರತಿಯೊಂದು ಕುಟುಂಬವೂ ಆರ್ಥಿಕ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಇಂತಹ ಯೋಜನೆಗಳ ಬಗ್ಗೆ ಜನರು ಅರ್ಜಿ ಹಾಕಿಕೊಳ್ಳುವವರೆಗೆ ಕಾಯದೆ ಸರ್ಕಾರವೇ ಎಲ್ಲ ರೀತಿಯ ಸಹಾಯ ಮಾಡಬೇಕು. ಮಳೆಗಾಲದಲ್ಲಿ ವ್ಯವಸಾಯ ಕಸುಬನ್ನು ಮರೆಯದೆ ಅದನ್ನು ಮುಂದುವರೆಸಬೇಕು. ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಇದು ನನ್ನ ಅಭಿಪ್ರಾಯ. ಇನ್ನು...

ಶ್ರೀ ಕೆ. ಮಲ್ಲಪ್ಪ.—ಸಣ್ಣ ಕೈಗಾರಿಕೆಗಳ ಮೂಲಕ ನಾವು ಕೆಲವೊಂದು ವಸ್ತುಗಳನ್ನು ಪರದೇಶಗಳಿಗೆ ರವಾನೆ ಮಾಡಿದರೆ ಇಲ್ಲಿ ನಾವು ಅದೇ ವಸ್ತುಗಳ ಬೆಲೆಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಗುತ್ತದೆಯೇ ? ಇಂತಹ ಸಂದರ್ಭಗಳಲ್ಲಿ ನಮ್ಮ ಜನರ ಬಗ್ಗೆಯೂ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮಲ್ಲಿ ತಯಾರಾದಂಥ ವಸ್ತುಗಳನ್ನು ಅಲ್ಲಿಗೆ ಕಳುಹಿಸಿದರೆ ನಾವು ಪೆಟ್ರೋ ಡಾಲರ್‌ಗಳನ್ನು ಸಂಪಾದನೆ ಮಾಡಬಹುದು. ಜಪಾನ್ ದೇಶದಲ್ಲಿ ತಯಾರಾದ ಸೋನಿ-ರೇಡಿಯೊವನ್ನು ನಮ್ಮ ದೇಶದವರು ಖರೀದಿ ಮಾಡಿದರೆ ನಮ್ಮ ದೇಶದ ದುಡ್ಡು ಜಪಾನ್‌ಗೆ ಹೋಗಿ ಸೇರುತ್ತದೆ. ಅದೇ ರೀತಿ...

ಶ್ರೀ ಕೆ. ಮಲ್ಲಪ್ಪ.—ಕೇಂದ್ರ ಸರ್ಕಾರದವರು ಕೆಲವೊಂದು ಹಣ್ಣುಗಳನ್ನು ರಫ್ತು ಮಾಡುವಂತಹ ನಿಯಮವನ್ನು ಜಾರಿಗೆ ತಂದ ಕಾರಣ ಆ ಹಣ್ಣುಗಳ ಧಾರಣೆ ಯಾವ ಮಟ್ಟಕ್ಕೆ ನಮ್ಮಲ್ಲಿ ಹೋಯಿತೆಂಬುದು ಎಲ್ಲರಿಗೂ ಗೊತ್ತಿದೆ. ಇಲ್ಲಿ ಬೆಲೆ ಜಾಸ್ತಿಯಾದಾಗ ನಮ್ಮ ಜನರು ಬಹಳ ಪಶ್ಚಾತ್ತಾಪಪಟ್ಟರು. ಆದ್ದರಿಂದ ನಾನು ಮಾನ್ಯ ಬಂಗಾರಪ್ಪನವರ ಗಮನಕ್ಕೆ ತರುವುದೇನೆಂದರೆ, ಹಣಗಳಿಕೆ ದೃಷ್ಟಿಯಿಂದ ನಾವು ಹಣ್ಣುಗಳನ್ನು ರಫ್ತು ಮಾಡುವುದಾದರೆ ಇಲ್ಲಿನ ನಮ್ಮ ಜನರಿಗೆ ಆ ಹಣ್ಣುಗಳನ್ನು ಕಡಿಮೆ ಬೆಲೆಯಲ್ಲಿ ತಿನ್ನುವಂತಹ ಅವಕಾಶ ಇಲ್ಲದೇ ಹೋಗಿ ಪಶ್ಚಾತ್ತಾಪ ಪಡುವಂತಹ ಸಂದರ್ಭಬರಬಾರದೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಭಿಪ್ರಾಯ ನನಗೆ ಈಗ ಅರ್ಥವಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಈಗ ದೆಹಲಿಯಲ್ಲಿ ಮೋತಿ-ಮಹಲ್ ಎಂಬ ಹೋಟೆಲ್ ಇದೆ. ತಂದೂರಿ-ಚಿಕನ್ ಎಂದು ಬಹಳ ಚೆನ್ನಾಗಿ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ತಂದೂರಿ-ಚಿಕನ್ ಅಲ್ಲ, ಬಟರ್-ಚಿಕನ್.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಸೋವಿಯತ್-ರಷ್ಯಾ ಮುಂತಾದ ರಾಷ್ಟ್ರಗಳಿಗೆ ಕಳುಹಿಸುತ್ತಿರುವ ಕಾರಣ ದೆಹಲಿ ಜನರಿಗೆ ಸಾಕಷ್ಟು ಸಿಗುತ್ತಿಲ್ಲ. ಇದೇ ವಾದವನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿಂದ ಉಪ್ಪಿನಕಾಯಿ ತಯಾರು ಮಾಡಿ ಕಳುಹಿಸಿದರೆ ನಮ್ಮ ಜನರಿಗೇ ಉಪ್ಪಿನಕಾಯಿ ಸಿಗುವುದಿಲ್ಲವೆಂದು ಮಾನ್ಯ ಸದಸ್ಯರು ಅಭಿಪ್ರಾಯ ಪಡುತ್ತಿದ್ದಾರೆ. ಆದರೆ ನಮ್ಮ ದೇಶದ ಒಂದು ಅವಶ್ಯಕತೆಯನ್ನು ನೋಡಿಕೊಂಡು ಬೇರೆ ದೇಶಗಳಿಗೆ ಕಳುಹಿಸಿಕೊಡಿ ಎಂದು ನಾನು ಹೇಳುತ್ತಿದ್ದೇನೆ. ಇದರಿಂದ ನಮ್ಮ ಜನರಿಗೆ ಕೆಲಸವೂ ಸಹ ಸಿಗುತ್ತದೆ. ಅದೇ ಜಪಾನ್ ದೇಶ ಎರಡನೇ ಮಹಾಯುದ್ಧದ ಸಮಯದಲ್ಲಿ ಸುಟ್ಟು ಬೂದಿಯಾದರೂ ಸಹ ಅದೇ ಬೂದಿ ಮೇಲೆ ಮತ್ತೆ ಅಲ್ಲಿನ ಜನರು ರಾಷ್ಟ್ರವನ್ನು ಕಟ್ಟಿ ಬೆಳೆಸಿರುವುದಷ್ಟೇ ಅಲ್ಲ, ಎಲಕ್ಟ್ರಾನಿಕ್ಸ್ ಗೂಡ್ಸ್ ತಯಾರಿಕೆ ವಿಚಾರದಲ್ಲಿ ಬೇರೆ ಐರೋಪ್ಯ ರಾಷ್ಟ್ರಗಳಿಗಿಂತ ಮುಂದೆ ಹೋಗಿ ಪ್ರಪಂಚದ ಮಾರುಕಟ್ಟೆಯನ್ನು ತಮ್ಮ ಒಂದು ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಅಮೇರಿಕಾ ಮುಂತಾದ ಕೆಲವು ರಾಷ್ಟ್ರಗಳೂ ಸಹ ಬಹಳ ಮುಂದೆ ಹೋಗಿವೆ. ಅದು ಏನೇ ಇರಲಿ, ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಮುಖ್ಯವಾಗಿ ನಮ್ಮ ಅವಶ್ಯಕತೆ ನೋಡಿಕೊಂಡು ಇನ್ನುಳಿದಿದ್ದನ್ನು ರಫ್ತು ಮಾಡಿದ್ದೇ ಆದರೆ ನಮ್ಮ ಜನರ ಒಂದು ಆರ್ಥಿಕ ಸ್ಥಿತಿ ಮೇಲೆ ಬರಲು ಸಹಾಯವಾಗುತ್ತದೆಂದು ಹೇಳುತ್ತೇನೆ.

ಇನ್ನು 13ನೇ ಬೇಡಿಕೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಪಟ್ಟಿದ್ದು. ಈಗ ಮಾನ್ಯ ರಾಚಯ್ಯನವರೂ ಸಹ ಇದ್ದಾರೆ. ಈ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಡುವುದಾದರೆ, ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮಲ್ಲಿ ಅಕ್ಷರಜ್ಞಾನ ಪಡೆದವರ ಸಂಖ್ಯೆ 17 ಪರ್ಸೆಂಟ್‌ನಷ್ಟು ಇತ್ತು. ಈಗ ಇವರ ಸಂಖ್ಯೆ 33 ರಿಂದ 35 ಪರ್ಸೆಂಟ್‌ನಷ್ಟು ಆಗಿದೆ. ಅಂದರೆ ಸುಮಾರಾಗಿ 15 ರಿಂದ 16 ಪರ್ಸೆಂಟ್‌ನಷ್ಟು ಮಾತ್ರ ಹೆಚ್ಚಾಗಿದೆ. ಅಂದರೆ ನಮ್ಮಲ್ಲಿ ಇನ್ನೂ 60-65ರಷ್ಟು ಜನ ಹೆಬ್ಬೆಟ್ಟು ಒತ್ತುವವರಿದ್ದಾರೆಂದು ಅರ್ಥವಾಗುತ್ತದೆ. ಇಂತಹ ಜನರು ಕೇವಲ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ದಹಲಿ, ಕಲ್ಕತ್ತಾ, ಮುಂಬೈ, ಬೆಂಗಳೂರು ಮುಂತಾದ ನಗರಪ್ರದೇಶಗಳಲ್ಲಿಯೂ ಸಹ ಇದ್ದಾರೆ. ಈಗ ಬೆಂಗಳೂರು ನಗರಕ್ಕೆ ಬಿಜಾಪುರ, ಗುಲ್ಬರ್ಗಾ ಮುಂತಾದ ಕಡೆಗಳಿಂದ ಜನರು ಕಟ್ಟಡಗಳ ಕೆಲಸ ಮಾಡಲು ಬರುತ್ತಾರೆ. ಹೊಸ ಕಟ್ಟಡದ ಕೆಲಸ ನಡೆಯುವ ಕಡೆಯಲ್ಲಿಯೇ ಇವರು ತಮ್ಮ ಸಂಸಾರದೊಂದಿಗೆ ವಾಸ ಮಾಡಿಕೊಂಡಿರುತ್ತಾರೆ. 6 ರಿಂದ 10 ವರ್ಷದೊಳಗಿನ ಮಕ್ಕಳು ಇವರಿಗೆ ಇದ್ದರೆ ಆ ಮಕ್ಕಳ ಹತ್ತಿರವೂ ಸಹ ಸಣ್ಣಪುಟ್ಟ ಕೆಲಸಗಳನ್ನು ಇವರು ಮಾಡಿಸುತ್ತಾರೆ. ಇದರಿಂದ ಈ ಮಕ್ಕಳಿಗೆ ತಾವು ಶಾಲೆಗೆ ಹೋಗಬೇಕೆಂಬ ಪ್ರಜ್ಞೆಯೇ ಬರುವುದಿಲ್ಲ. ಒಂದು ಕಟ್ಟಡದ ಕೆಲಸ ಮುಗಿಯಿತೆಂದರೆ ಇನ್ನೊಂದು ಕಟ್ಟಡದ ಕೆಲಸಕ್ಕೆ ಸಂಸಾರ ಸಮೇತ ಹೋಗುತ್ತಾರೆ. ಒಂದು ಕಟ್ಟಡಕ್ಕೂ ಮತ್ತೊಂದು ಕಟ್ಟಡಕ್ಕೂ ಐದಾರು ಮೈಲಿಗಳ ಅಂತರವಿದ್ದೇ ಇರುತ್ತದೆ. ಈ ಒಂದು ಅಂತರದಲ್ಲಿರುವಂತಹ ಯಾವುದಾದರು ಒಂದು ಶಾಲೆಗೆ ಇವರು ತಮ್ಮ ಮಕ್ಕಳನ್ನು ಒಂದುವೇಳೆ ಸೇರಿಸಲು ಹೋದರೆ ಸೀಟ್ ಇಲ್ಲ ಎಂದು ಹೇಳುತ್ತಾರೆ. ಸೀಟ್ ಬೇಕಾದರೆ ಇನ್‌ಫ್ಲೂಯೆನ್ಸ್ ಇರಬೇಕಾಗುತ್ತದೆ, ಇಲ್ಲವೇ ಹಣ ಇರಬೇಕಾಗುತ್ತದೆ. ಈ ಎರಡೂ ಇಲ್ಲದ ಕಾರಣ ಇವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹೋಗುವುದಿಲ್ಲ. ಈ ಹೆಬ್ಬೆಟ್ಟು ಒತ್ತುವ ಜನ ಕಟ್ಟಡಗಳನ್ನು ಕಟ್ಟಿಸುವ ಜಾಗದಲ್ಲಿ ಮಾತ್ರವಲ್ಲದೆ ನಗರ ಮತ್ತು ಪಟ್ಟಣಗಳಲ್ಲಿರುವ ಕೊಳಚೆ ಪ್ರದೇಶಗಳಲ್ಲಿಯೂ ಸಹ ಇದ್ದಾರೆ. ಇಲ್ಲಿನ ಜನರು ಮತ್ತು ಹೆಣ್ಣು ಮಕ್ಕಳು ಗಾಡಿಗಳಲ್ಲಿ ತರಕಾರಿಯನ್ನು ಇಟ್ಟುಕೊಂಡು ಮಾರಾಟ ಮಾಡಲು ಹೋಗುತ್ತಾರೆ. ಆಗ ಆ ಗಾಡಿಯನ್ನು ನೂಕಲು ತಮ್ಮ ಮಕ್ಕಳನ್ನು ಸಹ ಕರೆದುಕೊಂಡು ಹೋಗುತ್ತಾರೆ. ಈ ಕಾರಣದಿಂದ ಈ ಮಕ್ಕಳಿಗೆ ವಿದ್ಯಾರ್ಜನೆ ಎಂಬುದೇ ಇಲ್ಲದಂತೆ ಆಗಿದೆ. ವಿದ್ಯೆ ಕಲಿಯುವ ಸಂದರ್ಭದಲ್ಲಿ ಕೆಲಸ ಮಾಡುತ್ತವೆ. ಇದೇನು ಅಂತಹ ಸಣ್ಣ ವಿಚಾರವಲ್ಲ. ಅಕ್ಷರ ಬರದಿದ್ದರೆ ವಿದ್ಯೆ ಕಲಿಯಲು ಕಷ್ಟವಾಗುತ್ತದೆ. ಆದ್ದರಿಂದ ಕಡ್ಡಾಯ ಶಿಕ್ಷಣ ಪದ್ಧತಿ ಏನಿದೆ, ಇದನ್ನು ನಮ್ಮ ಸಮಾಜದಲ್ಲಿ ತೀವ್ರತರವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗ ವಯಸ್ಕರ ಶಿಕ್ಷಣ ಸಮಿತಿಯವರು ಕಾರುಗಳಲ್ಲಿ ಓಡಾಡುತ್ತಾರೆಯೇ ಹೊರತು ವಯಸ್ಕರ ಶಿಕ್ಷಣಕ್ಕೆ ಹೆಚ್ಚು ನಿಗಾ ಕೊಡದ ಕಾರಣ ಇದೂ ಕೂಡ ಸಂಪೂರ್ಣವಾಗಿ ಸ್ಥಗಿತವಾಗಿದೆ. ಇನ್ನು ಮುಂದೆಯಾದರೂ ಕಡ್ಡಾಯ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಈ ಎರಡೂ ಶಿಕ್ಷಣದ ಬಗ್ಗೆ ತೀವ್ರತರವಾದಂಥ ಕಾರ್ಯಕ್ರಮಗಳನ್ನು ತಮ್ಮ ಒಂದು ಆಡಳಿತ ಕಾಲದಲ್ಲಿ ಜಾರಿಗೆ ತರಬೇಕೆಂಬುದೇ ನನ್ನ ಹೆಬ್ಬಯಕೆ ಆಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೊಸದಾಗಿ ಒಂದು ಶಾಲೆ ಪ್ರಾರಂಭ ಮಾಡಲು 35-40 ಹುಡುಗರು ಇರಬೇಕೆಂದು ನಿಯಮವಿದೆ. ಈ ಒಂದು ನಿಯಮದ ಪ್ರಕಾರ ಹುಡುಗರಿದ್ದರೂ ಸಹ ನಮ್ಮ ರಾಜ್ಯದ ಅನೇಕ ಹಳ್ಳಿಗಳಲ್ಲಿ ಇನ್ನೂ ಶಾಲೆಗಳನ್ನೇ ಪ್ರಾರಂಭ ಮಾಡಿಲ್ಲ. ನನ್ನ ತಾಲ್ಲೂಕ್‌ನಲ್ಲಿಯೂ ಸಹ ಇಂತಹ ಅನೇಕ ಹಳ್ಳಿಗಳಿವೆ. ಗುಡ್ಡಗಾಡು ಪ್ರದೇಶಗಳಲ್ಲಿ ಮಕ್ಕಳು ಮಳೆಗಾಲದಲ್ಲಿ ಬರುವಂತಹ ಪ್ರವಾಹವನ್ನು ದಾಟಿಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಕ್ಷರ ಕಲಿಯಲು ಹೋಗುವುದು ಕಷ್ಟವಾಗುತ್ತದೆ.

ಎಲ್ಲ ಕಡೆ ಜನಸಂಖ್ಯೆ ಬೆಳೆದಿದೆ, ನನ್ನ ತಾಲ್ಲೂಕಿನಲ್ಲಿ ಕೂಡ ಜನಸಂಖ್ಯೆ ಬೆಳೆದಿದೆ. ತಾಲ್ಲೂಕು ವಿದ್ಯಾಧಿಕಾರಿಯಿಂದ ಲಿಸ್ಟ್ ತರಿಸಿ ನೋಡಿದ್ದೇನೆ. ಲಿಸ್ಟ್ ಬೆಳಿಗ್ಗೆ ತಾನೇ ಬಂತು. ನನ್ನ ತಾಲ್ಲೂಕಿನಲ್ಲಿ ಸುಮಾರು 23 ಗ್ರಾಮಗಳಲ್ಲಿ ಶಾಲೆಗಳು ಇಲ್ಲ. ಬಯಲು ಸೀಮೆ ಪ್ರದೇಶಗಳಲ್ಲೂ ಶಾಲೆಗಳಿಲ್ಲ. ಮಲೆನಾಡು ಪ್ರದೇಶಗಳಲ್ಲೂ ಶಾಲೆಗಳು ಇಲ್ಲ. ಎಜುಕೇಶನ್ ಡಿಮಾಂಡ್ ಬಂದಾಗ ಒಂದು ಘೋಷಣೆ ಮಾಡಿ, ಎಲ್ಲೆಲ್ಲಿ ಶಾಲೆಗಳು ಇಲ್ಲ ಅಂತಹ ಕಡೆ ಶಾಲೆಗಳನ್ನು ಕೊಡುತ್ತೇವೆಂದು ಹೇಳಿ. ನೀವು ಕಟ್ಟಡಗಳನ್ನು ಕಟ್ಟುವುದಕ್ಕೆ ಆಗದಿದ್ದರೆ ನಿಧಾನವಾಗಿ ಕಟ್ಟಡಗಳನ್ನು ಕಟ್ಟಿಸಿ ಸಧ್ಯಕ್ಕೆ ಬ್ರಾಂಚ್‌ಶಾಲೆ ಎಂದು ಶುರುಮಾಡಿ ತಕ್ಷಣ ಉಪಾಧ್ಯಾಯರುಗಳನ್ನು ನೇಮಕ ಮಾಡಿ. ಈ ವರ್ಷ ಶಾಲೆಗಳು ಇಲ್ಲದಿರುವ ಕಡೆ ಶಾಲೆಗಳನ್ನು ಕೊಡುತ್ತೇವೆಂದು ಹೇಳಿ. ಇದು ಗ್ರಾಮೀಣ ಜನತೆಗೆ ಅನುಕೂಲವಾಗುತ್ತದೆ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುವುದು ನನ್ನ ಕರ್ತವ್ಯ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಇಂದು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ಡೋಸ್ ಕೊಡುತ್ತೇನೆ. ಆಹಾರಧಾನ್ಯಗಳ ಬಗ್ಗೆ ಹೇಳುವುದಾದರೆ, ಆಹಾರಧಾನ್ಯಗಳ ಬೆಲೆಯನ್ನು ಕಡಿಮೆ ಮಾಡಲು ಸಚಿವಸಂಪುಟದ ಉಪಸಮಿತಿಯನ್ನು ಮಾಡಿದ್ದಾರೆ. ದಿನನಿತ್ಯ ಏರುತ್ತಿರುವ ಬೆಲೆಗಳನ್ನು ಇಳಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಕೆಲವು ವಸ್ತುಗಳ ಬೆಲೆಯನ್ನು ಇಳಿಸಿದ್ದೇವೆಂದು ಹೇಳಿದ್ದಾರೆ ; ನಾನು ಒಪ್ಪುತ್ತೇನೆ. ಬೆಲೆಗಳನ್ನು ಇಳಿಸುತ್ತೇವೆಂದು

ಹೇಳುವಾಗ ಬರೀ ಕರ್ನಾಟಕ ರಾಜ್ಯದ ಬೆಲೆಗಳನ್ನು ನೋಡುವುದಕ್ಕಾಗುವುದಿಲ್ಲ. ಕೇಂದ್ರ, ರಾಜ್ಯ, ರಾಜ್ಯ ಮತ್ತು ರಾಜ್ಯ ಹೀಗೆ ಹಲವಾರು ವಿಚಾರಗಳು ಬರುತ್ತವೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನಿಮಗೆ ಬೆಲೆಗಳನ್ನು ಇಳಿಸಬೇಕೆಂಬ ತೀವ್ರ ಆಸಕ್ತಿ ಇದ್ದಿದ್ದರೆ, ಏನು ಸಚಿವಸಂಪುಟದ ಉಪಸಮಿತಿ ರಚನೆ ಮಾಡಿದ್ದೀರಿ, ಆ ಸಮಿತಿಯಿಂದ ಮೂರು ದಿವಸಗಳಲ್ಲಿ ವರದಿಯನ್ನು ತೆಗೆದುಕೊಂಡು ಬೆಲೆಗಳನ್ನು ಇಳಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿತ್ತು. ಬೆಲೆಗಳನ್ನು ಇಳಿಸತಕ್ಕದ್ದು ಹೇಗಿದೆ ಎನ್ನುವುದನ್ನು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1 ಕೆ.ಜಿ. ಅಕ್ಕಿಗೆ 3 ರೂಪಾಯಿ 40 ಪೈಸೆಯಿಂದ 80 ಪೈಸೆಯವರೆಗೂ ಹೋಗುತ್ತಿದೆ. ಅಲ್ಲಿ ಹೋಗಿ ತಾವು ಭಾಷಣ ಮಾಡಿ ಬಂದಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿನಿತ್ಯ ಬೆಲೆ ಏರುತ್ತಲೇ ಇದೆ. ನೀವು ಬೆಲೆಗಳನ್ನು ಇಳಿಸಿದ್ದೇವೆಂದು ಹೇಳುತ್ತೀರಿ, ಬೆಲೆಗಳು ಮಾರ್ಕೆಟ್‌ನಲ್ಲಿ ದಿನೇ ದಿನೇ ಏರುತ್ತಲೇ ಇವೆ. ನೀವು ಸಂಪುಟದ ಉಪ ಸಮಿತಿ ರಚನೆ ಮಾಡಿಕೊಂಡು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ, ಬ್ಲಾಕ್‌ಮಾರ್ಕೆಟ್ ನಡೆಯುತ್ತಿರುವುದರಿಂದ ಬೆಲೆಗಳು ಏರುತ್ತವೆ. ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರುವ ಪ್ರವೃತ್ತಿಯನ್ನು ಸೃಷ್ಟಿ ಮಾಡತಕ್ಕ ಒಂದು ವರ್ಗ ಸಮಾಜದಲ್ಲಿದೆ. ಯಾವುದೇ ಸರ್ಕಾರವಿದ್ದರೂ ಅದು ಇದ್ದೇ ಇರುತ್ತದೆ. ಅದು ತಮ್ಮ ಸಮಾಜದಲ್ಲಿ ಬೆಳೆದುಕೊಂಡು ಬಂದಿದೆ. ಸರ್ಕಾರ ಬಿಗಿತನದಿಂದ ಯಾರು ಅಕ್ರಮವಾಗಿ ದಾಸ್ತಾನು ಸಂಗ್ರಹಿಸುತ್ತಾರೆ ಅಂತಹವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಅಕ್ರಮ ದಾಸ್ತಾನು ಸಂಗ್ರಹ ಮಾಡುವುದರಿಂದ ಬೆಲೆಗಳು ಏರುವುದಕ್ಕೆ ಕಾರಣವಾಗುತ್ತದೆ. ನಿಮಗೆ ಅಧಿಕಾರವಿದೆ, ನೀವು ಇರತಕ್ಕ ಅಧಿಕಾರವನ್ನು ಚಲಾವಣೆ ಮಾಡುವುದು ಮಾತ್ರ ಉಳಿದಿದೆ. ನಿಮ್ಮ ವರದಿ ಬಂದಮೇಲೂ ಬೆಲೆಗಳನ್ನು ಎಷ್ಟು ಹೆಚ್ಚು ಮಾಡಿದ್ದಾರೆ ನೋಡಿದ್ದೀರಾ ? ಗುಂಡೂರಾಯರೂ ಹೀಗೆ ಹೇಳುತ್ತಿದ್ದರು. ನೀವು ಅಕ್ಕಿ ಬೆಲೆಯನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಇವತ್ತು ಬೀದರ್ ಕಡೆ ಅಕ್ಕಿಯನ್ನು ಎಲ್ಲರೂ ಊಟ ಮಾಡುವುದಿಲ್ಲ. ಬೆಲೆಗಳನ್ನು ಹತೋಟಿಗೆ ತರುತ್ತೇವೆಂದು ಹೇಳಿ ಇವತ್ತು ಬೆಲೆಗಳನ್ನು ತಹಬಂದಿಗೆ ತರುವುದಕ್ಕೆ ನಿಮಗೆ ಆಗಿಲ್ಲ. ಇಲ್ಲೂ ಏನಾದರೂ ಸ್ವಲ್ಪ ಒಂದೆರಡು ಸಾಮಾನುಗಳಿಗೆ ಬೆಲೆ ಇಳಿದಿರಬಹುದು. ಹೊರಗಡೆ ಬೆಲೆ ಏನೂ ಇಳಿದಿಲ್ಲ. ನಮಗೆ ಉತ್ತರ ಬೇಕಾಗಿದೆ ; ಮಂತ್ರಿಮಂಡಲದ ಉಪಸಮಿತಿ ವರದಿ ಬಂದಮೇಲೂ ನೀವು ತೆಗೆದುಕೊಂಡಿರತಕ್ಕ ಕ್ರಮವೇನು ? ಈ ವಿಚಾರವನ್ನು ಗಮನದಲ್ಲಿಟ್ಟು ಏನಾದರೂ ಒಂದು ಮಾಡಿ ಬೆಲೆಗಳನ್ನು ತಹಬಂದಿಗೆ ತರುವುದಕ್ಕೆ ಕಟ್ಟುನಿಟ್ಟಾಗಿ ನಿಷ್ಠೂರವಾಗಿ ಯಾರೇ ಇರಲಿ ಬೆಲೆ ಹೆಚ್ಚಿಸಿದರೆ ಅವರ ಮೇಲೆ ಕ್ರಮ ಜರುಗಿಸಿ. ನಿಮಗೆ ಅಧಿಕಾರವಿದ್ದರೂ ಏತಕ್ಕೆ ತಡ ಮಾಡುತ್ತಿದ್ದೀರಿ ? ಮೂರು ತಿಂಗಳು ಕಳೆದುಹೋಗುತ್ತಿದೆ. ನೀವು ಒಳ್ಳೆಯ ಕೆಲಸ ಮಾಡಿ ನಿಮ್ಮ ಬಗ್ಗೆ ಒಂದು ಒಳ್ಳೆಯ ಅಭಿಮಾನ ಮೂಡಿಸಿಕೊಳ್ಳಿ. ಇಲ್ಲದಿದ್ದರೆ ನಿಮಗೆ ಮುಂದೆ ಕಷ್ಟವಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಯಾವರೀತಿ ಮಾಡಿದ್ದಾರೆಂಬುದನ್ನು ತಿಳಿದುಕೊಂಡು ನೀವು ಕೂಡ ಮಾಡುವುದಕ್ಕೆ ಪ್ರಯತ್ನ ಮಾಡಿ. ಮಂತ್ರಿಗಳ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ನೀರಾವರಿಯ ಬಗ್ಗೆ ಹೇಳುವುದಾದರೆ, ಸಾಮೂಹಿಕ ಬಾವಿಗಳು ಏನಿವೆ ಅವುಗಳನ್ನು ಮಾಡುವುದು ಬಹಳ ಮುಖ್ಯವಾದುದು. ಇಂತಹ ಯೋಜನೆಗಳನ್ನು ಅನೇಕ ಪ್ರದೇಶಗಳಲ್ಲಿ ಕೇಳುತ್ತಿದ್ದಾರೆ. ಒಬ್ಬೊಬ್ಬರೇ ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ಪಡೆದುಕೊಂಡು ಮಾಡುವುದಕ್ಕೆ ಆಗುವುದಿಲ್ಲ. ಸಾಮೂಹಿಕ ಬಾವಿಗಳನ್ನು ಮಾಡಬೇಕಾದರೆ ಜಿಯಾಲಜಿಸ್ಟ್ ಪಾಯಿಂಟನ್ನು ಗುರ್ತು ಮಾಡಬೇಕು. ಅಲ್ಲಿ ಬಾವಿ ತೆಗೆದ ಮೇಲೆ ನೀರಿಗೆ ಟ್ಯಾಕ್ಸ್ ಹಾಕುವಾಗ ದಾಮಾಷ ಲೆಕ್ಕಹಾಕಿ ಫಿಕ್ಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಾನೊಂದು ಸಲಹೆ ಕೊಡುತ್ತೇನೆ, ಈ ಬಗ್ಗೆ ನೀವು ಒಂದು ಯೋಜನೆ ಹಾಕಿಕೊಳ್ಳಿ. ಒಂದು ಯೋಜನೆ ಹಾಕಿಕೊಂಡು ಬಾವಿಗಳನ್ನು ಕೊಡುತ್ತಾ ಬಂದರೆ ಜನರಿಗೆ ಉಪಯೋಗವಾಗುತ್ತದೆ. ಗುಲ್ಬರ್ಗಾ ಭಾಗದಲ್ಲಿ ಬೀದರ್‌ಗೆ ಹೋಗತಕ್ಕ ದಾರಿಯಲ್ಲಿ ಒಂದು ಬೋರ್‌ವೆಲ್ ಹಾಕಿದ್ದಾರೆ. ಅದರಲ್ಲಿ ನೀರು ಯಥೇಚ್ಛವಾಗಿ ಬರುತ್ತಿದೆ. ಹಳೇಮೈಸೂರು ಭಾಗದಲ್ಲೂ ಸಹ ತಂತಾನೇ ನೀರು ಬರತಕ್ಕ ಬೋರ್‌ವೆಲ್‌ಗಳು ಸಿಕ್ಕಿವೆ. ಕೆಲವು ಕಡೆ ಫೇಲ್ ಆಗುತ್ತವೆ. ನೀರು ಯಥೇಚ್ಛವಾಗಿ ಸಿಗತಕ್ಕ ಪ್ರದೇಶಗಳಲ್ಲಿ ಅದಕ್ಕೊಂದು ಪ್ಲಾನ್ ಮಾಡಿ ಸಾಮೂಹಿಕವಾಗಿ ಉಪಯೋಗ ಮಾಡಿಕೊಳ್ಳತಕ್ಕ ಒಂದು ಕಾನೂನು ತರಬೇಕು. ನೀರು ಹೆಚ್ಚು ಎಲ್ಲಿ ಸಿಗುತ್ತದೆ ಅಂತಹ ಕಡೆ ಹೆಚ್ಚಿನ ಗಮನ ಕೊಡಬೇಕು. ದೊಡ್ಡ ನೀರಾವರಿ, ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ತಿ ಮಾಡಲು ವಿಶ್ವಬ್ಯಾಂಕ್‌ನಿಂದ ಹಣದ ನೆರವು ಪಡೆಯಲಾಗುತ್ತದೆ ಎಂದು ಹೇಳಲಾಗುತ್ತದೆ ಎಂದು ಹೇಳಲಾಗಿದೆ. ಆ ಬಗ್ಗೆ ನೀರಾವರಿ ಬೇಡಿಕೆ ಬಂದಾಗ ಚರ್ಚೆ ಮಾಡೋಣ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನೆಲ್ಲಾ ಹೇಳಲಾಗಿದೆ. ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಮೇ ಅಥವಾ ಜೂನ್ ತಿಂಗಳಲ್ಲಿ ಚುನಾವಣೆ ಮಾಡಲಾಗುತ್ತದೆಂದು ಮಾನ್ಯ ಸಚಿವರೇ ತಿಳಿಸಿದ್ದಾರೆ. ಸ್ವಾಗತ ಮಾಡತಕ್ಕದ್ದನ್ನು ಸ್ವಾಗತ ಮಾಡಬೇಕು. ನೀವು ಚುನಾವಣೆ ಮಾಡಿ. ಜೊತೆಗೆ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳು, ತಾಲ್ಲೂಕುಬೋರ್ಡ್‌ಗಳಿಗೂ ಚುನಾವಣೆಗಳನ್ನು ನಡೆಸಿ. ನೀವು ಚುನಾವಣೆ ಮಾಡುತ್ತೇವೆಂದು ಮಾತು ಕೊಟ್ಟಿದ್ದೀರಿ. ನಿಮ್ಮ ಮಾತಿನ ಪ್ರಕಾರ ಚುನಾವಣೆ ನಡೆಸಿ. ನಿಮ್ಮಲ್ಲಿರುವ ತಪ್ಪುಗಳನ್ನು ಹುಡುಕುವುದಕ್ಕೆ ಮಾತನಾಡುತ್ತಿಲ್ಲ. ಒಳ್ಳೆಯ ಕೆಲಸ ಮಾಡಿದರೆ ಲಕ್ಷ್ಮೀ

ಸಾಗರ್‌ರವರೂ ಕೂಡ ಶಹಭಾಷ್‌ಗಿರಿ ಕೊಡುವುದಕ್ಕೆ ತಯಾರಾಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ವಿಚಾರದಲ್ಲೂ ಕೂಡ ನಮಗೇನು ಅನುಮಾನ ಇಲ್ಲ. ಸರ್ಕಾರಕ್ಕೂ ಏನೂ ಭಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮನೋಭಾವ ಎಲ್ಲರಿಗೂ ಗೊತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿದ್ದರೆ ಪ್ರಕಟವಾಗಿರುತ್ತಿತ್ತು, ನಾನು ಹಿಂದಿನದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಪ್ರಕಟಿತ ಮನೋಭಾವ ನಿಮ್ಮದು.

SRI A. LAKSHMISAGAR —"Even the devil knows the mind of the man." ನಿಮ್ಮ ಮಾತಿನ ಮೇಲೆ ನನಗೆ ಸಂಪೂರ್ಣ ಭರವಸೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಅಪ್ರಕಟಿತ ಮನೋಭಾವ ಗೊತ್ತಾಗುವುದಕ್ಕಿಂತ ನನ್ನ ಮನಸ್ಸಿನಲ್ಲಿಯೇ ಇಟ್ಟುಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಚಿಂತನನಿಧಿ ಬಗ್ಗೆ ವ್ಯಾಖ್ಯಾನ ನಡೆದಿದೆ ನನ್ನ ಹತ್ತಿರ ವಿವರಗಳು ಇದ್ದರೂ ಈ ಸಂದರ್ಭದಲ್ಲಿ ಅವುಗಳನ್ನೆಲ್ಲಾ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಅಪಾರವಾದ ನಂಬಿಕೆ ಇದೆ. ಇದರಿಂದ ಬಹಳ ಉಪಯೋಗವಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಯವರು ನಂಬಿದ್ದಾರೆ. ನನ್ನ ಅಭಿಪ್ರಾಯವಾದರೂ ಇಷ್ಟೆ. ಇದನ್ನು ತಜ್ಞರ ಸಮಿತಿ ಎಂದು ಹೇಳಬಹುದು. ಹೆಸರು ಏನೇ ಇರಲಿ ; ಇದರ ಉಪಯೋಗವಾದರೆ ಸ್ವಾಗತಾರ್ಹ. ಆದರೆ ಚಿಂತನ ನಿಧಿಯಲ್ಲಿರತಕ್ಕ ಕೆಲವು ಜನರ ಆಡಳಿತದ ಅನುಭವ ಕರ್ನಾಟಕದ ಜನತೆಗೆ ಗೊತ್ತಿದೆ. ಅವರ ಉಪಯೋಗ ಪಡೆದುಕೊಂಡಿರುವುದು ತಮಗೆಲ್ಲಾ ಗೊತ್ತಿದೆ. ಆಗಲೇ ಅವರ ಆಡಳಿತ ಅನುಭವವನ್ನು ನೋಡಿಬಿಟ್ಟಿದ್ದೇವೆ. ಇದು ಹಳೇ ಶ್ಯಾನುಭೋಗರ ಸಂತೆ ಅಥವಾ ಸಭೆ ಆಗಬಾರದು ಎನ್ನುವುದೇ ನನ್ನ ಅನಿಸಿಕೆ. ಇದರ ಖರ್ಚು ಇವತ್ತು ಐವತ್ತು ಸಾವಿರ ಎಂದು ಹೇಳಿದ್ದೀರಿ. ಆದರೆ ಇದು ಬೆಳೆಯುತ್ತಾ, 10 ಲಕ್ಷಕ್ಕೆ ಹೋಗಬಹುದು. ಹತ್ತು ಲಕ್ಷ ಹಣ ಖರ್ಚು ಮಾಡಿದರೂ ಚಿಂತೆಯಿಲ್ಲ, ಹತ್ತು ಲಕ್ಷ ಜನಕ್ಕೆ ಇದರ ಉಪಯೋಗವಾದರೆ ನಮ್ಮ ಅಭ್ಯಂತರ ಇಲ್ಲ. ಅದನ್ನು ಬಿಟ್ಟು ಸಭೆ ಸಮಾರಂಭದಲ್ಲಿಯೇ ಹಣ ಖರ್ಚು ಮಾಡುತ್ತಾ ಕೂರುವುದು ಸರಿಯಲ್ಲ. ಇದರಲ್ಲಿ ಎಂಥೆಂಥವರನ್ನು ಹಾಕಿದ್ದೀರಿ ? ಇದರ ಬಗ್ಗೆ ನಾನು ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಸಂದರ್ಭದಲ್ಲಿ ಮಾತನಾಡುತ್ತೇನೆ. ನಿವೃತ್ತರಾಗಿ ಮನೆಯಲ್ಲಿ ಸೊಂಟ ರಿಪೇರಿ ಮಾಡಿಕೊಳ್ಳುವಂಥ ಜನರನ್ನು ಇದರಲ್ಲಿ ಹಾಕಿದ್ದೀರಿ.

ಶ್ರೀ ಆರ್ ಎಲ್ ಜಾಲಪ್ಪ.—ಸ್ವಾಮಿ, ನಾವು ಅವರ ಸೊಂಟಕ್ಕೆ ಕೆಲಸ ಕೊಟ್ಟಿಲ್ಲ. ತಲೆಗೆ ಕೆಲಸ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಜಾಲಪ್ಪನವರು ಇನ್ನೂ ಆ ಸ್ಟೇಜ್ ಮುಟ್ಟಿಲ್ಲ. ಸೊಂಟ ಗಟ್ಟಿ ಇದ್ದರೆ ಬುದ್ಧಿಗೆ ತೊಂದರೆಯಾಗುವುದಿಲ್ಲ.

ಶ್ರೀ ಪಿ ರಾಂದೇವ್.—ಸೌಂಡ್ ಮೈಂಡ್ ಇದ್ದರೆ; ಸೌಂಡ್ ಬಾಡಿ ಇರುತ್ತೆ.

ಶ್ರೀ ಎಸ್. ಬಂಗಾರಪ್ಪ.—ಹೌದು, ಆದರೆ ಚಿಂತನನಿಧಿಯಲ್ಲಿರತಕ್ಕವರು ನಿವೃತ್ತಿ ಹೊಂದಿ ಅರಳು ಮರಳು ಆಗತಕ್ಕಂಥ ಜನ. ಸ್ವಲ್ಪ ವ್ಯತ್ಯಾಸವಾಯಿತೋ ಮೋಸ ಹೋಗಿದ್ದೀರಿ, ಶ್ಯಾನುಭೋಗರ ಸಭೆ ಮಾಡಿದ್ದೀರಿ ಎಂದು ನಾವು ನೀವು ಸೇರಿ ಹೇಳಬೇಕಾಗುತ್ತದೆ.

ಇನ್ನು ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಪರಿಹಾರ ಕೊಡುವ ಬಗ್ಗೆ ಎರಡು ದಾರಿ ಸಿಗುತ್ತದೆ. ಭಾರಿ ಮಳೆ ಆದಾಗ ಅತಿವೃಷ್ಟಿಯಿಂದ ತೊಂದರೆಗೆ ಒಳಗಾದವರಿಗೆ ಮತ್ತು ಅನಾವೃಷ್ಟಿ ಸಂದರ್ಭದಲ್ಲಿ ತೊಂದರೆಗೊಳಗಾದವರಿಗೆ ಕೊಡಬೇಕಾಗುತ್ತದೆ. ಇವತ್ತು ರಾಜ್ಯದ 19 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಬರಗಾಲ ಇದೆ. ಸರ್ಕಾರದವರು ಕಂಟೂರು ಬಂಡಿಂಗ್ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಮಳೆ ಬಿದ್ದಂಥ ಪ್ರದೇಶಗಳಲ್ಲಿ ಭೂಮಿ ಫಲವತ್ತಾಗಿರಬೇಕೆಂಬ ದೃಷ್ಟಿಯಿಂದ ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಮಾಡಿದ ಕೆಲಸಕ್ಕೆ ಕೊಟ್ಟಂಥ ಸಾಲವನ್ನು ರೈತರು ಮೂರು ಕಂತುಗಳಲ್ಲಿ ವಾಪಸ್ಸು ಕೊಟ್ಟರೆ 50 ರಷ್ಟು ಬಿಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಸರ್ಕಾರದವರು ಪ್ರಕೃತಿ ವಿಕೋಪಕ್ಕೆ ತುತ್ತಾದಂಥ ಪ್ರದೇಶಗಳಲ್ಲಿ ಪ್ರತ್ಯೇಕವಾಗಿರತಕ್ಕ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕಾಗಿ ಬೋರ್ಡುಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ ; ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ಅದೇ ಸಂದರ್ಭದಲ್ಲಿ ಸರ್ಕಾರದವರು ಶಾಶ್ವತವಾದ ಯೋಜನೆಗಳನ್ನು ಮಾಡುವುದಕ್ಕೆ ಮನಸ್ಸು ಮಾಡಬೇಕು. ಬರೀ ಬೋರ್ಡು ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಈ ವಿಷಯದಲ್ಲಿ ಪರಿಣತರ ಸಲಹೆಯನ್ನು ತೆಗೆದುಕೊಳ್ಳಬೇಕು. ಗ್ರಾಮೀಣ ಜನತೆಯ ಸಲಹೆಗಳನ್ನು ತೆಗೆದುಕೊಳ್ಳಬೇಕು. ಆಯಾಯಾ ಭಾಗದ ಶಾಸಕರ ಸಲಹೆಗಳನ್ನು ತೆಗೆದುಕೊಂಡು ಶಾಶ್ವತವಾಗಿ ಯೋಜನೆಗಳನ್ನು ಮಾಡುವ ದಿಕ್ಕಿನಲ್ಲಿ ವಿಚಾರ ಮಾಡುವುದು ಬಹಳ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಯವರ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. 1980ನೇ ಇಸವಿಯಲ್ಲಿ ನಾನು ಕಂದಾಯ ಮತ್ತು ಕೃಷಿ ಸಚಿವನಾಗಿದ್ದಾಗ ಒಂದು ಅತಿವೃಷ್ಟಿ ಆಯಿತು. ಶರಾವತಿ ಹೈಡ್ರೋಪ್ರಾಜೆಕ್ಟಿನ ಗೇಟನ್ನು ಒಬ್ಬ ಅವಿವೇಕಿ ಇಂಜನಿಯರ್ ಒಂದೇ ಸಾರಿ ತೆಗೆಸಿದ ಕಾರಣ, ಗೇರುಸೊಪ್ಪೆ ಹತ್ತಿರ

ಸುಮಾರು 22 ಅಡಿ ನೀರು ಒಂದೇ ಸಮ ನುಗ್ಗಿ ಬೆಳಗಿನ 3-4 ಗಂಟೆ ಸಮಯದಲ್ಲಿ ದೋಣಿಯಲ್ಲಿ ಬರುತ್ತಿದ್ದ ಮೂರು ನಾಲ್ಕು ಜನ ನದಿ ಪಾಲಾಗಿ ಸತ್ತುಹೋದರು. ಸಾವಿರಾರು ದನಕರುಗಳು ಕೊಚ್ಚಿಕೊಂಡು ಹೋಗಿ ಸಮುದ್ರಕ್ಕೆ ಹೋದವು. ಎಚ್ಚೆತ್ತ ಜನ ಜೀವಭಯದಿಂದ ಪಕ್ಕದ ಗುಡ್ಡಗಳ ಮೇಲೆ, ಎತ್ತರ ಜಾಗಗಳಿಗೆ ಹೋಗಿ ಜೀವ ಉಳಿಸಿಕೊಂಡರು. ಹೊನ್ನಾವರ ತಾಲ್ಲೂಕಿಗೆ ಸೇರಿದ ಶಾರದಾಂಬ ಹೈಸ್ಕೂಲು ಮತ್ತು ಕ್ರಿಶ್ಚಿಯನ್ ಬಾಂಧವರ ಒಂದು ಚರ್ಚ್ ಕೊಚ್ಚಿಕೊಂಡು ಹೋಯಿತು. ರಸ್ತೆಗಳು, ಮನೆಗಳು ಹಾಳಾಗಿ ಹೋದವು. ಆ ಸಂದರ್ಭದಲ್ಲಿ ಆ ಭಾಗದ ಜನರಿಗೆಲ್ಲಾ ದೋಣಿಗಳನ್ನು ಕೊಡಿಸಬೇಕು, ಪ್ರತಿಯೊಂದು ಪಂಚಾಯ್ತಿಗೂ 300 ದೋಣಿಗಳನ್ನು ಇಟ್ಟರೆ ಇಂಥ ಕಷ್ಟ ಕಾಲದಲ್ಲಿ ಆ ಜನರೇ ಅಲ್ಲಿನ ಜನರ ಜೀವನವನ್ನು ಉಳಿಸುತ್ತಾರೆ. ಈ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ನನ್ನ ಕಛೇರಿಯಲ್ಲಿಯೇ ತೀರ್ಮಾನ ಮಾಡಿದ್ದೆವು. ಸರ್ಕಾರದವರು ಸೈಟ್ ಕೊಡುತ್ತಾರೆ. ಆದರೆ, ಜನರ ಸ್ವಭಾವ ತಾವು ವಾಸ ಮಾಡುವ ಸ್ಥಳದಲ್ಲಿಯೇ ವಾಸ ಮಾಡುತ್ತಾರೆಂದು ಭಾವಿಸುತ್ತಾರೆ. ಅಂದು ಮನೆಗಳಿಗೆ ಪುಕ್ಕಟೆ ಮರಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೆವು. ಆಜ್ಞೆ ಹೊರಡುವ ಹೊತ್ತಿಗೆ ನಾನು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟು ಬರಬೇಕಾಯಿತು. ತೀರ್ಮಾನವಾಗಿದ್ದರೂ ಕೂಡ ಇನ್ನೂ ಅದನ್ನು ಜಾರಿಗೆ ಕೊಟ್ಟಿಲ್ಲ. ಹಿಂದಿನ ಸರ್ಕಾರ ತಪ್ಪು ಮಾಡಿದ್ದರೆ ತಪ್ಪೇ. ಅದು ಸರಿಯೆಂದು ನಾನು ಹೇಳುವುದಿಲ್ಲ. ಈಗಿನ ಸರ್ಕಾರದವರು ತತ್‌ಕ್ಷಣ ಇದರ ಕಡೆ ಗಮನಕೊಡಬೇಕು. ಕೊಟ್ಟಿರತಕ್ಕಂಥ ಸಾಲಗಳನ್ನು ತೀರಿಸುವುದಕ್ಕೆ ಸಾಧ್ಯವಿಲ್ಲ. ಅಲ್ಪ ಸ್ವಲ್ಪ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು, ಇಲ್ಲದೇ ಇದ್ದರೆ ಕ್ಲೋಸ್ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಇದು ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟ ಪ್ರಶ್ನೆಯಾದರೂ ಬರಗಾಲ ಪ್ರದೇಶಕ್ಕೂ ಅನ್ವಯವಾಗುತ್ತದೆ. ಭಾರಿ ಮಳೆ ಆದಾಗ ನೆರೆಹಾವಳಿ ಆಗುತ್ತೆ.

4 P.M ಆಗ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಅನೇಕ ಸೇತುವೆಗಳು ಆಗಬೇಕು. ಪ್ರಕೃತಿ ವಿಕೋಪದಿಂದ ಹಾಳಾದಂತಹ ಸ್ಥಳಗಳ ರಿಪೇರಿಯಾಗಬೇಕು. ಇದಕ್ಕೆ ಪೂರಕವಾಗಿ ಸರ್ಕಾರ ಜನರಿಗೆ 'ನಾವು ಇದ್ದೇವೆ. ನೀವಿಷ್ಟು ಮಾಡಿ, ನಾವಿಷ್ಟು ಮಾಡುತ್ತೇವೆ, ಎಂದು ಭರವಸೆಯಾಗಿ ನಿಂತರೆ ಜನರು ರೆಡಿಯಾಗಿದ್ದಾರೆ. ಇದಕ್ಕೆ ಅನುಗುಣವಾದ ತೀರ್ಮಾನವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳು ಇವೆ. ನಾನು ಮಾತನಾಡುವುದಕ್ಕೆ ಹೋಗಿಲ್ಲ. ಕೆಲವು ವಿಚಾರಗಳನ್ನು ಟಚ್ ಮಾಡಿದ್ದೇನೆ ಅಷ್ಟೆ. ಅಂಕಿಅಂಶಗಳನ್ನು ಕೊಟ್ಟು ಮಾತನಾಡುವುದಾದರೆ ಬೇಕಾದಷ್ಟು ವಿಷಯಗಳಿವೆ. ಆಯಾಯ ಇಲಾಖೆಗಳ ಬೇಡಿಕೆಗಳು ಬಂದಾಗ ನಾನು ಆ ಬಗ್ಗೆಯೆಲ್ಲಾ ಮಾತನಾಡುತ್ತೇನೆ. ಆಯಾಯ ಖರ್ಚಿನ ಬಾಬುಗಳು ಅತಿಯಾಗಿ ದಾರಿತಪ್ಪಿ ಹೋಗದಹಾಗೆ ನೋಡಿಕೊಳ್ಳಬೇಕೆಂದು ಶ್ರೀ ಲಕ್ಷ್ಮಿಸಾಗರ್‌ರವರು ಹಿಂದೆ ಹೇಳಿದ್ದರು. ಇವತ್ತು ಅವರು ಮಂತ್ರಿಯಾಗಿದ್ದಾರೆ. ನನಗಂತೂ ಅಪಾರವಾದ ಸಂತೋಷವಾಗಿದೆ. ನಿಮ್ಮನ್ನೆಲ್ಲಾ ನೋಡಿ ನನಗೆ ಬಹಳ ಸಂತೋಷವಾಗಿದೆ.

ಶ್ರೀ ಆರ್. ಎನ್. ಜಾಲಪ್ಪ.—ನಿಮ್ಮದು ಕರಡಿ ಪ್ರೀತಿ. ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾವಾಗ ಅದರಿಂದ ಕಚ್ಚಿಸಿಕೊಳ್ಳುತ್ತೀರೋ ಆಗ ನಿಮಗೆ ಅದರ ಅನುಭವವಾಗುತ್ತದೆ. ಅದರ ವ್ಯಾಖ್ಯಾನವನ್ನು ನೀವೇ ಮಾಡಬೇಕು. ನಿಮ್ಮನ್ನೆಲ್ಲ ನೋಡಿ ನನಗಂತೂ ತುಂಬಾ ಸಂತೋಷ. ಪರವಾಗಿಲ್ಲ, ಒಟ್ಟು ಮಂತ್ರಿಮಂಡಲವನ್ನು ಚೆನ್ನಾಗಿ ಸೆಟ್ ಮಾಡಿದ್ದಾರೆ. ಕೆಲವರು ಯುವಕರು ಇದ್ದಾರೆ.

ಶ್ರೀ ಬಾಪುಗೌಡ.—ನೀವೂ ಬಂದು ಕೂಡಿ. ಬಹಳ ಚೆನ್ನಾಗಿ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಬಾಪುಗೌಡರಿಗೆ ಮಂತ್ರಿ ಪದವಿ ಕೊಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಸ್ವಲ್ಪದರಲ್ಲಿ ಮಿಸ್ ಆಗಿದೆ. ಇನ್ನು ಕೆಲವರು ಮಂತ್ರಿಯಾಗುವವರಿದ್ದಾರೆ. ನಾನು ಮುಖ್ಯಮಂತ್ರಿಯವರಿಗೆ ಹೇಳುತ್ತಿದ್ದೇನೆ ಏನೆಂದರೆ ಬಾಪೂಗೌಡರ ಬಗ್ಗೆ ಸ್ವಲ್ಪ ಸ್ಪೆಶಲ್ ಗಮನ ಇರಲಿ.

ಒಬ್ಬ ಮಾನ್ಯ ಸದಸ್ಯರು.—ಮುಖ್ಯಮಂತ್ರಿಗಳ ಪಕ್ಕದ ಸೀಟು ಖಾಲಿ ಇದೆ. ತಾವು ಅಲಂಕರಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ಬಹಳ ಉಪಯುಕ್ತವಾದ ಸಲಹೆಯನ್ನು ಮಾನ್ಯ ಸ್ನೇಹಿತರು ಕೊಡುತ್ತಿದ್ದಾರೆ. ಆ ಕುರ್ಚಿ ನನಗೆ ಹೊಸದೇನೂ ಅಲ್ಲ. ಹಿಂದೆ ನಾನು ಅದೇ ಕುರ್ಚಿಯಲ್ಲಿ ಕುಳಿತುಕೊಂಡಿದ್ದವನು. ಆದ್ದರಿಂದ ಇವತ್ತು ಮಂತ್ರಿಯಾಗಿ ಅವರುಗಳು ಕೂತಿದ್ದಾರೆ. ಇನ್ನೂ ಮಂತ್ರಿಯಾಗುವವರು ಇಲ್ಲೇ ಲ್ಲೊ ಇದ್ದಾರೆ. ಮಾನ್ಯ ಅಧ್ಯಕ್ಷರೇ ನನಗೆ ಒಂದೇ ಒಂದು ಆಸೆ. ಪ್ರಜಾಪ್ರಭುತ್ವ, ಸಮಾಜವಾದ ಈ ಶಬ್ದಗಳು ಭಾಷಣದಲ್ಲಿ ಪದೇ ಪದೇ ಉಪಯೋಗ ಮಾಡತಕ್ಕಂಥ ಪದಗಳು. ಇದು ಜಾರಿಯಲ್ಲಿ ಬರಬೇಕು. ಈಗ ನೀವು ಬಂದಿದ್ದೀರಿ ಹೊಸದಾಗಿ, ಲಕ್ಷ್ಮೀಸಾಗರ್‌ರವರೇ ನೀವು ಅಲ್ಲಿ ಕುಳಿತುಕೊಳ್ಳುತ್ತೀರಂತ ನಿಮಗೇ ಗೊತ್ತಿರಲಿಲ್ಲ. ಈಗ ಅಲ್ಲಿ ಅಪರೂಪವಾಗಿ ಕೂತಿದ್ದೀರಿ. ಈ ಒಂದು ಘಟನೆ ಸ್ವಾತಂತ್ರ್ಯನಂತರ ಮಹಾ ಘಟನೆಯಾಗಿದೆ, ಬಹಳ ಅಪರೂಪವಾಗಿ ಸಿಕ್ಕಿದ ಸಂದರ್ಭ. ಇದು ಸದುಪಯೋಗ ಆಗಬೇಕು.

ಶ್ರೀ ಆರ್. ಎಸ್. ಜಾಲಪ್ಪ.—ಅಪರೂಪವಾಗಿ ಸಿಕ್ಕಿದೆ ಎಂದರೆ ಯಾವ ಅರ್ಥದಲ್ಲಿ ನಿಮ್ಮ ಅಭಿ

ಪ್ರಾಯ ? ನಿಮ್ಮ ಅಭಿಪ್ರಾಯ ಏನೆಂದು ಸ್ವಲ್ಪ ಹೇಳಿ. ಬಂಗಾರಪ್ಪನವರೇ ನೀವು ಯಾವ ರೀತಿಯ ಭಾವನೆಯನ್ನು ಇಟ್ಟುಕೊಂಡಿದ್ದೀರಿ, ಆ ರೀತಿಯ ಭಾವನೆ ಬದಲಾವಣೆಯಾಗಬಹುದು. ಅಲ್ಲಿ ಕೂತಿರುವ ತಾವು ಇಲ್ಲಿಗೆ ಬರಬಹುದು. ಆದರೆ ಇದನ್ನೆಲ್ಲಾ ತೀರ್ಮಾನ ಮಾಡುವುದು ಜನತೆ. ನಾವು ಇಲ್ಲಿ ಪರ್ಮನೆಂಟ್ ಆಗಿ ಹತ್ತು ವರ್ಷ ಕಾಲವೂ ಇರಬಹುದು. ಇದು ತಮಗೆ ಗೊತ್ತಿದೆ. ಅಪರೂಪವಾದುದೆಂದು ಹೇಳಿದಿರಿ. ಹಾಗೆ ಹೇಳುವ ಬದಲು ಒಂದು ಅವಕಾಶ ಸಿಕ್ಕಿದೆ, ಒಳ್ಳೆಯ ಕೆಲಸ ಮಾಡಿ ಎಂದು ಹೇಳಿದರೆ ತಮ್ಮ ಸಲಹೆಯನ್ನು ನಾವು ಸ್ವೀಕರಿಸುತ್ತೇವೆ,ತಾವು ಏನೆಲ್ಲಾ ಯೋಚನೆ ಮಾಡಿದಿರಿ, ಆದರೆ ಅದೆಲ್ಲಾ ವ್ಯತ್ಯಾಸಆಗಿದೆ.

ಶ್ರೀ ಎಸ್. ಬಂಗಾರಪ್ಪ.—ವ್ಯತ್ಯಾಸ ಆಗಿರುವುದೇ ತಮ್ಮ ಅನುಕೂಲಕ್ಕೆ. ಅದರ ಅರ್ಥ ತಮಗೆ ಈಗಾಗಲೇ ಆಗಿರಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಬರೇ ಶಬ್ದವನ್ನು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಬಿಡಿಸಿ ಹೇಳಿದರೆ ಅರ್ಥವಾಗುತ್ತದೆ. ನನ್ನ ಬ್ರೈನ್ ಟ್ಯೂಬ್‌ಲೈಟ್ ಇದ್ದಹಾಗೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಮಾತನ್ನು ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ ಸ್ವಾಮಿ. ಪ್ರತ್ಯೇಕವಾಗಿ ನೀವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಸುಮಾರಾಗಿ ಪ್ರಜಾಪ್ರಭುತ್ವ, ಸಮಾಜವಾದ ಎಂಬ ಪದಗಳು ಅವುಗಳು ಪ್ರಯೋಗವಾಗುವಾಗ. ಅವುಗಳನ್ನು ಜಾರಿ ಮಾಡತಕ್ಕಂಥ ವಿಚಾರದಲ್ಲಿ ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಅವರವರಿಗೆ ಬಿಟ್ಟಿರತಕ್ಕಂಥ ವಿಚಾರ. ಸುಮಾರಾಗಿ ಈ ನೀತಿ, ಬಂಡವಾಳಶಾಹಿ ನೀತಿ ರಿಯಾಕ್ಷನರಿ ಫೋರ್ಸ್ ಆಗಿ ಬೃಹದಾಕಾರವಾಗಿ ಬೆಳೆದಿದೆ. ಸಮಾಜದಲ್ಲಿ ಬಡವರ ಬಗ್ಗೆ ಕಳಕಳಿ ಇರತಕ್ಕಂಥವರ ತಲೆ ಇಷ್ಟು ಇದ್ದರೆ, ಹೊಟ್ಟೆ ಮಾತ್ರ ಇಷ್ಟುದ್ದ ಬೆಳೆದು ನಿಂತಿದೆ. ಆದ್ದರಿಂದ ಈಗ ಈ ತಲೆ ಬೆಳೆದು ಬೆಳೆದು ದಪ್ಪಗಾಗಿ ಹೊಟ್ಟೆ ಸಣ್ಣಗಾಗಬೇಕಾಗಿದೆ. ಇದಕ್ಕೆ ಯಾರು ಕಾರಣರು ಎಂಬ ಪ್ರಶ್ನೆ ಈಗ ಬೇಡ. ಇದು ಚರ್ಚೆಗೆ ಬಂದರೆ ಹಿಂದೆ ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿ ಇದ್ದರು, ನಾನು ಕೂಡ ಇದ್ದೆ. ಅವರು ಇರಲಿಲ್ಲವೇ, ನಾನು ಇರಲಿಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನೀವು ಒಂದು ಸಾರಿ ಬಜೆಟ್ ಮಂಡಿಸಿ ಭಾಷಣ ಮಾಡಿದಾಗ ಈ ನೀತಿಯನ್ನು ಇಟ್ಟುಕೊಂಡು ಅದನ್ನು ಅನುಸರಿಸತಕ್ಕ ದಾರಿಯಲ್ಲಿ ಈ ಬಂಡವಾಳಶಾಹಿಯ ಹೊಟ್ಟೆ ಏನು ಬೆಳೆದಿದೆಯಲ್ಲ, ಅದನ್ನು ಕುಗ್ಗಿಸುವುದಕ್ಕೆ ತೆಗೆದುಕೊಳ್ಳುವ ಕೆಲಸಕಾರ್ಯಗಳಲ್ಲಿ ಬಹಳ ನೈಪುಣ್ಯತೆಯಿಂದ ವ್ಯವಹಾರ ಮಾಡಬೇಕು. ಈ ವಿಚಾರವನ್ನು ಗೌಣ ಎಂಬ ದೃಷ್ಟಿಯಿಂದ ನೀವು ಕಾಣಬಹುದು. ಆದರೆ ಇದು ನನ್ನ ಸಲಹೆ ಎಂದಷ್ಟೇ ಹೇಳಿ ಮಾನ್ಯ ಅಧ್ಯಕ್ಷರೇ, ತಮಗೆ ವಂದಿಸಿ ಈ ಬೇಡಿಕೆಯ ಬಗ್ಗೆ ನನ್ನ ಮಾತನ್ನು ಮುಗಿಸುತ್ತೇನೆ.

\+ ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, 1982-83ರ ಪೂರಕ ಬೇಡಿಕೆಯ ಬಗ್ಗೆ ಎಲ್ಲಾ ವಿಷಯಗಳನ್ನು ಸಹ ಹೇಳುವುದಕ್ಕೆ ಅವಕಾಶ ಇಲ್ಲದಿದ್ದರೂ ಕೆಲವು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಮಾತನ್ನು ಹೇಳುವುದಕ್ಕೆ ಮುಂಚೆ ಮೊದಲು ಒಂದು ಮಾತನ್ನು ಹೇಳಬೇಕಾಗಿದೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ 'ತಾವು ನಮ್ಮ ಸಹಕಾರ ಸಹಾಯ ಕೇಳಿದಿರಿ, ಆದರೆ ವಿರೋಧಪಕ್ಷವನ್ನು ಕಡೆಗಣಿಸಬೇಡಿ, ತುಚ್ಛೀಕರಿಸಬೇಡಿ' ಎಂದು ಹೇಳಿದರು. ಅದನ್ನು ಅವರು ಒಳ್ಳೆಯ ಅಭಿಪ್ರಾಯದಿಂದ ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ವಿರೋಧಪಕ್ಷ ಅಂದರೆ ಅದರಲ್ಲಿ ಅನೇಕ ಪಕ್ಷಗಳಿವೆ. ಆ ಪಕ್ಷಗಳೆಲ್ಲವನ್ನೂ ಸೇರಿ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯಮಂತ್ರಿಗಳು ಮಾತನಾಡುತ್ತಾ ವಿರೋಧವಲ್ಲದಿರುವ ಮಿತ್ರಪಕ್ಷಗಳೆಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಮಿತ್ರಪಕ್ಷಗಳೆಂದು ಕರೆದಿದ್ದರೂ ಕೂಡ ನಮ್ಮನ್ನೂ ಕೂಡ ಕಡೆಗಣಿಸಿದಹಾಗೆ ವಿಷಯ ಚರ್ಚೆ ಮಾಡುವ ಪ್ರಶ್ನೆ ಬಂದಾಗ, ನಮ್ಮನ್ನು ಉಪೇಕ್ಷಿಸದ ಮನೋಭಾವವನ್ನು ಸರ್ಕಾರ ತೋರಿಸಬೇಕೆಂದು ನಾನು ಕಳಕಳಿಯಿಂದ ಒತ್ತಾಯ ಮಾಡಿ ಹೇಳಬೇಕಾಗಿದೆ. ಈ ಮನೋಭಾವ ಪೂರ್ತಿಯಾಗಿ ಇಲ್ಲವೇ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಮಂತ್ರಿಮಂಡಲದಲ್ಲಿ ಸಲಹಾ ಸಮಿತಿ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಇವುಗಳು ಯಾವ ರೀತಿಯಲ್ಲಿ ನಡೆಯುತ್ತವೆ ಎಂಬುದು ತಮಗೆ ಗೊತ್ತಿದೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೂ ಹೆಚ್ಚು ಆಳವಾಗಿ ಚರ್ಚೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳತಕ್ಕಂತಹವರನ್ನು ವಿರೋಧಪಕ್ಷದವರನ್ನೂ ಸೇರಿಸಿ ಇದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗಬಹುದು. ಈ ರೀತಿಯ ಸಲಹಾ ಸಮಿತಿಯನ್ನು ಮಾಡಿದರೆ ತೊಂದರೆ ಏನೂ ಇಲ್ಲ ಎಂದು ಹೇಳುತ್ತೇನೆ.

ಬೇಡಿಕೆಗಳ ಬಗ್ಗೆ ಮೊದಲನೆಯದಾಗಿ ಬಹಳ ಮುಖ್ಯವಾದ ಪ್ರಶ್ನೆ ನಮ್ಮ ಮುಂದೆ ಬಂದಿದೆ. 2ನೇ ಡಿಮ್ಯಾಂಡಿನ ಐಟಂ ನಂ.3ರಲ್ಲಿ ಏನು ಹೇಳಿದ್ದಾರೆಂದರೆ ಕೇಂದ್ರ ಸರ್ಕಾರದವರು 125.60ಲಕ್ಷ ಹಣವನ್ನು 1979-80, 1980-81 ಹಾಗೂ 1981-82 ಸಾಲಿಗಾಗಿ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ ಇವರ ಅಭಿವೃದ್ಧಿಗಾಗಿ ಕೊಟ್ಟಿದ್ದಾರೆ. I refer Demand No.2 of the Supplementary Estimates 1982-83

\+ ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

"Government of India have permitted utilisation of unspent Special Central Assistance of Rs. 125.50 lakhs received during the year 1979-80 and 1980-81 as Special Central Assistance for Special Compo ent Plan for Scheduled Castes on the following Schemes during 1982-83 Irrigation Wells 60 60 lakhs, Supply of Bu locks and Carts-10.00 lakhs, Animal Husbanpry 10.00 lakhs, Industry 10.00 lakhs, Agriculture Colonies-20.00 lakhs, Horticulture-20.00 lakhs, Welfare of Scheduled Castes destitute and poor women (Department of Women and Childrens' Welfare) 5 00 lakhs Total 125.6 lakhs.

ಈ ಪ್ರಶ್ನೆಯನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರ ಪ್ರಕಾರ ಕೇಂದ್ರ ಸರ್ಕಾರದವರು ಇವತ್ತಿನ ದಿವಸ ನಮಗೆ ಈ ಒಂದು ಅವಕಾಶವನ್ನು ಕೊಟ್ಟಿದ್ದರೂ ಹಿಂದಿನ ಸರ್ಕಾರದವರು ಅದನ್ನು ಉಪಯೋಗಿಸಿಕೊಳ್ಳಲಿಲ್ಲ. ನೀವಾದರೂ ಅದನ್ನು ಉಪಯೋಗಿಸಿ ಎಂದು ಹೇಳುತ್ತಿದ್ದೇನೆ. ಹರಿಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನು ಹಿಂದೆ ಇದ್ದಂತಹ ಸರ್ಕಾರ ಉಪಯೋಗ ಮಾಡಿಕೊಂಡಿಲ್ಲ ಎನ್ನುವಂತಹ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ. ಹಿಂದಿನವರು ಇದನ್ನು ಉಪಯೋಗ ಮಾಡಿಕೊಂಡಿಲ್ಲದಿದ್ದರೂ ಇನ್ನು ಮುಂದಾದರೂ ಉಪಯೋಗ ಮಾಡಿಕೊಳ್ಳಿ. 1982-83ನೇ ಸಾಲಿನ ಸಪ್ಲಿಮೆಟಂರಿ ಡಿಮ್ಯಾಂಡಿಗೆ ಒಪ್ಪಿಗೆಯನ್ನು ಕೇಳುವಾಗ ಹಿಂದಿನ ಸರ್ಕಾರ ಉಪಯೋಗ ಮಾಡಿಕೊಳ್ಳದಿದ್ದರೂ ಈಗಿನ ಸರ್ಕಾರ ಉಪಯೋಗ ಮಾಡಿಕೊಳ್ಳಿ ಎಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಅದರ ಬಗ್ಗೆ ಸ್ಪಷ್ಟೀಕರಣ ಬೇಕೆಂದು ಹೇಳುತ್ತಿದ್ದೇನೆ. ಹಿಂದಿನ ಸರ್ಕಾರ ಏಕೆ ಉಪಯೋಗ ಮಾಡಿಕೊಳ್ಳಲಿಲ್ಲ ? ಹರಿಜನ-ಗಿರಿಜನರ ಬಗ್ಗೆ ಅಷ್ಟೊಂದು ಕಳಕಳಿ ಇರುವವರು ಸುಮ್ಮನೇಕಿದ್ದರು.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಮಾನ್ಯ ಮೊಯ್ಲಿಯವರನ್ನು ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಐಟಂ ನಂ.3ರಲ್ಲಿ ಏನೊಂದು ಪ್ರಶ್ನೆ ಬರುತ್ತದೆಂದರೆ, ಹರಿಜನರ ಅಭಿವೃದ್ಧಿಗಾಗಿ ಕೊಟ್ಟಂತಹ 125.60 ಲಕ್ಷ ರೂಪಾಯಿ ಹಣವನ್ನು ಅವರು ಉಪಯೋಗ ಮಾಡಿಕೊಳ್ಳಲಿಲ್ಲ. 1979-80ರಲ್ಲಿ ಕೊಟ್ಟಂತಹ ಹಣವನ್ನು 80-81,81-82 ಕಳೆದರೂ ಖರ್ಚು ಮಾಡಲಿಲ್ಲ. ಏಕೆ ಖರ್ಚು ಮಾಡಲಿಲ್ಲ ? ಯಾವ ಆಧಾರದ ಮೇಲೆ ಖರ್ಚು ಮಾಡಲಿಲ್ಲ ಎಂಬ ವಿವರಣೆಯನ್ನು ನಾನು ಅವರಿಂದ ಕೇಳಬೇಕಾಗಿದೆ. ಹೇಳುವುದು ಒಂದು ಮಾತು ಆದರೆ, ಆಚರಣೆಗೆ ತರುವುದು ಮತ್ತೊಂದು ರೀತಿಯದು ಎಂಬುದಾಗಿ ಇದರಿಂದ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅದರಲ್ಲೂ ಹರಿಜನ-ಗಿರಿಜನರ ಅಭಿವೃದ್ಧಿಯ ಬಗ್ಗೆ ಅನುಕೂಲಗಳನ್ನು ಕಲ್ಪಿಸುವುದಕ್ಕಾಗಿ ಕೊಟ್ಟಂತಹ ಹಣ ಅದು. ಇವರು ಹೇಳಿಕೊಳ್ಳುವುದು ಒಂದಾದರೆ, ಮಾಡುವುದು ಮತ್ತೊಂದು ಎಂದು ಇದರಲ್ಲಿ ಬಹಳ ಸ್ಪಷ್ಟವಾಗಿದೆ. ಹರಿಜನರಿಗಾಗಿ ಕೊಟ್ಟಂಥ ಹಣವನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಬಹಳ ಹಿಂದೆ ಬಿದ್ದಿದ್ದಾರೆಂದು ಬಹಳ ಸ್ಪಷ್ಟವಾಗಿ ಇದರಲ್ಲಿ ಗೊತ್ತಾಗುತ್ತದೆ. ಇನ್ನೊಂದು ವಿಷಯ ಹೇಳಬೇಕೆಂದರೆ, ಕರ್ನಾಟಕ ಕ್ಯಾಷ್ಯೂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ 2,70,000 ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಕರ್ನಾಟಕ ಕ್ಯಾಷ್ಯು ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ನನಗಿಂತ ಮಾನ್ಯ ಮೊಯ್ಲಿಯವರಿಗೆ ಚೆನ್ನಾಗಿ ಗೊತ್ತಿರಬಹುದು. ಕ್ಯಾಷ್ಯು ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುವುದು ಅತಿಮುಖ್ಯ. ಇದು ಉತ್ತರ ಕನ್ನಡ ಜಿಲ್ಲೆಯ ಸ್ವಲ್ಪ ಭಾಗಕ್ಕೆ ಅನುಕೂಲವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗೆ ಇದು ಬಹಳ ಮುಖ್ಯ. ಇದೇ ರೀತಿಯ ಕ್ಯಾಷ್ಯು ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ್ನು ಕೇರಳಾದಲ್ಲಿ ಮಾಡಿದ್ದಾರೆ. ಅದಕ್ಕೆ ಅವರು ಹೇರಳವಾದ ಹಣವನ್ನೂ ಖರ್ಚು ಮಾಡಿದ್ದಾರೆ. ಅವರು ಯಾವ ರೀತಿಯ ಅನುಕೂಲವನ್ನು ಕಲ್ಪಿಸಿ ಕೊಟ್ಟಿದ್ದಾರೆಂಬುದನ್ನು ನೋಡಬೇಕು. ಇದರಿಂದ ವಿದೇಶಿ ವಿನಿಮಯ ಬರುತ್ತದೆ. ಆದ್ದರಿಂದ ಇವಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುವುದರಲ್ಲಿ ತೊಂದರೆ ಏನೂ ಇಲ್ಲ. ಆದರೆ ಸರಿಯಾಗಿ ಕೆಲಸ ಮಾಡುತ್ತಿದೆಯೇ ಯೋಜನೆಗಳು ಬಹಳಷ್ಟು ಇವೆಯೇ ಎಂಬುದರ ಬಗ್ಗೆ ಗಮನ ಕೊಡಬೇಕು.

ಡಿಮ್ಯಾಂಡ್ ನಂ.1ರಲ್ಲಿ ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ. ಐ ಆರ್ ಡಿ ಎ ಯೋಜನೆಗಾಗಿ ವಿಶ್ವಬ್ಯಾಂಕಿನಿಂದ ಸಾಲವನ್ನು ಪಡೆದು ಮಾಡಿದ ಅಗ್ರಿಕಲ್ಚರ್ ಎಕ್ಸಟೆನ್‌ಷನ್ ಪ್ರಾಜೆಕ್ಟುಗಳು ಹಲವಾರು ಇವೆ. ನೀವು ಎಕನಾಮಿಕ್ ಸರ್ವೇ ಏನು ಕೊಟ್ಟಿದ್ದೀರಿ ಇದರಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದೆ. ಎಕನಾಮಿಕ್ ಸರ್ವೇಯಲ್ಲಿ ಈ ರೀತಿ ಹೇಳಿದ್ದಾರೆ :

There are 16 Schemes namely, Karnataka Irrigation Project, Karnataka Dairy Development Project, Agriculture Extension Project, National Seeds Project, Karnataka Sericuture Project, Multi-state Cashew Development Project, Tank Irrigation Project, Inte-

grated Development of Uttara Kannada, Rural Development Study and Six minor irrigation works in South Kanara District, Frozen Semen Bank, Training course, Government Tool room and Training Centre, Drinking water Supply for Janata Housing Schemes, Tadri Community Development Fisheries Project, Dutch Assisted Project for construction of Industrial Estates UNICEF and BIRD project ನಾವು ಅವುಗಳೆಲ್ಲವನ್ನೂ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಮೂಲಭೂತವಾಗಿ ಇರತಕ್ಕ ಪ್ರಶ್ನೆ ಏನೆಂದರೆ, 16 ಯೋಜನೆಗಳು ಅದರಲ್ಲಿ ಅಡಕವಾಗಿವೆ.

ಅವುಗಳಲ್ಲಿ ಕರ್ನಾಟಕ ಇರಿಗೇಷನ್ ಪ್ರಾಜೆಕ್ಟ್ಸ್, ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಯೋಜನೆಗಳು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಯೋಜನೆಗಳು ವಿಶ್ವಬ್ಯಾಂಕಿನ ಸಹಾಯದಿಂದ ಬಂದಿರತಕ್ಕಂತಹ ಯೋಜನೆಗಳು, ಆದರೆ ಈ ವಿಶ್ವಬ್ಯಾಂಕಿನ ಯೋಜನೆಗಳ ಬಗ್ಗೆ ಯೋಚನೆ ಮಾಡುವಂತಹ ಕಾಲ ಬಂದಿದೆ ಎಂದು ಹೇಳುತ್ತೇನೆ. ಅನೇಕ ರಾಜ್ಯಗಳೂ ಇಂತಹ ಯೋಜನೆಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ಯೋಚನೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಂತಹ ಸಮಯದಲ್ಲಿ ತೆಗೆದುಕೊಂಡಿದ್ದಂತಹ ಈ ವಿಶ್ವಬ್ಯಾಂಕಿನ ಸಹಾಯದ ಬಗ್ಗೆ ಸ್ವಲ್ಪ ಹುಷಾರಾಗಿರಬೇಕಾಗುತ್ತದೆ. ವಿಶ್ವಬ್ಯಾಂಕಿನವರು ಸಾಲವನ್ನು ಕೊಡುವಾಗ ಕೆಲವು ನಿಬಂಧನೆಗಳನ್ನು ಹಾಕಿದ್ದಾರೆ. ನಮ್ಮ ದೇಶ ಅಷ್ಟೇ ಅಲ್ಲ ಬೇರೆ ಯಾರನ್ನಾದರೂ ತೆಗೆದುಕೊಳ್ಳಿ ಯಾರೂ ಈ ಬ್ಯಾಂಕಿನ ಸಹಾಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಸಾಲದ ಹೊರೆಯನ್ನು ನಾವು ಹೊತ್ತುಕೊಳ್ಳಬೇಕಾಗಿದೆ. ಸಾಲದ ಹೊರೆ ನಮ್ಮ ತಲೆಯ ಮೇಲೆ ಇರುತ್ತದೆ. ಅಮೆರಿಕನ್‌ರವರ ಕೈವಾಡ ಇರತಕ್ಕಂತಹ ಬ್ಯಾಂಕು ಇದು. ಇದರ ಸಹಾಯದಿಂದ ಯಾರೂ ಮುಂದುವರಿಯುವುದಕ್ಕಾಗುವುದಿಲ್ಲ ಎಂಬುದಾಗಿ ತಜ್ಞರೇ ಹೇಳಿದ್ದಾರೆ. ತಜ್ಞರು ಆ ರೀತಿ ಹೇಳಿರಬೇಕಾದರೆ, ಹೊಸ ರೀತಿಯಲ್ಲಿ ಯೋಚನೆ ಮಾಡುವಂತಹ ಜನ ನಾವು ಅಂತ ಹೇಳಿಕೊಳ್ಳುವ ನೀವು ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದರಿಂದ ನಮ್ಮ ಅಭಿವೃದ್ಧಿಗೆ ಧಕ್ಕೆ ಬರುತ್ತದೆ. ಸ್ವಾಯತ್ತತೆಗೆ ಧಕ್ಕೆ ಬರುತ್ತದೆ. ಇದು ಬಹಳ ಮುಖ್ಯವಾದ ವಿಚಾರ. ತೆಗೆದುಕೊಂಡಿರುವಂತಹ ಸಾಲ, ಅದಕ್ಕೆ ಬಡ್ಡಿ, ಇವೆಲ್ಲದರ ಯೋಚನೆ ಮಾಡುವಂತಹ ಕಾಲ ಬಂದಿದೆ. ಇದರ ಬಗ್ಗೆ ಬೇರೆ ರೀತಿಯಲ್ಲೂ ಗಮನಿಸಬೇಕು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ವಿಶ್ವ ಬ್ಯಾಂಕಿನ ಸಹಾಯವನ್ನು ತೆಗೆದುಕೊಳ್ಳಬಾರದು ಎಂಬುದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಂ. ಎಸ್. ಕೃಷ್ಣನ್.—ವಿಶ್ವಬ್ಯಾಂಕಿನವರು ಹಾಕಿರತಕ್ಕಂತಹ ಕೆಲವು ನಿಬಂಧನೆಗಳು ಏನಿವೆ ಅವುಗಳ ಬಗ್ಗೆ ಯೋಚನೆ ಮಾಡಬೇಕಾಗಿದೆ. ನಮ್ಮ ರಾಜ್ಯದ ಕಾರ್ಯಕ್ಕೆ ಧಕ್ಕೆ ಬರದ ರೀತಿಯಲ್ಲಿ ಯಾರೇ ಕೊಟ್ಟರೂ ತೆಗೆದುಕೊಳ್ಳಬಹುದು. ಇದರ ಬಗ್ಗೆ ಯೋಚನೆ ಮಾಡಬೇಕೆಂದು ತಜ್ಞರೇ ಹೇಳಿದ್ದಾರೆ.

ಐ ಎಂ. ಎಫ್ ಸಾಲದ ಬಗ್ಗೆ ಶ್ರೀರಾಮ್‌ರವರು ಹಿಂದೂ ಪತ್ರಿಕೆಯಲ್ಲಿ ಬಹಳ ಚೆನ್ನಾಗಿ ಬರೆದಿದ್ದಾರೆ. ಅದರ ಬಗ್ಗೆ ಅವರ ಅಭಿಪ್ರಾಯವನ್ನು ಎಕ್ಸ್‌ಪೋಸ್ ಮಾಡಿದ್ದಾರೆ. ಇದರ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಿ ನೀವೇನು ಈಗ ಥಿಂಕ್ ಟ್ಯಾಂಕ್ ಅಥವಾ ಚಿಂತನಾ ಚಿಲುಮೆ ಎಂಬುದಾಗಿ ಏನು ಮಾಡಿದ್ದೀರಿ ಅವರಿಗೆ ಈ ಕೆಲಸವನ್ನು ಹಚ್ಚಿ ಅವರು ಈ ಬಗ್ಗೆ ಯೋಚನೆ ಮಾಡಲಿ ಎಂಬ ಸಲಹೆಯನ್ನು ಮಾಡುತ್ತೇನೆ.

ಇನ್ನು ಕೈಗಾರಿಕೆಗಳ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಡಿಮ್ಯಾಂಡ್ ನಂಬರ್ 5ರಲ್ಲಿ ಹೇಳಿರುವ ಇದು ಮೂಲಭೂತವಾದ ನೀತಿಯ ಪ್ರಶ್ನೆ ಹಾಗೇನೆ 2-3-9ರ ಐಟಂನ್ನು ತೆಗೆದುಕೊಂಡರೆ 'The Companies viz., Mysore Kirlosker Ltd,, Harihar, The Tata Engineering Locomotive Co.,Ltd., Bombay and Tata Iron and Steel Company Ltd.. Bombay have allotted bonus shares to Government which is a share holder in these companies ''

| Name of the company | No. of shares | Value of each share | Ratio | Total Value |
|---|---|---|---|---|
| 1 Mysore Kirloskar Ltd; Harihar | 21333 | 10 | 2:3 | 213330 |
| 2. Tata Engineering and Locomotive Co., Ltd., Bombay | 7046 | 100 | 2:5 | 704600 |
| 3. Tata Iron and Steel Co., Ltd , Bombay. | 1182 | 100 | 2:5 | 118200 |

ಅಂತ ಹೇಳಿದ್ದಾರೆ. ಪ್ರಶ್ನೆ ಏನು ಅಂದರೆ ಷೇರ್‌ಗಳನ್ನು ನೀವು ಕೊಂಡುಕೊಳ್ಳಿ. ಆದರೆ ತಾವು ಏನು

ಈ ಮೂರು ಕಂಪೆನಿಗಳಲ್ಲಿ ಷೇರುಗಳನ್ನು ತೊಡಗಿಸಿದ್ದೀರಿ ಆ ಕಂಪೆನಿಗಳು ಯಾರದ್ದು ಎಂಬುದು ಎಲ್ಲರಿಗೂ ತಿಳಿದಿದೆ. ರಾಷ್ಟ್ರದ ಬಂಡವಾಳ ಶಾಹಿಗಳೇ ಪ್ರಾರಂಭ ಮಾಡಿರತಕ್ಕಂಥ ಕಂಪನಿಗಳು ಇವು. ಮೊದಲನೆಯದು ಎರಡು ಕಂಪನಿಗಳು ಟಾಟಾ-ಬಿರ್ಲಾ ಕಂಪನಿಗೆ ಸೇರಿದ್ದವು. ಮತ್ತೊಂದು ಕಿರ್ಲೋಸ್ಕರ್ ಕಂಪನಿಗೆ ಸೇರಿದೆ. ಇವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೋಸ್ಕರ ನೀವು ಷೇರುಗಳನ್ನು ತೆಗೆದುಕೊಂಡಿದ್ದೇವೆ ಅಂತ ಹೇಳುವುದಾದರೆ ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈ ಮೂರು ಕಂಪನಿಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಹತೋಟಿ ಅಂದರೆ ಅವರ ರೆಕಾರ್ಡುಗಳನ್ನು ನೋಡಬೇಕು. ಇದು ಸಾಧ್ಯವಿಲ್ಲವೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇವುಗಳು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬಂದರೂ ಕೂಡ ಅಷ್ಟು ದೂರದವರೆಗೆ ಹೋಗುವುದಕ್ಕಾಗುವುದಿಲ್ಲ. ಇದು ಸರಿ ಹೋಗುವುದಿಲ್ಲ. ತಾವು ಬೇರೆಯವರು ಲಾಭ ಮಾಡಿಕೊಳ್ಳುವುದಕ್ಕೆ ಪಾಲುದಾರರು ಎಂದು ಹೇಳುವುದಕ್ಕೆ ಅವಕಾಶವಾಗುತ್ತದೆ. ಮತ್ತೆ ಕಂಟ್ರೋಲ್ ಪ್ರಶ್ನೆ ಬರುವುದಿಲ್ಲ, ಏಕೆಂದರೆ ನಿಮ್ಮ ಷೇರುಗಳು ಎಷ್ಟು ಇವೆ, ಮತ್ತು ಆ ಷೇರ್ ವ್ಯಾಲ್ಯು ಎಷ್ಟು ಇವೆ ಎಂದರೆ,

Mysore Kirlosker Ltd , Harihar-2 3330, Tata Engineering and Locomotive Co., Ltd., Bombay-70460 , Tata Iron and Steel Co., Ltd., Bombay-118200,

ಇದು ಒಂದು ಮೂಲಭೂತವಾದ ಪ್ರಶ್ನೆ ಎಂದು ನನಗೆ ಅನಿಸುತ್ತದೆ. ನಾವು ಈ ಪಬ್ಲಿಕ್ ಸೆಕ್ಟಾರ್‌ಗೆ ಏತಕ್ಕೆ ಷೇರ್ ಕೊಡಬೇಕು ? ಈ ಪಬ್ಲಿಕ್ ಸೆಕ್ಟಾರ್ಸ್‌ಗೆ ನಾವು ಷೇರ್ ಹಾಕುವ ಔಚಿತ್ಯವೇನು ? ಸರ್ಕಾರದವರು ಈ ಜಾಯಿಂಟ್ ಸೆಕ್ಟಾರ್ಸ್ ವೆಂಚರ್‌ನಲ್ಲಿ 51 ಪರ್ಸೆಂಟ್ ಇಟ್ಟಿರಬೇಕು, ಅದೇರೀತಿಯಾಗಿ ಅವರದ್ದು 49 ಪರ್ಸೆಂಟ್ ಇರಬೇಕು ಎಂದು ಏನು ಇದೆ ಇದರ ಉದ್ದೇಶ ಏನೆಂದರೆ ಇದು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂಬುದು. ಹಾಗೆ ಮಾಡದೇ ಬರೇ ಷೇರು ಹಾಕಿದರೆ ಅದು ಪ್ರಯೋಜನ ಇಲ್ಲ. ಮಾನ್ಯ ಗಂಗಾಧರನ್‌ರವರು ಮೈಸೂರು ಅಸಿಟೇಟ್ ಮತ್ತು ಮೈಸೂರು ಷುಗರ್ ಕಂಪನಿ ವಿಚಾರವಾಗಿ ಮತ್ತಿತರ ಸಾರ್ವಜನಿಕ ಕೈಗಾರಿಕೆಗಳು ಏನು ಇದೆ ಇವೆಲ್ಲದರ ಬಗ್ಗೆ ಹೊಸ ದೃಷ್ಟಿಕೋನವನ್ನು ತಾಳಬೇಕು ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಮುಕ್ಕಾಲು ಭಾಗ ಅಂದರೆ 24 ಸಾರ್ವಜನಿಕ ಉದ್ದಿಮೆಗಳು ಏನು ಇವೆ ಇವೆಲ್ಲಾ ನಷ್ಟದಲ್ಲಿ ನಡೆಯುತ್ತಾ ಇದೆ ಎಂದು ಒಂದು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದೀರಿ. ಎಷ್ಟು ವರ್ಷದಿಂದ ಇವು ನಷ್ಟದಲ್ಲಿ ನಡೆಯುತ್ತಾ ಇದೆ ಗೊತ್ತೆ ? ನನಗೆ ಗೊತ್ತಾದ ಹಾಗೆನಾನು 1967ನೇ ಇಸವಿಯಲ್ಲಿ ಅಸೆಂಬ್ಲಿಯಲ್ಲಿ ಇದ್ದಾಗಿನಿಂದಲೂ ಕೂಡ ಈ ರೀತಿಯಾಗಿ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿ ನಡೆದುಕೊಂಡು ಬರುತ್ತಾ ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ನಷ್ಟದಲ್ಲಿ ನಡೆಯದೇ ಇರುವ ಹಾಗೆ ಮಾಡುವುದಕ್ಕಾಗುವುದಿಲ್ಲ. ಇದರಿಂದ ಇದು ಸರ್ಕಾರದ ಹತೋಟಿಯಲ್ಲಿ ಇಲ್ಲ, ಇದರಲ್ಲಿ ಇನ್‌ಎಫಿಷಿಯೆನ್ಸ್ ಇದೆ ಅನ್ನುವುದು ತೋರಿಸುವುದಿಲ್ಲವೇ ? ಇದು ಅಬ್ಸಲ್ಯೂಟ್ಲಿ ಕರಪ್ಟ್ ಅಂಡ್ ಬ್ಯೂರೋಕ್ರಾಟಿಕ್ ಅಂತ ಹೇಳಬೇಕಾಗುತ್ತದೆ. ಹಿಂದೆ ನಾನು ಪಿ. ಯು. ಸಿ. ನಲ್ಲಿ 11 ವರ್ಷ ಸದಸ್ಯನಾಗಿದ್ದೆ. ಈ ಕೈಗಾರಿಕೆಗಳಲ್ಲಿ ಏನೇನು ದುರ್ವ್ಯವಹಾರ ನಡೆದಿದೆ, ಭ್ರಷ್ಟಾಚಾರ ನಡೆದಿದೆ ಇದರಲ್ಲಿ ಅಧಿಕಾರಿಗಳ ಮನೋಭಾವನೆ, ಇವೆಲ್ಲದರ ಬಗ್ಗೆ ಒಂದು ವರದಿ ಕೊಟ್ಟಿದ್ದೇನೆ. ಅದು ಎಲ್ಲೋ ದೂಳು ಹಿಡಿದುಕೊಂಡು ಕೂತಿದೆ ಅಂತ ಕಾಣುತ್ತದೆ. ಆದರೆ ಶ್ರೀಮಾನ್ ಪ್ರಕಾಶ್‌ರವರು ಒಬ್ಬರು ಮಾತ್ರ ಆ ವರದಿಯನ್ನು ಓದಿದ್ದಾರೆ ಎಂದು ಕೇಳಿ ನನಗೆ ಬಹಳ ಸಂತೋಷವಾಯಿತು. ಹಾಗೆ ಓದಿ ತಿಳಿದುಕೊಂಡರೆ ನಾವು ಯಾವ ತರಹದಲ್ಲಿ ಮುಂದೆ ಹೋಗಬೇಕು ಅನ್ನುವುದು ಗೊತ್ತಾಗುತ್ತದೆ. ಸ್ವಾಮಿ, ಇದೇ ತರಹ ಎಷ್ಟೋ ಕಮಿಟಿಗಳ ರಿಪೋರ್ಟ್ ಸರ್ಕಾರದಲ್ಲಿದೆ. ಆದರೆ ಅದನ್ನು ಕಾರ್ಯಗತ ಮಾಡದೇ ಹೋದರೆ ಏನು ಪ್ರಯೋಜನ ? ಇದನ್ನು ಕೂಲಂಕುಷವಾಗಿ ವಿಮರ್ಶೆ ಮಾಡಿ ಸಮಗ್ರವಾದ ರೀತಿಯಲ್ಲಿ ಪರಿಶೀಲಿಸಬೇಕು. ರಾಜ್ಯ ಸರ್ಕಾರದವರು ನಡೆಸತಕ್ಕಂಥ ಕೈಗಾರಿಕೆಗಳಲ್ಲಿ ಏನು ನಷ್ಟವಾಗುತ್ತಾ ಇದೆ, ಅದರ ಬಗ್ಗೆ ಕಮಿಟಿಯವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಆಳವಾಗಿ ಅಭ್ಯಾಸ ಮಾಡಿ ಸರ್ಕಾರದವರು ಕಾರ್ಯಗತ ಮಾಡಬೇಕು. ಇದುವರೆಗೆ ಆ ರೀತಿ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಪಬ್ಲಿಕ್ ಸೆಕ್ಟಾರ್ಸ್‌ನಲ್ಲಿ ಏನು ಕೈಗಾರಿಕೆಗಳು ಇವೆ ಅಲ್ಲಿ ಅವರವರೇ ಸೇರಿಕೊಂಡು ನಡೆಸುತ್ತಾ ಇದ್ದುದರಿಂದ ಈ ರೀತಿ ನಷ್ಟ ಅನುಭವಿಸುತ್ತಾ ಇತ್ತು. ಈ ಒಂದು ಪ್ರವೃತ್ತಿಯನ್ನು ಹಿಂದಿನಿಂದಲೂ ಬೆಳೆಸಿಕೊಂಡು ಬರುತ್ತಾ ಇದ್ದರು ನಾವು ಬಂದಮೇಲೆ ಈ ಒಂದು ಪ್ರವೃತ್ತಿಯನ್ನು ನಿಲ್ಲಿಸಬೇಕು ಎಂದು ಇದನ್ನು ಇನ್‌ವೆಸ್ಟಿಗೇಟ್ ಮಾಡಿದೆವು. ಹಾಗೆ ಮಾಡಿದಾಗ ನಮಗೆ ಗೊತ್ತಾದ್ದು ಆ ಸ್ಟೇಟ್ ಸೆಕ್ಟಾರ್ಸ್‌ಗೆ ಇನ ವೆಸ್ಟ್ ಮಾಡಿದಂಥಾ ಹಣಕ್ಕೆ ಏನು ಲಾಭ ಬರುತ್ತಿತ್ತೋ ಅದನ್ನು ಅವರೇ ಉಪಯೋಗಿಸಿಕೊಳ್ಳುತ್ತಿದ್ದರೇ ವಿನಹ ಅದು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರಲಿಲ್ಲ. ಇದರ ಬಗ್ಗೆ ಹಿಂದಿನ ಸರ್ಕಾರಕ್ಕೆ ನಾವು ಒತ್ತಾಯ ತಂದಮೇಲೆ ಸರ್ಕಾರದವರು ಅದನ್ನು ಗಣನೆಗೆ ತಗೆದುಕೊಂಡು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಎಂದು ಮಾಡಿದ್ದಾರೆ. ಅದರಲ್ಲಿ ಎಕ್ಸ್‌ಪರ್ಟ್ ಬಾಡಿ ಇದೆ. ಅವರು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ನಾನು ಎ. ಪಿ. ಸಿ. ಮೆಂಬರ್ ಆಗಿ

ದ್ದಾಗ ಇವೆಲ್ಲಾ ಗೊತ್ತಾಯಿತು. ಇದನ್ನು ನಿಮ್ಮ ಮಾಹಿತಿಗೋಸ್ಕರ ಹೇಳುತ್ತಿದ್ದೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಎಸ್. ಕೃಷ್ಣನ್.—ಈ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಏನು ಮಾಡಿದ್ದೀರಿ ಅದು ನನಗೂ ಗೊತ್ತು. ಕೇಂದ್ರದಲ್ಲೂ ಕೂಡ ಇದೇ ರೀತಿ ಒಂದು ಬ್ಯೂರೋ ಆಫ್ ಪಬ್ಲಿಕ್ ಎಂಟರ್ ಪ್ರೈಸಸ್ ಇದೆ. ಅದರಲ್ಲಿ ಕೆಲವು ಅಧಿಕಾರಿಗಳು ಮಾತ್ರ ಇದ್ದಾರೆ. ಹಾಗೆ ಬರೀ ಅಧಿಕಾರಿಗಳನ್ನು ಸೇರಿಸಿ ಕೊಂಡು ಮಾಡಿದರೆ ಅದು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಆಗುವುದಿಲ್ಲ, ಅದು ಬ್ಯೂರೋ ಕ್ರಸಿ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಆಗುತ್ತದೆ, ಅವರನ್ನು ಇನ್‌ವಾಲ್ವ್ ಮಾಡಿಕೊಂಡರೆ ಪ್ರಯೋಜನ ವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ನಾವೂ ಕೂಡ ಹಿಂದೆ ಟೀಕೆ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಟೀಕೆ ಮಾಡಿದ್ದರೂ ಏನು ಪ್ರಯೋಜನವಾಯಿತು ? ನೀವು ಟೀಕೆ ಮಾಡಿದ್ದನ್ನು ಅವರು ಗಣನೆಗೆ ತೆಗೆದುಕೊಂಡು ಸರಿ ಮಾಡಿದ್ದರೆ ಪ್ರಯೋಜನವಾಗುತ್ತಿತ್ತು. ಹಾಗೆ ಮಾಡಿದ್ದರೆ ಈ ಪ್ರಶ್ನೆ ಆಗಲೇ ಬಗೆಹರಿಯುತ್ತಿತ್ತು. ಈ ಪ್ರಶ್ನೆ ಬಗೆಹರಿಯದೇ ಇದ್ದುದರಿಂದ ಆ ಜನ ರಲ್ಲಿ ಇದು ಬ್ಯೂರೋಕ್ರಸಿ ಆಫ್ ಎಂಟರ್‌ಪ್ರೈಸಸ್ ಅನ್ನುವ ಭಾವನೆ ಬಂದಿದೆ. ತಮಗೂ ಗೊತ್ತಿದೆ. ಹಿಂದೆ ಈ ಕಾರ್ಮಿಕರು 83 ದಿವಸಗಳ ಕಾಲ ಮುಷ್ಕರ ಮಾಡಿ ಏನು ತೊಂದರೆಯನ್ನು ಅನುಭವಿಸಿದರೋ ಆ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಅಧಿಕಾರಿಗಳು ದದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಇದು ಹಾಗೆಯೇ ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗಿರುವುದರಿಂದ ಇಂಥಾ ಕೈಗಾರಿಕೆಗಳನ್ನು ಯಾವರೀತಿಯಾಗಿ ಮೇಲಕ್ಕೆ ಎತ್ತಬೇಕು, ಎನ್ನುವುದರ ಬಗ್ಗೆ ಆಗಿಂದಾಗ್ಗೆ ಯೋಚನೆ ಮಾಡಿ ಸರಿಪಾಡಬೇಕು. ನಾನೇನೋ ಇದರ ಬಗ್ಗೆ ಸಲಹೆ ಕೊಟ್ಟಿದ್ದೇನೆ, ಅದನ್ನು ಬಗೆಹರಿಸುವ ವಿಷಯವನ್ನು ತಮಗೆ ಬಿಟ್ಟಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದಂಥಾದ್ದು ಏನೋ ಉತ್ತಮವಾದ ಸಲಹೆ. ಲೆಜಿ ಸ್ಲೇಟೀವ್ ಕಮಿಟಿಗಳು ಏನು ಇವೆ ಇದರ ರಿಪೋರ್ಟ್‌ಗಳು ಸರ್ಕಾರಕ್ಕೆ ಬಂದಮೇಲೆ ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದ್ದು ಅವಶ್ಯಕ. ಆ ಕಮಿಟಿಯವರು ಕೊಟ್ಟಂಥಾ ವರದಿಯನ್ನು ತಡಮಾಡದೇ ಸರ್ಕಾರ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ನನಗೂ ಗೊತ್ತಿದೆ. ತಮಗೆ ಹೇಳಬೇಕಾದರೆ ಎಷ್ಟೋ ಕಮಿಟಿಗಳ ವರದಿ ಸರ್ಕಾರಕ್ಕೆ ಬಂದಿದ್ದರೂ ಕೂಡ 6 ವರ್ಷವಾದರೂ, 8 ವರ್ಷವಾದರೂ ಕೂಡ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ನಮ್ಮ ಸರ್ಕಾರ ಬಂದಮೇಲೆ ಆ ರೀತಿ ಆಗಬಾರದು ಎಂದು ಅಂಥಾ ಕಮಿಟಿಗಳ ವರದಿ ಸರ್ಕಾರಕ್ಕೆ ಬಂದಕೂಡಲೇ ಅದನ್ನು ಪರಿಶೀಲನೆ ಮಾಡಲು ಕ್ಯಾಬಿನೆಟ್ ಸಬ್‌ಕಮಿಟಿಯೊಂದನ್ನು ರಚಿಸಲು ಆಲೋಚಿಸಲಾಗಿದೆ. ಕೆಲವು ರಾಜ್ಯ ಸರ್ಕಾರಗಳಲ್ಲಿ ಈ ರೀತಿ ಮಾಡಿದ್ದಾರೆ. ಕ್ಯಾಬಿನೆಟ್ ಸಬ್ ಕಮಿಟಿಯವರು ಅದನ್ನು ಪರಿಶೀಲಿಸಿ ಚೆನ್ನಾಗಿ ಅಧ್ಯಯನ ಮಾಡಿದ ನಂತರ ಸರ್ಕಾರದವರು ತಕ್ಷಣವೇ ಅದರ ಮೇಲೆ ಫಾಲೋ ಅಪ್ ಆಕ್ಷನ್ ತೆಗೆದುಕೊಳ್ಳಬೇಕೆನ್ನುವ ವಿಚಾರ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವೇನೋ ಒಂದು ಹೆಜ್ಜೆ ಮುಂದೆ ಹೋಗಿ ಈ ಮಾತನ್ನು ಹೇಳಿ ದ್ದೀರಿ. ಈ ಕ್ಯಾಬಿನೆಟ್ ಸಬ್‌ಕಮಿಟಿಯವರು ಇದನ್ನು ಚೆನ್ನಾಗಿ ಅಧ್ಯಯನ ಮಾಡಿ ನಂತರ ಏನು ಕ್ರಮ ತೆಗೆದುಕೊಳ್ಳುತ್ತೀರೋ ಇದರ ಬಗ್ಗೆ ನನ್ನ ಒಂದು ಸೂಚನೆ. ಅದು ಏನೆಂದರೆ ಇದರ ವ್ಯಾಪ್ತಿ ಬಹಳ ದೊಡ್ಡದು. ತಮಗೂ ಗೊತ್ತಿದೆ. ಇದು ಇನ್ನೂ ವಿಶಾಲವಾದ ರೀತಿಯಲ್ಲಿ ಇರಬೇಕು. ಈ ಉಪಸಮಿತಿ ಯಲ್ಲಿ ಈ ಬ್ಯೂರೋ ಆಫ್ ಎಂಟರ್‌ಪ್ರೈಸಸ್‌ಗೆ ಸಂಬಂಧಪಟ್ಟ ಮಂತ್ರಿಗಳು ಇರಬೇಕು. ಇದಕ್ಕೆ ಯಾರು ಸಂಬಂಧಪಟ್ಟವರು ಇರುತ್ತಾರೋ ಅವರನ್ನು ಸೇರಿಸಬೇಕು. ಈ ಪಬ್ಲಿಕ್ ಸೆಕ್ಟರ್ಸ್‌ನಲ್ಲಿ ಕಾರ್ಮಿಕ ವರ್ಗ ಏನು ಇದೆ ಅವರನ್ನೂ ಸೇರಿಸಬೇಕು. ಹಾಗೆ ಮಾಡಿದರೆ ಇದರಲ್ಲಿ ಯಾರ್‍ಯಾರ ಹುಳುಕುಗಳು ಇವೆ ಅದ ನ್ನೆಲ್ಲಾ ಎತ್ತಿತೋರಿಸಿ, ಮುಂದೆ ಹಾಗಾಗದಂತೆ ಆ ಉದ್ದಿಮೆಗಳು ಚೆನ್ನಾಗಿ ನಡೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಅದರಲ್ಲಿ ಏನೇ ನಡೆದರೂ ಕೂಡ ಅದು ಬಹಿರಂಗವಾಗುವು ದಿಲ್ಲ, ಅಲ್ಲದೆ ಆ ಕಾರ್ಮಿಕರ ಸಮಸ್ಯೆಗಳೂ ಕೂಡ ಇತ್ಯರ್ಥವಾಗುವುದಿಲ್ಲ. ಹೀಗೆ ಎಲ್ಲರನ್ನೂ ಸೇರಿಕೊಂ ಡಂಥ ಒಂದು ಸಮಿತಿ ಮಾಡಿದರೆ ಈ ಸಾರ್ವಜನಿಕ ಕ್ಷೇತ್ರಗಳಲ್ಲಿರುವ ಕೈಗಾರಿಕೆಗಳು ಸ್ವಲ್ಪ ಉತ್ತಮ ಸ್ಥಿತಿಗೆ ಬರಲು ಅನುಕೂಲವಾಗಬಹುದು. ಅದನ್ನು ತಾವು ಯೋಚನೆ ಮಾಡಿ. ಆ ವಿಷಯ ತಮಗೆ ಬಿಟ್ಟದ್ದು.

ಇನ್ನೊಂದು ವಿಷಯ ಏನೆಂದರೆ ಈ ವಿಜ್ಞಾನ ಇಂಡಸ್ಟ್ರೀಸ್‌ಗೆ 10 ಲಕ್ಷ ರೂಪಾಯಿ ಹಿಂದೆ ಸ್ಯಾಂಕ್ಷನ್ ಮಾಡಿದ್ದಾರಂತೆ. ನನಗೆ ತಿಳಿದ ಮಟ್ಟಿಗೆ It is a case of favouritism. ಮೇಲಾಗಿ ಈ ಒಂದು ಕೈಗಾರಿಕೆ ಹಿಂದೆ ಸರ್ಕಾರದಿಂದ 10-20-30 ಸಾವಿರ ರೂಪಾಯಿ ಹಣ ಪಡೆದುಕೊಂಡಿದೆ. ಅದಲ್ಲದೆ ಕೆಎಸ್ ಐಐಡಿಸಿ ಮತ್ತು ಕೆಎಸ್‌ಎಫ್‌ಸಿ ಯಿಂದ ಲಕ್ಷಾಂತರ ರೂಪಾಯಿ ಹಣ ಪಡೆದುಕೊಂಡು ಇದರ ಬಂಡವಾಳ ಕೋಟ್ಯಾಂತರ ರೂಪಾಯಿ ಆಗಿದೆ. ಹೀಗೆ ಬೇಕಾದಷ್ಟು ಮೋಸ ಮಾಡಿ ಅನೇಕ ರೀತಿಯಾಗಿ ಸಹಾಯ ಪಡೆದುಕೊಂಡಿದ್ದಾರೆ. ಇಂಥಾ ಇನ್ಸ್‌ಟಿಟ್ಯೂಷನ್ಸ್‌ಗೆಲ್ಲಾ ಸರ್ಕಾರ ಏತಕ್ಕೆ ಸಹಾಯ ಮಾಡಬೇಕು ? ಇಂಥಾ ದ್ದಕ್ಕೆಲ್ಲಾ ಏತಕ್ಕೆ ಫೇವರಿಟಿಸಮ್ ತೋರಿಸಬೇಕು ? ನಮ್ಮ ರಾಜ್ಯದಲ್ಲಿ ಯಾವ ಇಂಡಸ್ಟ್ರಿ ಸಿಕ್ ಆಗುತ್ತದೋ

ಆ ಬಗ್ಗೆ ಯೋಚನೆ ಮಾಡಿ ಸಿಕ್ ಆಗುವುದಕ್ಕೆ ಮುಂಚೆಯೇ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು. ಒಂದು ವೇಳೆ ಅದು ಮೊದಲೇ ಖಾಯಿಲೆಯಿಂದ ಇದ್ದರೆ ಅಂಥಾ ಸಿಕ್ ಆಗಿರತಕ್ಕಂಥಾ ಇಂಡಸ್ಟ್ರೀಸ್‌ಗೆ ಸರ್ಕಾರ ಏತಕ್ಕೆ ಸಹಾಯ ಮಾಡಬೇಕು ? ಇದನ್ನೆಲ್ಲಾ ಮೊದಲೇ ಯೋಚನೆ ಮಾಡಬೇಕು. ಹಾಗೆ ಯೋಚನೆ ಮಾಡದೆ ಇಂಥಾ ರೋಗಗ್ರಸ್ಥ ಇಂಡಸ್ಟ್ರೀಸ್‌ಗೆ ಸಹಾಯ ಮಾಡಲು ಯಾರು ಕಾರಣಕರ್ತರಾಗುತ್ತಾರೋ ಅವರನ್ನು ಪತೋಟಿಯಲ್ಲಿಟ್ಟು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಅವರಿಗೆ ಮತ್ತೆ ಹಣ ಕೊಟ್ಟು ಸಹಾಯ ಮಾಡಿದರೆ ಅದರಿಂದ ಏನೂ ಪ್ರಯೋಜನವೂ ಆಗುವುದಿಲ್ಲ. ಮೇಲಾಗಿ ಮುಂದೆ ಲಾಕೌಟ್ ಅದು ಇದು ಉಂಟಾಗಿ ಸರಿಯಾಗಿ ನಡೆದುಕೊಂಡು ಹೋಗುವುದಿಲ್ಲ. ಇಂಥಾದ್ದಕ್ಕೆ ಅವಕಾಶ ಕೊಡಬಾರದು.

4-30.pm ಅದು ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಪರಿಣಾಮಕಾರಿಯಾದ ಕಾರ್ಯಕ್ರಮ ವನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯ, ಬೇಡಿಕೆ ನಂಬರ್ 11 ರಲ್ಲಿ ಸರ್ಕಾರದವರು ನಡೆಸದೆ ಇರುವಂಥ ಎಂಜಿನಿಯ ರಿಂಗ್ ಕಾಲೇಜುಗಳಿಗೆ ಇಷ್ಟು ಹಣವನ್ನು ಕೊಡಲಾಗಿದೆಯೆಂದು ತಿಳಿಸಿದ್ದೀರಿ. ನನಗೆ ತಿಳಿದ ಮಟ್ಟಿಗೆ ಈ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕಾದರೆ ಅವರ ಹತ್ತಿರ ಮೆಷಿನರೀಸ್ ಇರಬೇಕು, ಎಕಿಪ್‌ಮೆಂಟ್ ಇರ ಬೇಕು, ಲ್ಯಾಬೊರೇಟರಿ ಇರಬೇಕು. ಇವೆಲ್ಲಾ ಇದ್ದರೆ ಸರ್ಕಾರದವರು ಸಹಾಯ ಮಾಡುತ್ತೇವೆಂದು ಹೇಳು ತ್ತಾರೆ. ಇದರ ಬಗ್ಗೆ ಸರ್ಕಾರದಲ್ಲಿ ರೂಲ್ಸ್ ಸಹ ಮಾಡಿಕೊಂಡಿದ್ದಾರೆ. ಈಗ ನೀವು ಇವೆಲ್ಲವನ್ನೂ ಅವರಿಗೆ ಸಹಾಯ ಮಾಡುವುದಾದರೆ ರೂಲ್ಸ್‌ನ ಅರ್ಥ ಏನು ? ಸರ್ಕಾರದವರ ರೂಲ್ಸ್‌ಗೆ ಇದು ವಿರೋಧವಾಗುವು ದಿಲ್ಲವೇ ? ಇಲ್ಲಿ ಖಾಸಗೀ ಕಾಲೇಜುಗಳವರಿಗೆ ನೀವು ಏನಾದರೂ ಮಾಡಿಕೊಳ್ಳಿ. ನಾವು ಸರ್ಕಾರದಿಂದ ಸಹಾಯ ಮಾಡುತ್ತೇವೆ ಎಂದು ಹೇಳುತ್ತೀರಿ ಎಂಬ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಕೆಲವು ಕಾಲೇಜುಗಳಲ್ಲಿ ಲ್ಯಾಬೊರೆಟರಿ ಇರುವುದಿಲ್ಲ, ರೂಮು ಇರುವುದಿಲ್ಲ, ಏನೂ ಇರುವುದಿಲ್ಲ, ಅಂಥಾದ್ದಕ್ಕೆ ಇವತ್ತಿನದಿವಸ ಸಹಾಯ ಮಾಡುವಂಥ ಪರಿಸ್ಥಿತಿ ಬಂದಿದೆ. ಇದು ಏನು ವ್ಯಾಪಾರವೇ ? ಹಿಂದೆ ಮಾಡಿ ದಂಥ ತಪ್ಪನ್ನು ನೀವೂ ಮಾಡುತ್ತೀರಾ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಹಿಂದೆ ಮಾಡಿದಂಥ ಖರ್ಚು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಒಂದೇ ಸಲಕ್ಕೆ ತಪ್ಪಿಸಿಕೊಂಡು ಹೋಗಿಬಿಡು ತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಎಚ್ಚರಿಕೆಯನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಂದಿನ ಸಾರಿ ನಾನು ಇದರ ಬಗ್ಗೆ ಮಾತನಾಡುವಾಗ ಈ ಪರಿಸ್ಥಿತಿ ಆಗದೆ ಇರಲಿ. ಇನ್ನು ಡಿಮ್ಯಾಂಡ್ ನಂ-25. ಇಲ್ಲಿ ಮುಖ್ಯ ಪ್ರಶ್ನೆ ಎಂದರೆ, ಲೈಫರ್ಸ್ ಮತ್ತು ಖೈದಿಗ ಳನ್ನು ನೋಡಿಕೊಳ್ಳುವ ರೀತಿ ಈ ಎರಡನ್ನೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಅಲ್ಲಿ ಖೈದಿಗಳಾಗಿ ಕೆಲಸ ಮಾಡುವವರಿಗೆ ಒಂದು ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಇದರಿಂದ ಅವರ ಜೀವನಮಟ್ಟ ಸುಧಾ ರಿಸಲು ಸಾಧ್ಯವೇ ? ಇದನ್ನು ತಾವು ಪುನರ್ವಿಮರ್ಶೆ ಮಾಡಬೇಕು. ಅಲ್ಲಿ ಫಸ್ಟ್ ಕ್ಲಾಸ್ ಕೆಲಸ ಮಾಡು ವಂಥ ಕೆಲಸಗಾರರು ಇದ್ದಾರೆ. ಅಲ್ಲಿ ತಯಾರಾದಂಥ ಫರ್ನೀಚರ್ಸ್ ಎಲ್ಲಿಗೋ ಹೋಗುತ್ತದೆ. ಕೆಲವು ಐ. ಜಿ. ಆಫ್. ಪ್ರೀಸನ್ಸ್ ಮನೆಗೆ ಹೋಗುತ್ತದೆ, ಜೈಲು ಸೂಪರಿಂಟೆಂಡೆಂಟ್ ಮನೆಗೆ ಹೋಗುತ್ತದೆ ಮತ್ತು ಇನ್ನೂ ದೊಡ್ಡ ದೊಡ್ಡ ಜನಗಳ ಮನೆಗೆ ಹೋಗುತ್ತದೆ. ನಾವು ಜೈಲಿನಲ್ಲಿದ್ದಾಗ ಅಲ್ಲಿರುವಂಥ ಖೈದಿಗಳು ಬಂದು ನಮ್ಮ ಹತ್ತಿರ ಹೇಳುತ್ತಿದ್ದರು. ಇದರ ಬಗ್ಗೆ ನಾನು ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಆದರೆ ಅಲ್ಲಿ ಒಳ್ಳೆಯ ಕೆಲಸ ಮಾಡತಕ್ಕವರು ಯಾರಿದ್ದಾರೆ ಅವರಿಗೆ ಕೊಡತಕ್ಕ ಭತ್ಯವನ್ನು ಜಾಸ್ತಿ ಮಾಡ ಬೇಕು ಎಂದು ಹೇಳುತ್ತೇನೆ. ಅವರು ಏನೋ ತಪ್ಪನ್ನು ಯಾವುದೋ ಪರಿಸ್ಥಿತಿಗೆ ಸಿಕ್ಕಿ ಮಾಡಿರುತ್ತಾರೆ. ಇವರ ಬಗ್ಗೆ ತಾವು ಸ್ವಲ್ಪ ಕನಿಕರದಿಂದ ಯೋಚನೆ ಮಾಡಬೇಕಾಗಿದೆ. ಎರಡನೆಯದು ಈ ಲೈಫರ್ಸ್ ಬಗ್ಗೆ ಸುಪ್ರೀಂಕೋರ್ಟಿನವರು ಇತ್ತೀಚೆಗೆ ಒಂದು ತೀರ್ಮಾನವನ್ನು ಮಾಡಿದ್ದಾರೆ. ಅದರ ಪ್ರಕಾರ ಯಾರು ಹತ್ತು ವರ್ಷಗಳವರೆಗೆ ಲೈಫ್ ಪ್ರಿಸನರ್ಸ್ ಆಗಿದ್ದಾರೆ ಅವರನ್ನು ಬಿಡುಗಡೆ ಮಾಡಬೇಕು. 1978ಕ್ಕಿಂತ ಹಿಂದೆ ಯಾರು ಜೈಲಿನಲ್ಲಿದ್ದರು ಅವರ ಬಗ್ಗೆ ಡಿಸಿಷನ್ ಆಗಿದೆ. ಇವರು ಜೈಲಿನಲ್ಲಿ 10-12 ವರ್ಷ ಜೈಲು ವಾಸ ಅನುಭವಿಸಿದ ಮೇಲೆ ಅವರಿಗೆ ಪುನರ್‌ಜನ್ಮವಾಗಿರುತ್ತದೆ. ಮತ್ತು ಇವರ ಜೀವನದಲ್ಲಿ ಸಾಕಷ್ಟು ಪರಿ ವರ್ತನೆಯಾಗಲಿಕ್ಕೆ ಸಾಧ್ಯವಿದೆ. ಇಂಥವರನ್ನು ಬಿಡುಗಡೆ ಮಾಡಿ ಇವರು ಸ್ವಲ್ಪ ಕಾಲವಾದರೂ ಸಹ ಸಮಾಜದಲ್ಲಿ ಬಾಳುವುದಕ್ಕೆ ನೀವು ಅನುಕೂಲ ಕಲ್ಪಿಸಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳು ತ್ತೇನೆ. ಈಗ ಜೈಲು ಮಂತ್ರಿ ಯಾರೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ರಮೇಶ ಜಿಗಜಿನ್ನಿಗಿಯವರು ಇದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಸುಪ್ರೀಂ ಕೋರ್ಟಿನ ತೀರ್ಮಾನ ಏನು ಆಗಿದೆ ಅದನ್ನು ಕಾರ್ಯರೂ ಪಕ್ಕೆ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು. ನೀವು ಈ ವಿಷಯವನ್ನು ಅಧಿಕಾರಿಗಳಿಗೆ ಬಿಟ್ಟರೆ ಅವರು ಅದರ ಬಗ್ಗೆ ಏನನ್ನೂ ಮಾಡುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಈ ಜೈಲು ಅಧಿಕಾರಿ ಯಾರಿದ್ದಾರೆ ಅವರು

ಬಹಳ ಅಟ್ಟಹಾಸ ಮಾಡುವಂಥ ಅಧಿಕಾರಿ. ಇವರ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ಹೇಳು ತ್ತೇನೆ.

ಡಿಮ್ಯಾಂಡ್ ನಂಬರ್ 30ರ ಬಗ್ಗೆ ಅನೇಕ ಜನ ಸ್ನೇಹಿತರುಗಳು ಮಾತನಾಡಿದ್ದಾರೆ. ನಾನು ಇದರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಐಟಂ ನಂಬರ್ 4ರಲ್ಲಿ ಹೌಸಿಂಗ್ ಬೋರ್ಡ್‌ನವರು ಇ.ಡಬ್ಲ್ಯೂ.ಎಸ್. ಎಂ.ಐ.ಜಿ. ಮತ್ತು ಎಲ್.ಐ.ಬಿ. ಸ್ಕೀಂಗಳಲ್ಲಿ ಕೆಲವು ಮನೆಗಳನ್ನು ಬೆಂಗಳೂರಿನಲ್ಲಿ ಕಟ್ಟಿಸಿದ್ದಾರೆಂದು ಹೇಳಿದ್ದೀರಿ. ಈ ಮನೆಗಳನ್ನು ಬೆಂಗಳೂರಿನಲ್ಲಿ ಕಟ್ಟಿಸಿದ್ದಾರೆ. ಬೇರೆ ಕಡೆ ಕಟ್ಟಿಸಿದ್ದರೆ ನಾವು ನೋಡುವುದು ಕಷ್ಟವಾಗುತ್ತಿತ್ತು. ಆದರೆ ಇವು ಬೆಂಗಳೂರಿನಲ್ಲಿಯೇ ಇರುವುದರಿಂದ ತಾವು ಹೋಗಿ ಈ ಮನೆಗಳನ್ನು ನೋಡಬಹುದು. ಯಾರದೋ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ, ಅವರು ಚೆನ್ನಾಗಿ ಸಿಮೆಂಟ್ ಹಾಕಿರುವುದಿಲ್ಲ, ಕೆಳದರ್ಜೆಯ ಕೆಲಸವನ್ನು ಅಲ್ಲಿ ಮಾಡಿದ್ದಾರೆ. ಈ ಮನೆಗಳಲ್ಲಿ ಜನರು ವಾಸ ಮಾಡುವ ಹಕ್ಕಾಗುವುದಿಲ್ಲ. ಇವುಗಳಿಗೆ ಸರಿಯಾದ ರಿಪೇರಿ ನಡೆಯುವುದಿಲ್ಲ, ಇಂಥ ಪರಿಸ್ಥಿತಿ ಅಲ್ಲಿದೆ. ಈ ರೀತಿ ಏಕೆ ಆಗುತ್ತದೆಂದು ನೀವು ಹೌಸಿಂಗ್‌ಬೋರ್ಡ್‌ನವರನ್ನು ತರಾಟೆಗೆ ತೆಗೆದುಕೊಳ್ಳಬೇಕು ಮತ್ತು ಮನೆಯಲ್ಲಿ ವಾಸ ಮಾಡಲಿಕ್ಕೆ ಅನುಕೂಲ ಮಾಡಿಕೊಡಿ.

ಡಿಮ್ಯಾಂಡ್ 31ರಲ್ಲಿ ನಾನು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕು ಎಂದಿದ್ದೇನೆ. ಇಲ್ಲಿ ಟ್ಯಾಂಕ್‌ಬಂಡ್ ರೋಡನ್ನು ಅಗಲ ಮಾಡುವುದಕ್ಕೋಸ್ಕರ 22 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ನೀವೂ ಸ್ವಲ್ಪ ಆಳವಾಗಿ ಯೋಚನೆ ಮಾಡಬೇಕು. ಇದೂ ಒಂದು ಕರ್ಮಕಾಂಡ ಎಂದು ನನಗನ್ನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲು ರಸ್ತೆ ಆಗಲೀ ;

ಶ್ರೀ ಎಂ. ಎಸ್. ಕೃಷ್ಣನ್.—ಈ ರಸ್ತೆಯ ಕೆಲಸ ಮುಗಿದ ಮೇಲೆ ನೀವು ಸಂಬಂಧಪಟ್ಟವರನ್ನು ಇಂಟರ್‌ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಜೈಲಿಗೆ ಕಳುಹಿಸಬೇಕೊ ಏನೊ. ಇಷ್ಟೊಂದು ದೊಡ್ಡ ಪ್ರಮಾಣದ ದುರ್ವ್ಯವಹಾರ ಅಲ್ಲಿ ನಡೆದಿದೆ. ಇದರಿಂದ ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಲಾಸ್ ಆಗಿದೆ. ಜನಗಳಿಗೆ ವಂಚನೆ ನಡೆದಿದೆ. ದಯವಿಟ್ಟು ತಾವು ಇದನ್ನು ಸ್ವಲ್ಪ ಯೋಚನೆ ಮಾಡಿ ಅವರು ಯಾರೆ ಆಗಿರಲಿ, ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲೇಬೇಕು. ಸಂಬಂಧಪಟ್ಟವರು ಯಾವುದೋ ಪಕ್ಷಕ್ಕೆ ಸೇರಿಬಿಟ್ಟಿದ್ದಾರೆಂದು ತಿಳಿಯಬಾರದು. ಅವರು ಯಾವ ಪಕ್ಷದಲ್ಲಿ ಇರಲಿ ದುರ್ವ್ಯವಹಾರ ನಡೆದಿರುವುದನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು. ಬಿ.ಡಿ.ಎ.ಗೆ ಸಂಬಂಧಪಟ್ಟ ಸುಮಾರು 37 ಹಳ್ಳಿಗಳನ್ನು ಕಾರ್ಪೊರೇಷನ್‌ಗೆ ಸೇರಿಸಿಕೊಂಡಿದ್ದಾರೆ. ಇದು ಇನ್ನೊಂದು ಕರ್ಮಕಾಂಡ ಎಂದು ನನಗನ್ನಿಸುತ್ತದೆ. ಈ ಗ್ರಾಮಗಳನ್ನು ಸೇರಿಸಿಕೊಳ್ಳುವ ಮೊದಲೇ ತಾವು ಯೋಚನೆ ಮಾಡಬೇಕಾಗಿತ್ತು. ಈ ಗ್ರಾಮಗಳಿಗೆ ಮೂಲಭೂತವಾಗಿ ಏನೇನು ಅವಶ್ಯಕತೆಗಳು ಬೇಕೋ ಅವುಗಳನ್ನು ಮೊದಲು ಕಲ್ಪಿಸಿಕೊಡತಕ್ಕ ಜವಾಬ್ದಾರಿ ಸರ್ಕಾರಕ್ಕೆ ಇದೆ.

ಅದು ಯಾವುದೇ ಸರ್ಕಾರವಾಗಲಿ, ಕಾಂಗ್ರೆಸ್ ಸರ್ಕಾರವಾಗಲಿ, ಜನತಾ ಸರ್ಕಾರವಾಗಲಿ, ಕಮ್ಯುನಿಸ್ಟ್ ಸರ್ಕಾರವಾಗಲಿ, ಆ ಪ್ರಶ್ನೆಯಿಲ್ಲ. 32 ಗ್ರಾಮಗಳನ್ನು ಏನು ಕಾರ್ಪೊರೇಷನ್ನಿಗೆ ಸೇರಿಸಿದರು ಆ ಗ್ರಾಮಗಳಲ್ಲಿ ಇವತ್ತಿನ ದಿವಸ ನೀರಿನ ವ್ಯವಸ್ಥೆಯಿಲ್ಲ, ಒಳಚರಂಡಿ ವ್ಯವಸ್ಥೆಯಿಲ್ಲ, ಟಾರ್ ಇಲ್ಲ, ರೋಡ್ ಇಲ್ಲ, ಇಂತಹ ಅನಾನುಕೂಲತೆಗಳು ತೀರ ಇವೆ, ಅವೆಲ್ಲಾ ಬಿ.ಡಿ.ಎ.ಗೆ ಬರುತ್ತದೆ. ಬಿ.ಡಿ.ಎ. ಬ್ರಹ್ಮ ರಾಕ್ಷಸ ಎಂದು ಕಾಣುತ್ತದೆ. ಬಿ.ಡಿ.ಎ ನವರು ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತಾರೆ. ಕೊಟ್ಟದ್ದು ಎಲ್ಲಿ ಹೋಯಿತು, ಸೋರಿ ಹೋಯಿತು. ಟೇಬಲ್ ಮೇಲೆ, ಟೇಬಲ್ ಕೆಳಗೆ ಎಲ್ಲಿ ಕಂಡರೆ ಅಲ್ಲಿ ತೆಗೆದುಕೊಳ್ಳುತ್ತಾರೆ. ಅದು ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿ. ಈ ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿ ದಯವಿಟ್ಟು ಈ ಗ್ರಾಮಗಳನ್ನು ವಹಿಸಬೇಡಿ. ಏಕೆಂದರೆ, ಅದು ಇನ್ನೂ ಬಿ.ಡಿ.ಎ. ಜ್ಯೂರಿಸ್‌ಡಿಕ್ಷನ್ ಒಳಗೆ ಇದೆ, ಅದನ್ನು ತೆಗೆದು ಕಾರ್ಪೊರೇಷನ್‌ಗೆ ವಹಿಸಿ. ಮೊದಲು ಆ ಗ್ರಾಮಗಳಿಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸಿಕೊಡಿ. ಆಗ ನೀವು ಕೇಳಿದ ಹಣಕ್ಕೆ ಶಹಭಾಷ್‌ಗಿರಿ ಕೊಡಬಹುದು.

ಇನ್ನೊಂದು ವಿಷಯವೇನೆಂದರೆ, ಸೆಲ್ಫ್ ಫೈನಾನ್ಸಿಂಗ್ ಸ್ಕೀಂ ಬಗ್ಗೆ ಹೇಳಿದ್ದೀರಿ. ಬಿಲ್ಡಿಂಗ್ಸ್ ಬಗ್ಗೆ ಹೇಳಿದ್ದಾರೆ.

No. 44

> ' The Bangalore Development Authority has launched a "Self Financing Housing" scheme for the benefit of persons belonging high/middle/low income groups. It is a viable scheme and therefore, it is considered that by outright purchase, the long delays in undertaking departmental construction of houses would be overcome."

ಎಂದು ಹೇಳಿದ್ದಾರೆ. ಅಂದರೆ ಬಿ.ಡಿ.ಎ.ನವರು ಹೌಸಿಂಗ್ ಸ್ಕೀಂ ಮನೆಗಳನ್ನು ಕಟ್ಟಿದ್ದಾರೆ. ಅದನ್ನು

ಸರ್ಕಾರದವರು ಔಟ್‌ರೇಟ್ ಪರ್ಚೇಸ್ ಮಾಡುತ್ತಾರೆ, ಉದ್ದೇಶ ಬಹಳ ಒಳ್ಳೆಯದು ಆ ರೀತಿ ಮಾಡಿದರೆ. ಈ ಸೆಲ್ಫ್ ಫೈನಾನ್ಸಿಂಗ್ ಹೌಸಿಂಗ್ ಎಲ್ಲಿದೆ, ಎಷ್ಟು ಬಂದಿದೆ. ಎಂ.ಐ.ಜಿ; ಎಲ್.ಐ.ಜಿ.ಯಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದೀರಿ. ನೋಡಿ ಅದರ ಬಗ್ಗೆ ಎನ್‌ಕ್ವೈರಿ ಮಾಡಿದರೆ ಗೊತ್ತಾಗುತ್ತದೆ. ಅದು ಬೋಗಸ್ ಕ್ಲೈಂ. ಬೋಗಸ್ ಕ್ಲೈಂ ಮಾಡಿ ದುಡ್ಡು ಕೊಡಿ ಅಂದರೆ ಏಕೆ ದುಡ್ಡು ಕೊಡಬೇಕು ? ಹಿಂದಿನವರು ಮಾಡಿದ್ದಾರೆ, ನಮಗೇಕೆ ಬಯ್ಯುತ್ತೀರಿ ಎಂದು ಕೇಳಬಹುದು. ಇದರ ಬಗ್ಗೆ ತೀವ್ರವಾದಂಥ ಆಸಕ್ತಿ ವಹಿಸಿ ನಿಜವಾಗಲೂ ಸೆಲ್ಫ್ ಫೈನಾನ್ಸಿಂಗ್ ಹೌಸಿಂಗ್ ಸ್ಕೀಮಿನಿಂದ ಮಧ್ಯಮ ಮತ್ತು ಕಡಿಮೆ ವರಮಾನದ ಗುಂಪಿನವರಿಗೆ ಈ ಯೋಜನೆಯ ಲಾಭ ದೊರಕುವ ಹಾಗೆ ಯೋಚನೆ ಮಾಡಬಹುದು. ಇಲ್ಲದೇಹೋದರೆ ಈ ಯೋಜನೆ ಮಾಡಿದರೆ ತಪ್ಪಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಡಿಮ್ಯಾಂಡ್ ನಂ. 49 ಸ್ಟಾಂಪ್ಸ್ ಮತ್ತು ರಿಜಿಸ್ಟ್ರೇಷನ್. ಇದರಲ್ಲಿ ಎರಡು ತೊಂದರೆಗಳಿವೆ.

ಇದರಲ್ಲಿ ಒಂದು ಮುಖ್ಯವಾದ ವಿಷಯವಿದೆ, ಅದನ್ನು ತಮ್ಮ ಗಮನಕ್ಕೆ ತರುತ್ತೀದ್ದೇನೆ. ನಮ್ಮ ರಾಜ್ಯದಲ್ಲಿ ಅನೇಕ ಹೌಸ್ ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟೀಸ್ ಎಂದು ಇರುತ್ತವೆ. ಈ ಸೊಸೈಟಿಗಳಿಗೆ ಇವತ್ತಿನದಿವಸ ಕನ್ಸೇಷನ್ ಕೊಡುತ್ತಿದ್ದೀರಿ 8 ಸಾವಿರ ರೂಪಾಯಿ ವ್ಯಾಲ್ಯು ಇದ್ದರೆ ಅವರು ಸ್ಟಾಂಪ್ ಡ್ಯೂಟಿ ಕೊಡಬೇಕಾಗಿಲ್ಲ. 8 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಇದ್ದರೆ ರಿಜಿಸ್ಟ್ರೇಷನ್‌ನಲ್ಲಿ 50 ಪರ್ಸೆಂಟ್ ಕನ್ಸೇಷನ್ ಕೊಡುತ್ತಿದ್ದೀರಿ. ಈಗ ಸರ್ಕಾರದವರು ಅದೆಲ್ಲಾ ವಾಪಸ್ ತೆಗೆದುಕೊಂಡಿದ್ದಾರೆ. ಇಷ್ಟು ಮಾತ್ರವಲ್ಲದೆ, Special Deputy Commissioner for Detection of under valuation ಎಂದು ಇದ್ದಾರೆ. ಅಂದರೆ ಕೊಂಡುಕೊಳ್ಳುವಾಗ ಒಂದು ಲಕ್ಷಕ್ಕೆ ಕೊಂಡುಕೊಂಡಿದ್ದರೆ 10 ಸಾವಿರ ರೂಪಾಯಿ ಎಂದು ಬರೆದು ಮೋಸ ಮಾಡಿದ್ದಾರೆ, ಅದು ಅಂಡರ್ ವ್ಯಾಲ್ಯು ಎಂದು ಹೇಳುವುದು. ಅವರು ಮಾಡಿರಬಹುದು. ಅಂದರೆ ಯಾರು ಸೊಸೈಟಿಗೆ ಮೆಂಬರಾಗಿರುತ್ತಾರೆ. ಅವರಿಗೆ ಫಸ್ಟ್ ಸೇಲ್ ಆದಾಗ ಈ ಪ್ರಶ್ನೆ ಬರುವುದಿಲ್ಲ. ಸೆಕೆಂಡ್ ಸೇಲ್‌ನಲ್ಲಿ ಇನ್ನೊಬ್ಬರಿಗೆ ಮಾರಿದಾಗ, 20 ಸಾವಿರಕ್ಕೆ ಸೇಲ್ ಆಗಿದ್ದರೆ, 10 ಸಾವಿರಕ್ಕೆ ಸ್ಟಾಂಪ್ ಡ್ಯೂಟಿ ಕೊಟ್ಟಿದ್ದರೆ 10 ಸಾವಿರ ಹೊಡೆದುಕೊಂಡಿರಬಹುದು, ಮೋಸ ಆಗಿರಬಹುದು. ಆದರೆ ಫಸ್ಟ್ ಸೇಲ್‌ಗೂ ಕೂಡ ನೋಟಿಫೈ ಮಾಡಿ ನೋಟೀಸ್ ಕೊಡುತ್ತಾರೆ. ಇದನ್ನು ತಡೆಗಟ್ಟಬೇಕು. ಅವರಿಗೆ ನ್ಯಾಯವಾಗಿ ಏನು ಸೌಲಭ್ಯ ದೊರಕಬೇಕೋ ಅದು ಸಿಕ್ಕುವ ಹಾಗೆ ಮಾಡಬೇಕು. ಮತ್ತೆ ಕೇಂದ್ರ ಸರ್ಕಾರದ ನೌಕರರಿಗೆ ಲೋನ್ ಕೊಡುತ್ತಾರೆ. ಅದಕ್ಕೆ ಕನ್ಸೇಷನ್ ಇದೆ. ಅದೇರೀತಿ ಕೇರಳ, ತಮಿಳುನಾಡು ರಾಜ್ಯಗಳಲ್ಲೂ ಕನ್ಸೇಷನ್ ಕೊಡುತ್ತಾ ಇದ್ದಾರೆ. ಇದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯದ ಬಗ್ಗೆ ನೀವು ಪ್ರಶ್ನೆ ಕೇಳಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಅದೇ ರೀತಿ ಇಲ್ಲೂ ಕನ್ಸೇಷನ್ ಏಕೆ ಕೊಡಬಾರದು ? ನೀವು ಉತ್ತರ ಕೊಡಲಿಕ್ಕೆ ತಯಾರಾಗಿಲ್ಲ ಏನು ಮಾಡಲಿ.

ಇನ್ನು ಪೇಜ್ ನಂಬರ್ 85ರಲ್ಲಿ ಡಿಮ್ಯಾಂಡ್ ನಂಬರ್–54ರಲ್ಲಿ ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಿದ್ದೀರಿ. ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಗೆ ನೆರವಿನ ಅಗತ್ಯವಿದೆಯೆಂದು ಸರ್ಕಾರವು ಘೋಷಿಸಿರುವುದು ಬಹಳ ಸಂತೋಷ. ಈ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಏನಿದೆ ಅದನ್ನು ತಾವು ವಿಮರ್ಶೆ ಮಾಡಿ. ಅ ಆಕ್ಟ್ ಪ್ರಕಾರ ಅಲ್ಲಿರುವಂಥ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ. ಅದನ್ನು ಮಾನ್ಯ ಕಾನೂನು ಮಂತ್ರಿಗಳು ದಯವಿಟ್ಟು ಓದಬೇಕು.

ಇನ್ನು ಕಡೆಯದು ಡಿಮ್ಯಾಂಡ್ ನಂ.60. ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್. ಅದರ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ

"Additional provision is required to meet the expenditure on Drugs Chemicals as the existing provision is not adequate."

ಎಂದು ಹೇಳಿದ್ದೀರಿ. ಇ.ಎಸ್.ಐ. ಏನಿದೆ ಅದು ಒಂದು ಸಾಮಾಜಿಕ ವಿಮಾ ಯೋಜನೆ. ಅದು ಕೇಂದ್ರ ಸರ್ಕಾರದವರು ತೆಗೆದುಕೊಂಡು ಬಂದಂಥ ಯೋಜನೆ. ಆ ಯೋಜನೆಯನ್ನು ಕಾರ್ಮಿಕರಿಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ತಂದದ್ದು. ಅದು ಸರಿಯಾಗಿ ನಡೆಯಬೇಕು. ಆದರೆ ಆ ಯೋಜನೆ ಬಗ್ಗೆ ಟೀಕೆ ಇದೆ. ಇದೊಂದು ದೊಡ್ಡ ರ್‍ಯಾಕೆಟ್ ಆಗಿದೆ. ಡ್ರಗ್ಸ್ ಅಂಡ್ ಕೆಮಿಕಲ್ಸ್‌ನಲ್ಲಿ ದುಡ್ಡನ್ನು ಲಪಟಾಯಿಸುತ್ತಿದ್ದಾರೆ. ರಾಜಾಜಿನಗರದ ಆಸ್ಪತ್ರೆಯಲ್ಲಿ ಇನ್ಶೂರ್ಡ್ ಪರ್ಸನ್ಸ್ ಹೋದರೆ ಡಾಕ್ಟರ್ 10 ರೂಪಾಯಿ ಮೆಡಿಸನ್ಸ್ ಬೇಕಾದರೆ 100 ರೂಪಾಯಿ ಮೆಡಿಸನ್ಸ್ ತರಿಸುವುದು, ಮಧ್ಯಸ್ತಿಕೆಗಾರ 100 ರೂಪಾಯಿ ಔಷಧಿ ಕೊಡಿಸಿ, ಅವನು ಮತ್ತು ಡಾಕ್ಟರ್ ದುಡ್ಡು ಲಪಟಾಯಿಸುತ್ತಿದ್ದಾರೆ. ಇದರಿಂದ ಸಮಾಜಕ್ಕೆ ಅನ್ಯಾಯವಾಗುತ್ತಿದೆ, ಪೇಷಂಟ್ಸ್‌ಗೆ ಅನ್ಯಾಯವಾಗುತ್ತಿದೆ. ಈ ರೀತಿ ಒಂದು ರಾಕೆಟ್ ನಡೆಯುತ್ತಿದೆ. ಡಾಕ್ಟರ್ ಮತ್ತು ಮಧ್ಯಸ್ಥಿಕೆಗಾರರು ಬಹಳ ಮೋಸ ಮಾಡುತ್ತಿದ್ದಾರೆ. ಅದರ ಬಗ್ಗೆ ವಿಜಿಲೆನ್ಸ್‌ನವರು ಗಮನಹರಿಸಿ ಅದನ್ನು ತಕ್ಷಣ ತಡೆಗಟ್ಟುವ ಮಾರ್ಗ ಕಂಡುಹಿಡಿಯಬೇಕು, ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಪೇಜ್ 99ರಲ್ಲಿ ಈ ರೀತಿಯಾಗಿದೆ...

"But the work was delayed by the contractor due to financial difficulties. Further the firm SIKKA-N-SIKKA has not supplied the slipway machinery as envisaged." ಕಂಟ್ರಾಕ್ಟರ್ ಮೋಸ ಮಾಡಿದ, ಆದುದರಿಂದ ಕೆಲಸ ಮಾಡಲಿಲ್ಲವೆಂದು ಹೇಳಿದ್ದಾರೆ. ಅಲ್ಲದೆ ಮಿಷನರಿ ಸಪ್ಲೈ ಮಾಡಲಿಲ್ಲ, ಆದುದರಿಂದ ಅದಕ್ಕೆ ಖರ್ಚಾಗಿರುವ ದುಡ್ಡನ್ನು ಕೊಡಬೇಕೆಂದು ಕೇಳಿದ್ದಾರೆ. ಇದು ಯಾವ ನ್ಯಾಯ ಸ್ವಾಮಿ ? ತಾವು ಒಪ್ಪಿಕೊಳ್ಳುತ್ತೀರಾ ? ಇಲ್ಲದಿದ್ದರೆ ತಾವು ಏತಕ್ಕೆ ಒಪ್ಪಿಕೊಂಡಿರಿ ? ಸಿಕ್ಕಾ ಅಂಡ್ ಸಿಕ್ಕಾ ಎನ್ನುವವರು ಮಹಾನುಭಾವರೇ ಇರಬೇಕು.

ಶ್ರೀ ಬಾಪುಗೌಡ.—ಸಿಕ್ಕಾ ಅಂಡ್ ಸಿಕ್ಕಾ ಎನ್ನುವವರು ಡೆಲ್ಲಿಯಲ್ಲಿ ಜಾಸ್ತಿ ಚಲಾವಣೆಯಲ್ಲಿದ್ದರು, ಕೃಷ್ಣಾ ಕ್ರಸ್ಟ್ ಗೇಟ್‌ಗೂ ಅವರೇ ಸಪ್ಲೈ ಮಾಡಿದವರು...

ಶ್ರೀ ಎಂ. ಎಸ್. ಕೃಷ್ಣನ್.—ಅವರು ಡೆಲ್ಲಿಯವರಿಗೂ ಸಿಕ್ಕಲಿಲ್ಲ ಇಲ್ಲಿ ಬೆಂಗಳೂರಿನಲ್ಲಿ ನಿಮಗೂ ಸಿಕ್ಕಲಿಲ್ಲ. ಆದುದರಿಂದ ಇದರ ಬಗ್ಗೆ ತಾವು ಸ್ವಲ್ಪ ಗಮನ ಹರಿಸಬೇಕೆಂದು ಇಷ್ಟು ಮಾತ್ರ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಇಲಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಈ ಸದನದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ವೀರಪ್ಪ ಮೊಯ್ಲಿಯವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಾದದ್ದು ನನ್ನ ಧರ್ಮ. ಆದುದರಿಂದ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಮೊದಲನೆಯದಾಗಿ ಅಜ್ಜಿಬಾಳ ಹೆಗಡೆಯವರ ಚುನಾವಣೆ ವಿಷಯವಾಗಿ ಹೇಳಬೇಕಾಗಿದೆ. ಈ ವಿಷಯದ ಬಗ್ಗೆ ಹೇಳುವುದಕ್ಕಿಂತ ಸ್ವಲ್ಪ ಹಿಂದಿನ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಬಯಸುತ್ತೇನೆ. 1980ನೇ ಇಸ್ವಿ ಫೆಬ್ರುವರಿ 11ನೇ ತಾರೀಖಿನ ದಿವಸ ಬಹುಶಃ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರಬಹುದು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರು ಮತ್ತು ಮಾನ್ಯ ಬಂಗಾರಪ್ಪನವರು ಮತ್ತು ಶ್ರೀ ಎಂ. ವೀರಪ್ಪ ಮೊಯ್ಲಿಯವರು ಮೂರು ಜನರೂ ರಾಜ್ಯದ ಕೋಆಪರೇಟಿವ್ ಭೂ ಅಭಿವೃದ್ಧಿ ಬ್ಯಾಂಕಿನ ಗೋಲ್ಡನ್ ಜ್ಯುಬಿಲಿಗೆ ಬಂದಿದ್ದರು ಆಗ ಶ್ರೀ ವೀರಪ್ಪ ಮೊಯ್ಲಿಯವರು ಸಹಕಾರ ಇಲಾಖೆಯ ಮಂತ್ರಿಗಳಾಗಿದ್ದರು ಆ ಸಮಾರಂಭದಲ್ಲಿ ಅವರೂ ಸಹ ಭಾಗವಹಿಸಿದ್ದರು. ಆಗಿನ ಮುಖ್ಯಮಂತ್ರಿಗಳು ಆ ಸಮಾರಂಭದಲ್ಲಿ ಮಾತನಾಡಿ ಸಹಕಾರ ಇಲಾಖೆಯಲ್ಲಿ ರಾಜಕೀಯ ತರಬಾರದೆಂದು ಭಾಷಣ ಮಾಡಿದ್ದರು. ಅದನ್ನು ಕೇಳಿ ನಾನು ಬಹಳ ಖುಷಿಯಾಗಿದ್ದೆ. ಆದರೆ ಅವರು ಬರುವಾಗಲೇ ಕಂಕುಳಲ್ಲಿಯೇ ನಾಮಿನೇಷನ್ ಆರ್ಡರನ್ನು ತೆಗೆದುಕೊಂಡು ಬಂದಿದ್ದರು. ಅದು ನನಗೆ ಗೊತ್ತಿರಲಿಲ್ಲ. ರಿಜಿಸ್ಟ್ರಾರ್‌ರವರು ಹಿಂದೆಯೇ ಕುಳಿತಿದ್ದರೂ ಆ ಆರ್ಡರ್ ಅವರ ಜೊತೆಯಲ್ಲಿಯೇ ಇತ್ತು. ಕಂಕುಳಲ್ಲಿ ಫೈಲ್ ಇಟ್ಟುಕೊಂಡಿದ್ದನ್ನು ನಾನು ನೋಡಿ ಏನೋ ಕಂಕುಳಲ್ಲಿ ಇಟ್ಟುಕೊಂಡಿದ್ದೀರಲ್ಲಾ ಯಾರ ಹತ್ತಿರವಾದರೂ ಕೊಡಿ ಎಂದು ಹೇಳಿದೆ. ಅದಕ್ಕೆ ಅವರು ಇರಲಿ ಪರವಾಗಿಲ್ಲವೆಂದು ಹೇಳಿದರು. 3 ಗಂಟೆಯಷ್ಟು ಹೊತ್ತಿಗೆ ಆ ಸಮಾರಂಭಕ್ಕೆ ಬರುವಾಗಲೇ ಆರ್ಡರ್ ಮಾಡಿ ತೆಗೆದುಕೊಂಡು ಬಂದು 6 ಜನರನ್ನು ನಾಮಿನೇಟ್ ಮಾಡಿದ್ದರು. ಪ್ರೆಸಿಡೆಂಟ್ ಚುನಾವಣೆಯಾದಾಗ ನಾನು ಕಂಟೆಸ್ಟ್ ಮಾಡಿರಲಿಲ್ಲ. ಆಗ ಅವಿರೋಧವಾಗಿ ಚುನಾವಣೆಯಾಯಿತು. ಆ ತರಹ ನಾವು ಈಗ ಏನೂ ಮಾಡಲಿಲ್ಲ, ಆದುದರಿಂದ ನಿಮ್ಮ 'ರಾ' ಏನಿದೆ ರಿಸರ್ಚ್ ಅನಾಲಿಸಸ್ ವಿಂಗ್ ಏನಿದೆ ಅವರು ಮಿಸ್‌ಲೀಡ್ ಮಾಡುತ್ತಿದ್ದಾರೆ ಆದುದರಿಂದ ಅವರನ್ನು ಬದಲಾಯಿಸಿಕೊಳ್ಳಿ. ಈಗ ಎಲೆಕ್ಟ್ ಆಗಿರುವವರು ಒಳ್ಳೆಯ ಡೈರೆಕ್ಟರ್ ಆಗಿ ಕೆಲಸ ಮಾಡಿ ಸಹಕಾರ ಇಲಾಖೆಯಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಅವರು ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ. ಮತ್ತೆ ನಾವು ಯಾರನ್ನೂ ನಾಮಿನೇಟ್ ಮಾಡುವುದಕ್ಕೆ ಹೋಗಿಲ್ಲ. ಎರಡನೆಯದಾಗಿ ಮಿಲರ್ಸ್ ಬ್ಯಾಂಕ್ ಬಗ್ಗೆ ಹೇಳಿದರು...

ಶ್ರೀ ಮಹದೇವ್.—ಡಿಫಾಲ್ಟರ್ ಎಂದು ಹೇಳಿ ವಜಾ ಆಗಿರುವವರನ್ನು ರೆಸ್ಟೋರ್ ಮಾಡಿ ಡೈರೆಕ್ಟರ್‌ನ್ನಾಗಿ ಮಾಡಿದ್ದೀರಿ ; ಅದು ಏತಕ್ಕೆ ಎಂದು ಪ್ರಶ್ನೆ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ಅದೇ ನಮಗೂ ನಿಮಗೂ ಇರುವ ವ್ಯತ್ಯಾಸ. ನಿಮ್ಮ ಪಕ್ಷಕ್ಕೇ ಸೇರಿದವರು ಶ್ರೀ ನಲ್ಲೂರೆ ಗೌಡರವರು. ಇನ್ಸ್‌ಸ್ಟಿಟ್ಯೂಷನ್‌ಗೆ ಡಿಫಾಲ್ಟರ್ ಆಗಿದ್ದಾರೆಂದು ನೋಟೀಸ್ ಕೊಟ್ಟು ರಿಮೂವ್ ಮಾಡಿದ್ದರು. ಅವರು ನನ್ನ ಹತ್ತಿರ ಬಂದು ಈ ರೀತಿಯಾಗಿ suomotu ರಿಮೂವ್ ಮಾಡಿದ್ದಾರೆ ಇದು ಹೈಕೋರ್ಟ್ ಡಿಸಿಷನ್‌ಗೆ ವಿರುದ್ಧವಾಗಿದೆಯೆಂದು ಹೇಳಿದರು. ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಸ್ಟೇ ಆರ್ಡರ್ ಕೊಟ್ಟಿದ್ದಾರೆ ಇದೇ ರೀತಿಯಾಗಿ ಹಿಂದೆ ಆದಾಗ ಶ್ರೀ ಜಕನೂರ್‌ರವರು ಕೋ ಆಪರೇಟಿವ್ ಮಿನಿಸ್ಟರ್ ಆಗಿದ್ದರೂ ಸಹ ನನಗೆ ಸ್ಟೇ ಆರ್ಡರ್ ಕೊಡಲಿಲ್ಲ. ಆದರೆ ನಾವು ಸೌಜನ್ಯ ತೋರಿಸಿ ಸ್ಟೇ ಆರ್ಡರ್ ಕೊಟ್ಟಿದ್ದೇವೆ. ಅದೂ ನಿಮ್ಮ ಪಕ್ಷದವರಿಗೇ...

ಇನ್ನು ಮಿಲ್ಲರ್ಸ್ ಕೋ ಆಪರೇಟಿವ್ ಸೊಸೈಟಿ ಬಗ್ಗೆ ಕೆಲವು ವಿವರಣೆಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟು, ಸಹಕಾರ ಮಂತ್ರಿಗಳು ದಾವಣಗೆರೆಗೆ ಹೋಗಿ ಎಂದು ಏನು ಹೇಳಿದ್ದಾರೆ...

---

+ ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲ ದಯವಿಟ್ಟು ಕ್ಷಮಿಸಬೇಕು. ವಕ್ಫ್ ಮಂತ್ರಿಗಳು ಎಂದು ಹೇಳಿದ್ದೇನೆ. ಮಾನ್ಯ ಸಹಕಾರ ಸಚಿವರು ಇದರ ಬಗ್ಗೆ ವಿವರಣೆ ಕೊಡಬೇಕಾದ್ದು ಇರಲಿಲ್ಲ. ಕೊಟ್ಟಿದ್ದಾರೆ ಇರಲಿ. ಅಜ್ಜಿಬಾಳ ಹೆಗಡೆಯವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಿಮಗೆ ಮನಸ್ಸು ಇತ್ತು. ಮಾಡಿದ್ದೀರಿ. ಇಲ್ಲದಿದ್ದರೆ ಶ್ರೀ ನಾನಯ್ಯನವರು ಅಧ್ಯಕ್ಷರಾಗುತ್ತಿದ್ದರು. ಆದರೆ ನೀವು ರೈಟಿಂಗ್‌ನಲ್ಲಿ ಡೈರೆಕ್ಷನ್ ಕೊಟ್ಟಿಲ್ಲ. ಅಜ್ಜಿಬಾಳ ಹೆಗಡೆಯವರೇ ಅಧ್ಯಕ್ಷರಾಗುವ ಹಾಗೆ ಮಾಡಿದ್ದೀರಿ. ಆದುದರಿಂದ ಆ ವಿಷಯವನ್ನು ಅಲ್ಲಿಗೇ ಬಿಡೋಣ.

Sri R. L. Jalappa.—I do not think he is a good psychologist. I am sorry you are not a good psychologist. ನಾನಯ್ಯನವರು ಫೆಡರೇಷನ್ನಿನ ಅಧ್ಯಕ್ಷರಾಗಿದ್ದರು. ಅವರೂ ಇವರೂ ಒಳ್ಳೆಯ ಸ್ನೇಹಿತರು, ಅವರಿಬ್ಬರೂ ಮಾತನಾಡಿಯೇ ಒಂದು ಅಂಡರ್ ಸ್ಟ್ಯಾಂಡಿಗೆ ಬಂದು ಅಜ್ಜಿಬಾಳ ಹೆಗಡೆಯವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದರಿಂದ ನಾನಯ್ಯನವರು ವಿತ್ ಡ್ರಾ ಮಾಡಿಕೊಂಡಿದ್ದಾರೆಯೇ ಹೊರತು ಮತ್ತೆ ಬೇರೆ ಏನೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಹಕಾರಿಗಳವೇ ಒಂದು ಪಕ್ಷ ಬಿಡಿ.

ಶ್ರೀ ಎಚ್. ಡಿ. ದೇವೇಗೌಡ(ಲೋಕೋಪಯೋಗಿ ಇಲಾಖೆ ಮಂತ್ರಿಗಳು).—ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿ ಒಬ್ಬ ಚೀಫ್ ಇಂಜಿನಿಯರ್‌ರವರ ಬಗ್ಗೆ ವಿಜಿಲೆನ್ಸ್ ಕಮಿಷನ್‌ರವರಿಗೆ ಫೈಲನ್ನು ಕೊಡಲಿಲ್ಲವೆಂದು ಆಪಾದನೆ ಮಾಡಿದ್ದರು. ನಾನು ಈಗಾಗಲೇ ಅದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಹತ್ತಿರ ಸಮಾಲೋಚನೆ ಮಾಡಿದ್ದೇನೆ. ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ಬೆಳಿಗ್ಗೆ ಸಭೆಗೆ ಒದಗಿಸುತ್ತೇನೆ. ಆ ಫೈಲ್ ಸಿಕ್ಕಿಲ್ಲ, ಲಾ ಡಿಪಾರ್ಟ್‌ಮೆಂಟ್‌ಗೆ ರೆಫರ್ ಮಾಡಿದ್ದಾರೆಂದು ಕೇಳಿದ್ದೇನೆ. ನಾಳೆ ಆ ಫೈಲನ್ನು ತರಿಸಿ ಸಭೆಯ ಮುಂದಿಡುತ್ತೇನೆಂಬ ಆಶ್ವಾಸನೆ ನೀಡುತ್ತಿದ್ದೇನೆ.

+ ಶ್ರೀ ವಿ. ಬಿ. ಶೆಟ್ಟಿ(ಬ್ರಹ್ಮಾವರ).—ಅಧ್ಯಕ್ಷರೇ ನಾವು ಹೊಸ ಶಾಸಕರು ಬಹಳ ವಿಶ್ವಾಸವನ್ನಿಟ್ಟುಕೊಂಡು ಈ ಶಾಸನ ಸಭೆಗೆ ಬಂದಿದ್ದೇವೆ. ಇಲ್ಲಿಯ ಕೆಲಸಕಾರ್ಯಗಳ ಬಗ್ಗೆ ನಾವು ಬಹಳ ಆಲೋಚನೆ ಮಾಡುತ್ತಿದ್ದೆವು. ಮೊದಲನೆಯದಾಗಿ 45 ವರ್ಷಗಳ ಹಿಂದಿನ ಬ್ರಿಟೀಷ್ ಪಾರ್ಲಿಮೆಂಟಿನ ಸಿಸ್ಟಂನ್ನು ಸಂಪೂರ್ಣವಾಗಿ ಓದಿದ್ದೇನೆ. ಏತಕ್ಕೆಂದರೆ ಇಲ್ಲಿ ಬಹಳಷ್ಟು ವಿಷಯಗಳು ಬರುತ್ತದೆ ಎಂದು ಆಲೋಚನೆ ಮಾಡಿದ್ದೆ. ಆದರೆ ನಾವು ಇಲ್ಲಿ ಬಂದಾಗಿನಿಂದಲೂ ನೋಡುತ್ತಿದ್ದೇವೆ, ಬರೀ ಚರ್ಚೆ ನಡೆಸುವುದರಲ್ಲಿಯೇ ಕಾಲ ವ್ಯಯವಾಗುತ್ತಿದೆ. ಅದರ ಬಗ್ಗೆ ನಾನು ಸ್ವಲ್ಪ ಹೇಳಬೇಕಾಗಿದೆ. ಹಲವಾರು ದಿವಸಗಳಿಂದ ನೋಡುತ್ತಿದ್ದೇವೆ ವಿರೋಧ ಪಕ್ಷದವರಿಗೂ ಆಳುವ ಪಕ್ಷದವರಿಗೂ ಒಂದು ಚಕಮಕಿ ಆಗುತ್ತಿರುವುದು ಬಹಳ ಶೋಚನೀಯ ವಿಷಯ. ಮೊದಲನೆಯದಾಗಿ ಹೇಳುವುದಾದರೆ, ವಿರೋಧ ಪಕ್ಷದ ನಾಯಕರು ಎಂದು ಹೇಳಿದರೆ ಬಹಳ ಗೌರವದಿಂದ ವರ್ತಿಸಬಹುದೆಂದು ನಾನು ಭಾವಿಸಿದ್ದೆ. ಆದರೆ ನಿನ್ನೆ ಈ ವಿಚಾರದಲ್ಲಿ...

Sri M. Veerappa Moily.—I am sorry. He has to withdraw this—

ಉಪಾಧ್ಯಕ್ಷರು.—ಏನು ಹೇಳಿದ್ದು ಅವರು...ಡಿಮ್ಯಾಂಡ್ ಮೇಲೆ ಮಾತನಾಡಿ.

ಶ್ರೀ ವಿ. ಬಿ. ಶೆಟ್ಟರು.—ತಪ್ಪು ದಾರಿಯಲ್ಲಿ ಹೋಗಬಾರದೆಂದು ಹೇಳುತ್ತಿದ್ದೇನೆ ಅಷ್ಟೆ. ಅದೇ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಶ್ರೀ ಶೆಟ್ಟಿಯವರಿಗೆ ನಾನು ಮಂತ್ರಿಯಾಗುವವರೆಗೂ ಬಹಳ ಗೌರವಸ್ಥನಾಗಿದ್ದೆ. ನಾನು ವಿರೋಧ ಪಕ್ಷದ ನಾಯಕನಾದ ಮೇಲೆ ಇವರು ಸದಸ್ಯರಾಗಿ ಇಲ್ಲಿಗೆ ಬಂದ ಮೇಲೆ ನನ್ನಲ್ಲಿದ್ದ ಗೌರವವೆಲ್ಲಾ ಹೊರಟು ಹೋಯಿತೇ ? ಸುಮ್ಮನೇ ಏತಕ್ಕೆ ಮಾತನಾಡುತ್ತೀರಿ ?

5 pm. ಯಾವ ವಿಚಾರದಲ್ಲೇ ಆಗಲಿ ವೈಯಕ್ತಿಕವಾಗಿ ಟೀಕೆ ಮಾಡಲು ಈ ಸದನವನ್ನು ಉಪಯೋಗ ಮಾಡುವುದಿದ್ದರೆ ಹೊಸ ಸದಸ್ಯರಿಗೆ ಯೋಗ್ಯವಾದುದಲ್ಲ.

ಶ್ರೀ ವಿ. ಬಿ. ಶೆಟ್ಟಿ.—ತಮ್ಮಂಥ ಅನುಭವ ಇದ್ದವರು ಮೇಲ್ಪಂಕ್ತಿ ಹಾಕಿಕೊಡಬೇಕು.

ಉಪಾಧ್ಯಕ್ಷರು.—ಮಧ್ಯೆ ಪ್ರವೇಶಿಸಿ ಮಾತನಾಡುವುದು ಬೇಡ; ವಿಷಯದ ಬಗ್ಗೆ ಮಾತನಾಡಿ.

ಶ್ರೀ ವಿ. ಬಿ. ಶೆಟ್ಟಿ.—ಸಾಯಿಲ್ ಮತ್ತು ವಾಟರ್ ಕನ್‌ಸರ್ವೇಷನ್ ವಿಷಯದಲ್ಲಿ ಹೇಳಬೇಕೆಂದಿದ್ದೇನೆ. ನಮ್ಮ ಕರಾವಳಿ ಪ್ರದೇಶದಲ್ಲಿ ಭೂಸಾರ ಮತ್ತು ಜಲಸಂರಕ್ಷಣಾ ವಿಷಯದಲ್ಲಿ ಈವರೆಗೆ ಏನೇನೂ ಕೆಲಸ ಮಾಡಿಲ್ಲವೆಂದು ಹೇಳುತ್ತೇನೆ. ಆ ಕೆಲಸ ಮಾಡಿದರೆ ಅದರಿಂದ ತುಂಬ ಪ್ರಯೋಜನ ಉಂಟು. ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಗಮನ ಕೊಟ್ಟರೆ ಅದರಿಂದ ಲಕ್ಷಗಟ್ಟಲೆ ಎಕರೆ ಭೂಮಿಯನ್ನು ಸಾಗು ಮಾಡುವುದಕ್ಕೆ ಸಾಧ್ಯತೆ ಇದೆ. ನಮ್ಮ ಕಡೆ 4-5 ಮೈಲಿಗೆ ಒಂದೊಂದು ಉಪ್ಪು ನೀರಿನ ಹೊಳೆ ಉಂಟು. ಅವುಗಳ ಉಪಯೋಗವನ್ನು ಪಡೆಯಬಹುದು. ಹಿಂದೆ ನೀರಾವರಿ ಯೋಜನೆಗಳನ್ನು ಕಾಣಿಸಲಿಲ್ಲ; ಈಗಲಾದರೂ ಕಾಣಿಸಬಹುದಾಗಿತ್ತು. ಇನ್ನು ಮುಂದಾದರೂ ಈ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ಇನ್ನು ಶಿಕ್ಷಣದ ವಿಚಾರವಾಗಿ ಹೇಳುವುದಾದರೆ, ಇತ್ತೀಚಿಗೆ ನಮಗೆ ಗೊತ್ತಿರುವ ಹಾಗೆ ಅನೇಕ ವಿಚಾರಗಳಲ್ಲಿ ಬಹಳ ತಪ್ಪು ಮಾಡಿದ್ದಾರೆ. ಕಳೆದ 3 ವರ್ಷದ ಹಿಂದೆ 14 ಮೊದಲನೇ ದರ್ಜೆ ಕಾಲೇಜುಗಳನ್ನು ಸ್ಥಾಪಿಸಿ

ದಾಗ 3 ವರ್ಷದ ನಂತರ ಗ್ರಾಂಟ್ ಕೊಡುವುದು ಎಂದು ಮಾಡಿದರು. ಆಮೇಲೆ 7–8 ತಿಂಗಳ ನಂತರ 5 ವರ್ಷ ಎಂದು ಮಾಡಿದ್ದಾರೆ. ಪ್ರತಿ ವರ್ಷ ಒಂದು ಕಾಲೇಜಿಗೆ ಒಂದು ಲಕ್ಷದ 30 ಸಾವಿರ ರೂಪಾಯಿಗಳ ವರೆಗೆ ನಷ್ಟ ಉಂಟಾಗುತ್ತಿದೆ. ಅದನ್ನು ಯಾವ ರೀತಿ ತುಂಬುತ್ತಾರೆಂದು ಗೊತ್ತಿಲ್ಲ. 5 ವರ್ಷದ ಮೇಲೆ ಗ್ರಾಂಟ್ ಕೊಡುವುದು ಎಂದು ಇದ್ದರೆ ಕಾಲೇಜನ್ನು ಪ್ರಾರಂಭ ಮಾಡುತ್ತಿರಲಿಲ್ಲ ಇದನ್ನು ತಾವು ಅಗತ್ಯ ವಾಗಿ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ —3 ವರ್ಷವೆಂದು ಹಿಂದೆ ಇತ್ತು. ಅದೇ ಸರ್ಕಾರ 5 ವರ್ಷ ಎಂದು ಮಾಡಿದೆ. ಕಾಲೇಜನ್ನು ಪ್ರಾರಂಭ ಮಾಡಿದ 3 ವರ್ಷಗಳಲ್ಲಿ ಗ್ರಾಂಟ್ ಕೊಡಬೇಕೆಂದು ಇತ್ತು ಮತ್ತೆ ಕಾಲೇಜುಗಳ ಸಂಖ್ಯೆ ಜಾಸ್ತಿ ಆದಮೇಲೆ ಸರ್ಕಾರಕ್ಕೆ ಹೆಚ್ಚು ಭಾರವಾಗುತ್ತದೆಂದು ಹಿಂದಿನ ಸರ್ಕಾರ ಕಾಲೇಜು ಪ್ರಾರಂಭ ವಾಗಿ 5 ವರ್ಷ ಆದಮೇಲೆ ಗ್ರಾಂಟನ್ನು ಕೇಳಬೇಕೆಂದು ಮಾಡಿದ್ದಾರೆ ನಾವು ಹೊಸದಾಗಿ ಏನೂ ಮಾಡಿಲ್ಲ.

ಶ್ರೀ ವಿ. ಬಿ. ಶೆಟ್ಟಿ.—ಕಾಲೇಜನ್ನು ಪ್ರಾರಂಭ ಮಾಡಿ 8 ತಿಂಗಳು ಆದನಂತರ 5 ವರ್ಷ ಎಂದು ಮಾಡಿದ್ದು ಮುಂಚೆಯೇ 5 ವರ್ಷ ಎಂದು ಮಾಡಿದ್ದರೆ ಕಾಲೇಜನ್ನೇ ಪ್ರಾರಂಭ ಮಾಡುತ್ತಿರಲಿಲ್ಲ, ಎರಡು ವರ್ಷಕ್ಕೆ 2 ಲಕ್ಷದ 60 ಸಾವಿರ ರೂಪಾಯಿ ನಷ್ಟವಾಗುತ್ತದೆ. ಯೂನಿವರ್ಸಿಟಿಯವರು ಕೂಡ ಪರ್ಮ ನೆಂಟ್ ಅಫಿಲಿಯೇಷನ್ ಕೊಡುವುದಿಲ್ಲ. ಪ್ರತಿ ವರ್ಷ ಮುಂದೂಡುತ್ತಲೇ ಬರುತ್ತಾರೆ. ಇದರಿಂದ ಕರ್ನಾ ಟಕ ರಾಜ್ಯಕ್ಕೆ ಯು. ಜಿ, ಸಿ. ವತಿಯಿಂದ ಬರತಕ್ಕ ಲಕ್ಷಗಟ್ಟಲೆ ಗ್ರಾಂಟನ್ನು ತಡೆಹಿಡಿದಂತಾಗುತ್ತದೆ. ಅದ ರಲ್ಲಿ ಏನೂ ದೋಷ ಇಲ್ಲದೆ, ಸರ್ಕಾರದ ನಿಯಮಗಳನ್ನು ಅನುಸರಿಕೊಂಡು ಇದ್ದರೆ ಏತಕ್ಕೆ ಪರ್ಮನೆಂಟ್ ಅಫಿಲಿಯೇಷನ್ ಕೊಡಬಾರದೆಂದು ಕೇಳುತ್ತೇನೆ. ಇನ್ನು ಯುವಜನ ಸೇವಾ ಇಲಾಖೆಯ ಬಗ್ಗೆ ಹೇಳುವು ದಾದರೆ, ಮೊನ್ನೆತಾನೇ ಯುವಜನ ಸೇವಾ ಮಂತ್ರಿಗಳು ಹೇಳಿದರು, ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗ ಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ ಎಂದು. ಉಡುಪಿ ತಾಲ್ಲೂಕು ಸುಮಾರು 15-16 ಮೊದಲನೇ ದರ್ಜೆ ಕಾಲೇಜು ಇರುವ ಸಣ್ಣ ತಾಲ್ಲೂಕು, ಅಲ್ಲಿ ನಾವು 70 ಸಾವಿರ ರೂಪಾಯಿಗಳನ್ನು ಜನರಿಂದ ಸಂಗ್ರಹಿಸಿ ಕ್ರೀಡಾಂಗಣವನ್ನು ಮಾಡಿದ್ದೇವೆ. ಆದರೆ ಸರ್ಕಾರದವರನ್ನು ಸಹಾಯ ಕೇಳಿದಾಗ ಇಲ್ಲವೆಂದು ಹೇಳುವು ದನ್ನು ನೋಡಿದರೆ ವಿಷಾದವಾಗುತ್ತದೆ. ರಾಜ್ಯ ಸರ್ಕಾರದಿಂದ ನಮಗೆ ಒಂದು ನಯಾ ಪೈಸೆ ಸಿಕ್ಕಿಲ್ಲ. ಜನರ ಹಿತಕ್ಕಾಗಿ ಮಾಡುವ ಕೆಲಸದ ವಿಚಾರದಲ್ಲಿ ಅಷ್ಟು ಅಸಡ್ಡೆ ಮನೋಭಾವನೆ ತೋರಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಇನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಹಾಗೂ ಕಾಲೇಜುಗಳ ವಿಷಯವನ್ನು ಸರ್ಕಾರ ಗಮನಕ್ಕೆ ತಗೆದುಕೊಳ್ಳುತ್ತದೆ. ಆದರೆ 3 ವರ್ಷದಿಂದ 6 ವರ್ಷದವರೆಗಿನ ಮಕ್ಕಳ ಬಗ್ಗೆ ಯೋಗ್ಯ ರೀತಿಯ ಗಮನವಿಡುತ್ತಿಲ್ಲ. ಆ ವಯಸ್ಸಿನಲ್ಲಿ ಮಕ್ಕಳು ಕಲಿಯುವ ವಿಷಯವನ್ನು 25ನೇ ವಯಸ್ಸಿನಲ್ಲಿ ಕಲಿಯುವುದು ಕಷ್ಟ. ಆದ್ದರಿಂದ ಬಾಲವಾಡಿ, ಪ್ರೈಮರಿ ಅಥವಾ ನರ್ಸರಿ ಶಾಲೆಗಳನ್ನು ಅಗತ್ಯವಾದ ಎಲ್ಲ ಕಡೆಗಳಲ್ಲೂ ಇಂಟ್ರಡ್ಯೂಸ್ ಮಾಡಬೇಕು. ಅದನ್ನು ಮಾಡಿದರೆ ಅದರ ಪ್ರಯೋಜನ 20-30 ವರ್ಷ ಗಳ ನಂತರ ಆಗುತ್ತದೆಂದು ಹೇಳುತ್ತೇನೆ. ನಮ್ಮ ಸರ್ಕಾರ 5 ವರ್ಷದ ಒಂದು ಯೋಜನೆ ಇಟ್ಟರೆ ಅದನ್ನು ಹಂತಹಂತವಾಗಿ ಮಾಡುವುದಿಲ್ಲ. 5ನೇ ವರ್ಷದಲ್ಲಿ ಮಾಡುವುದಕ್ಕೆ ಹೋಗುತ್ತಾರೆ; ಅಷ್ಟರಲ್ಲಿ ಚುನಾವಣೆ ಬರುತ್ತದೆ. ಕೊನೆಗೆ ಓಟಿಗೋಸ್ಕರ ಹರಿಬಿರಿಯಲ್ಲಿ ಏನೋ ಒಂದು ಮಾಡುವ ಸಂಭವ ಉಂಟು ಆದ್ದರಿಂದ. ಹಂತಹಂತವಾಗಿ ಕೆಲಸ ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕೆಂದು ಕೇಳಿಕೊಳ್ಳು ತ್ತೇನೆ. ಹಿಂದಿನ ಸರ್ಕಾರ ಯಾವ ರೀತಿ ಮಾಡುತ್ತಿತ್ತೋ ಇದೇ ರೀತಿ ಇವತ್ತಿನ ಸರ್ಕಾರವೂ ಮಾಡು ತ್ತಿದೆ ಎಂದು ಕಾಣುತ್ತದೆ. ಇನ್ನು ಮೇಲಾದರೂ ಅದಕ್ಕೆ ಅವಕಾಶ ಕೊಡದೆ 5 ವರ್ಷದ ಒಂದು ಕಾರ್ಯ ಕ್ರಮವನ್ನು ಇಟ್ಟುಕೊಂಡು ಹಂತ ಹಂತವಾಗಿ ಮಾಡಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಇನ್ನು ಮಿಸ ಲೇನಿಯಸ್ ಗ್ರಾಂಟ್ ಬಗ್ಗೆ ಹೇಳುವುದಾದರೆ, ನಾವು ಮುನ್ಸೀಫ್ ಕೋರ್ಟಿಗಾಗಲಿ ಅಥವಾ ತಾಲ್ಲೂಕು ಕಛೇರಿಗಾಗಲಿ ಹೋಗಿ ಯಾವುದಾದರೂ ಒಂದು ನಕಲು ಪ್ರತಿ ಕೇಳಿದರೆ ತಿಂಗಳುಗಟ್ಟಲೆ ತಿರುಗಿಸುತ್ತಾರೆ. ಅಲ್ಲಿ ಒಂದು ಜೆರೆಕ್ಸ್ ಮೆಷಿನ್ ಇಟ್ಟರೆ ಒಂದೇ ದಿವಸದಲ್ಲಿ ಕೇಳಿದಷ್ಟು ಪ್ರತಿಗಳನ್ನು ಕೊಡುವ ಸಾಧ್ಯತೆ ಇದೆ. ಇದರಿಂದ ಸರ್ಕಾರಕ್ಕೂ ಲಾಭ ಉಂಟು; ಮತ್ತು ಜನರಿಗೂ ಉತ್ತಮ. ಇನ್ನು ನ್ಯಾಚುರಲ್ ಕೆಲಾಮಿಟಿ ಬಗ್ಗೆ ಹೇಳುವುದಾದರೆ ಇದಕ್ಕೆ ಯಾವಾಗಲೂ ಪರಿಹಾರ ಇರಲೇಬೇಕಾಗುತ್ತದೆ. ಇದನ್ನು ಯಾವ ರೀತಿ ತಡೆಗಟ್ಟಲು ಸಾಧ್ಯ ಎಂಬುದನ್ನು ಆಲೋಚನೆ ಮಾಡಬೇಕು. ಚೈನಾದಲ್ಲಿ ಹಲವಾರು ಊರುಗಳು ನೆರೆ ಹಾವಳಿಯಿಂದ ಕೊಚ್ಚಿಕೊಂಡು ಹೋಗುತ್ತಿದ್ದುದನ್ನು ಈಗ ತಡೆಗಟ್ಟಿದ್ದಾರೆ. ಅಲ್ಲಿ ಯಾವ ರೀತಿ ತಡೆಗಟ್ಟಿ ದ್ದಾರೆಂಬುದನ್ನು ನೋಡಬೇಕು. ಯಾವ ರೀತಿ ತಡೆಗಟ್ಟಬಹುದೆಂಬುದನ್ನು ಆಲೋಚಿಸಿದರೆ ಪ್ರಯೋಜನ ವಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಸಣ್ಣ ನೀರಾವರಿ ಯೋಜನೆ ಗಳಲ್ಲಿ 2250 ರೂಪಾಯಿಗಳನ್ನು ಕೊಟ್ಟಿದ್ದಾರೆ; ಆದರೆ ಅದು ಸಾಕಾಗುವುದಿಲ್ಲ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಷ್ಟವಾಗಿದೆ. ಆದ್ದರಿಂದ, ಕೊನೇಪಕ್ಷ ಎಕರೆಗೆ 5 ಸಾವಿರ ರೂಪಾಯಿಗಳನ್ನಾದರೂ ಕೊಡಬೇಕೆಂದು ಹೇಳುತ್ತೇನೆ. ನೆರೆಹಾವಳಿಯಿಂದ ಅನೇಕರ ಜಮೀನು ಹಾಳಾಗಿದೆ. ಅನೇಕ ಕೆರೆಗಳು ಮುಚ್ಚಿ ಹೋಗಿವೆ. ಒಂದು ಕೆರೆಯನ್ನು ದುರಸ್ತಿ ಮಾಡಿದರೆ 50 ರಿಂದ 70 ಎಕರೆವರೆಗೆ ಜಮೀನು ಸಾಗು ಮಾಡು ವುದಕ್ಕೆ ಸಾಧ್ಯತೆ ಇದೆ, ಅಷ್ಟೇ ಅಲ್ಲದೆ ಅದರಿಂದ ಹಲವಾರು ಪ್ರಯೋಜನಗಳು ಉಂಟು. ಆದ್ದರಿಂದ ಈ

ಬಗ್ಗೆ ಹೆಚ್ಚು ನಿಗಾ ಇಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳನ್ನು ಬಹಳಷ್ಟು ಮಟ್ಟಿಗೆ ನೆಗ್ಲೆಕ್ಟ್ ಮಾಡಿದ್ದಾರೆಂದು ಹೇಳುತ್ತೇನೆ. ಏಕೆಂದರೆ ಒಂದು ಪಶುವೈದ್ಯ ಶಾಲೆಗೂ ಮತ್ತೊಂದಕ್ಕೂ 10 ಮೈಲಿ ಅಂತರ ಇರುವುದು ಉಂಟು. ಅದನ್ನು ಇಂಪ್ರೂವ್ ಮಾಡುವ ಉದ್ದೇಶ ಸರ್ಕಾರಕ್ಕೆ ಇರುವಂತೆ ಕಂಡುಬರುವುದಿಲ್ಲ. 10 ಮೈಲಿ ದೂರ ಎತ್ತು ಎಮ್ಮೆಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಕ್ಕೆ ಎಷ್ಟು ಕಷ್ಟವಾಗುತ್ತದೆಂದು ಆಲೋಚಿಸಿ. ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟು ಹೇಳಿ, ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಇನ್ನು ಮೇಲಾದರೂ ಹೊಸಬರಿಗೆ ಸ್ವಲ್ಪ ಹೆಚ್ಚು ಕಾಲಾವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬಹುಶಃ ಅಧ್ಯಕ್ಷರಿಗೆ ಹೊಸಬರ ಮೇಲೆ ಅಷ್ಟಕಷ್ಟೇ ಎಂದು ಕಾಣುತ್ತದೆ.

ಉಪಾಧ್ಯಕ್ಷರು.—ಆ ರೀತಿ ಏನೂ ಇಲ್ಲ; ವೇಳೆ ಅಭಾವ ಅಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ, ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ನಡೆದ ಚರ್ಚೆಯಲ್ಲಿ 5 ಜನ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಮೊಟ್ಟಮೊದಲನೆಯದಾಗಿ ಒಂದು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈ ಎಲ್ಲ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಹಿಂದಿನ ಸರ್ಕಾರದವರು ಮಾಡಿದ್ದು. ಒಂದೆರಡು ವಿಷಯ ಬಿಟ್ಟರೆ ಮಿಕ್ಕೆಲ್ಲ ಅವರ ಸಮಯದಲ್ಲಿ ಆದಂಥ ಕಮಿಟ್‌ಮೆಂಟ್ಸ್. ಅದಕ್ಕೆ ಹಣ ಒದಗಿಸತಕ್ಕ ವ್ಯವಸ್ಥೆಯನ್ನು ಇಲ್ಲಿ ಮಾಡಲಾಗಿದೆ. ಇದು ಮಾನ್ಯ ವೀರಪ್ಪ ಮೊಯಿಲಿಯವರಿಗೆ ಕೊಡತಕ್ಕ ಉತ್ತರ. ತರ್ಕದ ವಿಷಯವಲ್ಲ. Monies were spent though there was no provision. This was the descriptive. Most of the demands that are now mentioned which are coming up for grant of supplementary demands pertains to monies spent by the previous Government. ಇದನ್ನು ಮಾನ್ಯ ಸ್ನೇಹಿತರಾದ ಮೊಯಿಲಿಯವರು ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂಬ ಭರವಸೆ ನನಗಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾಡಿರುವ ಟೀಕೆಗಳಿಗೆ ಆಮೇಲೆ ಉತ್ತರ ಕೊಡುತ್ತೇನೆ. ಸ್ನೇಹಿತರಾದ ಎಂ. ಎಸ್. ಕೃಷ್ಣನ್ ಅವರು, ಬಂಗಾರಪ್ಪನವರು, ಎಚ್. ಗಂಗಾಧರನ್ ಅವರು ಮತ್ತು ಈಗತಾನೆ ಮಾತನಾಡಿದ ಇನ್ನಿತರ ಸ್ನೇಹಿತರುಗಳು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮಾನ್ಯ ಬಂಗಾರಪ್ಪನವರು ಗುಡಿ ಕೈಗಾರಿಕೆಗಳನ್ನು ಸಹಕಾರಿ ಸ್ವಾಮ್ಯದಲ್ಲಿ ಮಾಡಿ ಎಂದು ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ಸಲಹೆ. "ಕಡ್ಡಾಯ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಕ್ಕೆ ತೀವ್ರ ಗಮನ ಕೊಡಬೇಕು, ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ ಮಾಡಬೇಕು, ಬೆಲೆ ಏರಿಕೆ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಈ ಬಗ್ಗೆ ರಚಿಸಿದ್ದ ಉಪಸಮಿತಿ ಏನು ವರದಿ ಸಲ್ಲಿಸಿದೆಯೋ ಗೊತ್ತಿಲ್ಲ, ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಬೇಕು" ಎಂದು ಹೇಳಿದ್ದಾರೆ. ಬೆಲೆ ಏರಿಸುವುದರಲ್ಲಿ ನಿರತರಾಗಿರುವ ವ್ಯಾಪಾರಸ್ಥರ ಮೇಲೆ ತೀವ್ರವಾದ ಕ್ರಮ ಜರುಗಿಸಿ ಉಗ್ರ ಶಿಕ್ಷೆ ವಿಧಿಸಬೇಕೆಂದು ಹೇಳಿದ್ದಾರೆ. ಅವರ ಮಾತನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಸಲಹೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬ್ಲಾಕ್ ಮಾರ್ಕೆಟೀರ್ಸ್ ಮೇಲೆ ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ ? ನಾವು ಮಾಡಿದ ಸಲಹೆ ಇರಲಿ...

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೀರಪ್ಪ ಮೊಯಿಲಿ ಅವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಉತ್ತರ ಕೊಡುವಾಗ ಅದರಲ್ಲಿ ನಿಮಗೂ ಉತ್ತರ ಸಿಗುತ್ತದೆಂದು ನಾನು ನಂಬುತ್ತೇನೆ. ಚುನಾವಣೆ ಮಾಡಬೇಕೆಂದು ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ತಾವು ಸ್ವಾಗತ ಮಾಡಿದ್ದೀರಿ. ನಾವು ಏನು ಚುನಾವಣೆ ಮಾಡಬೇಕೆಂದು ಹೇಳಿದ್ದೇವೋ ಅದನ್ನು ಮಾಡೇ ಮಾಡುತ್ತೇವೆ ಎಂದು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇವೆ.

ಶ್ರೀ ಎಂ. ಮಹದೇವ್.—ಯಾವಾಗ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನೇ ಈ ಸಭೆಯಲ್ಲಿ ಎರಡು ಮೂರು ಸಲ ಆ ಬಗ್ಗೆ ಉತ್ತರ ಕೊಟ್ಟಿದ್ದೇನೆ. ನಾನು ಯಾವ ಸಮಯದಲ್ಲಿ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದೇನೋ ಆ ಸಮಯಕ್ಕೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದು ಎಚ್. ಎಂ. ಚನ್ನಬಸಪ್ಪನವರ ಉತ್ತರ.

ಶ್ರೀ ಎ. ಲಕ್ಷ್ಮೀಸಾಗರ.—ಚಿಂತನಾ ನಿಧಿ ಬಗ್ಗೆ ಮಾತನಾಡಿದ ಬಂಗಾರಪ್ಪನವರು ಅದು ಹಳೇ ಶ್ಯಾನುಭೋಗರ ಸಂಖ್ಯೆಯಾಗಬಾರದು ಎಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಟೀಕೆ ಮಾಡಿದಾಗ ಈ ಸಭೆಯ ನಾಯಕರು ಉತ್ತರ ಕೊಟ್ಟಿದ್ದಾರೆ ಇವರ ಬಗ್ಗೆ ಮತ್ತೆ ಆಮೇಲೆ ಪ್ರಸ್ತಾಪ ಮಾಡುತ್ತೇನೆ. ಪ್ರಕೃತಿ ವಿಕೋಪಕ್ಕೊಳಗಾದ ಅತಿವೃಷ್ಟಿ ಅನಾವೃಷ್ಟಿ ಪ್ರದೇಶಗಳಲ್ಲಿ ಖಾಯಂ ಪರಿಹಾರ ಮಾಡತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಈಗಿರತಕ್ಕ ಡಿ. ಪಿ. ಎ. ಪಿ.

\+ ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಯಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಕಾರ್ಯಕ್ರಮದಿಂದ ಪರಿಣಾಮಕಾರಿಯಾದ ಖಾಯಂ ಪರಿಹಾರ ಸಿಕ್ಕಿಲ್ಲ ಎಂದೂ ಹೇಳಿದ್ದಾರೆ. ಅದು ನಿಜ ಎಂದು ಅನ್ನಿಸುತ್ತದೆ. ಹಣಕಾಸಿನ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಇದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 31ನೇ ತಾರೀಖು ಇದೇ ವಿಚಾರ ಮತ್ತೆ ಪ್ರಸ್ತಾಪಕ್ಕೆ ಬರಲಿದೆ. ಇದೇ ರೀತಿ ನೆರೆಹಾವಳಿ ಪ್ರದೇಶಗಳಲ್ಲಿ ಕೂಡ ಜನರ ತೊಂದರೆಯನ್ನು ಗಮನಿಸಿ ಅಲ್ಲಿ ಕೂಡ ಕಾಮಗಾರಿ ಕೆಲಸಗಳಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ. ನಾನು ಕುಮುಟಾ ಮತ್ತು ನೆರೆ ಹಾವಳಿ ಪ್ರದೇಶಗಳಿಗೆ, ಗಂಜಿ ಕೇಂದ್ರಗಳಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ತಿಳಿದುಕೊಂಡು ಬಂದಿದ್ದೇನೆ. ಇದೇ ರೀತಿ ಬಂಡವಾಳಶಾಹಿ ಜನರ ಹೊಟ್ಟೆಯನ್ನು ಸಣ್ಣದಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದ್ದಾರೆ.

ಡಾ॥ಕರ್ಕಿ.—ಉತ್ತರ ಕರ್ನಾಟಕದಲ್ಲಿ ಮಳೆ ಬರುವುದಕ್ಕೆ ಇನ್ನು ಒಂದು ತಿಂಗಳು ಮಾತ್ರ ಉಳಿದಿದೆ. ಸರ್ಕಾರ ಈ ಬಗ್ಗೆ ಎಚ್ಚರ ವಹಿಸದಿದ್ದರೆ ಜನ ಹಾದಿಯಲ್ಲಿ ಬೀಳುತ್ತಾರೆ. ಸರ್ಕಾರಕ್ಕೆ ಈ ಬಗ್ಗೆ ಮೂರು ನಾಲ್ಕು ಸಲ ಮನವಿ ಅರ್ಪಿಸಿದ್ದರೂ ಉತ್ತರ ಇಲ್ಲ. 20 ಲಕ್ಷ ರೂಪಾಯಿಗಳನ್ನು ಹಂಚಬೇಕೆಂದು ಒಂದು ತಿಂಗಳ ಹಿಂದೆ ಸರ್ಕಾರ ಮಂಜೂರು ಮಾಡಿದ್ದರೂ ಕೂಡ ಆ ಹಣ ಇನ್ನೂ ತನಕ ಯಾರು ನೊಂದಿದ್ದಾರೋ ಅವರಿಗೆ ಸಿಕ್ಕಿಲ್ಲ. ಸರ್ಕಾರ ಬರೀ ಬಾಯಿ ಮಾತಿನಲ್ಲಿ ಹೇಳಿದರೆ ಪ್ರಯೋಜನವಿಲ್ಲ, ಕೃತಿಯಲ್ಲಿ ಮಾಡಿ ತೋರಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಂಗಾರಪ್ಪನವರು ಮಾತನಾಡುತ್ತಿದ್ದಾಗ ಶರಾವತಿಯಲ್ಲಿ ಪ್ರವಾಹ ಬಂದಾಗ ಒಂದೇ ಸಾರಿ ಗೇಟ್ ಎತ್ತಿದ್ದರಿಂದ ಬಹಳ ನಷ್ಟವಾಯಿತು ಎಂದು ಹೇಳಿದರು. ನಿಧಾನವಾಗಿ ಸ್ವಲ್ಪ ಸ್ವಲ್ಪ ಎತ್ತಿದ್ದರೆ ತೊಂದರೆಯಾಗುತ್ತಿರಲಿಲ್ಲ. ಆದರೆ ಅದು ಪ್ರಕೃತಿ ವಿಕೋಪಕ್ಕೆ ಒಳಗಾದ ತೊಂದರೆಯೋ ಅಥವಾ ಮನುಷ್ಯನ ಅವಿವೇಕಕ್ಕೆ ಒಳಗಾದ ತೊಂದರೆಯೋ ಎಂಬುದನ್ನು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿರುವ ವಿಚಾರ. ಪ್ರಕೃತಿ ವಿಕೋಪವನ್ನು ಹೇಗಾದರೂ ಮಾಡಿ ತಡೆಯಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಹೇಗೋ ಗೊತ್ತಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಪ್ರಕೃತಿ ವಿಕೋಪ, ಮನುಷ್ಯನ ಅವಿವೇಕ ಎರಡೂ ಕಾರಣದಿಂದ ಆಗಿರುವುದು.

ಶ್ರೀ ಎಸ್. ಬಂಗಾರಪ್ಪ.—ಪ್ರಕೃತಿ ವಿಕೋಪ ಜಾಸ್ತಿಯಾಗಿ ಗೇಟನ್ನು ಎತ್ತಿಸಿತು. ನೀರು ಹೋಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಚರ್ಚೆಯಲ್ಲಿ ಪ್ರಕಟವಾದ ವಿಷಯಗಳು ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡಬೇಕಾದ ವಿವರಣಾತ್ಮಕವಾದ ವಿಷಯಗಳು ಎಂದು ಹೇಳುವುದಕ್ಕೆ ಬಯಸುತ್ತೇನೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ ಸರ್ಕಾರದ ನೀತಿ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕೇ ವಿನಹ ವಿವರವಾಗಿ ಇಲಾಖಾವಾರು ಚರ್ಚೆ ಮಾಡಿದರೆ ಅದಕ್ಕೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಒಂದು ವೇಳೆ ಕೊಟ್ಟರೂ ಉತ್ತರ ಸಮಂಜಸವಾಗುವುದಿಲ್ಲ, ಅಪೂರ್ಣವಾಗಿರುತ್ತದೆ ಎಂಬುದಾಗಿ ಬಹಳ ವಿನಯದಿಂದ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಪ್ರೈವೇಟ್ ಸೆಕ್ಟಾರ್ ಇನ್‌ವೆಸ್ಟ್‌ಮೆಂಟ್ ಬಗ್ಗೆ ಸರ್ಕಾರ ಪುನರ್ ವಿಮರ್ಶೆ ಮಾಡಬೇಕು, ಬಂಡವಾಳಶಾಹಿ ಜೊತೆ ನೀವು ಏತಕ್ಕೆ ಸೇರಿಕೊಳ್ಳುತ್ತೀರಿ, ಈ ಬಗ್ಗೆ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಬೇಕು ಎಂದು ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್ ಅವರು ಹೇಳಿದ್ದಾರೆ. ಅದು ವಿಚಾರ ಮಾಡತಕ್ಕ ವಿಚಾರ.

ಶ್ರೀ ಎಂ. ಎಸ್. ಕೃಷ್ಣನ್.—ವಿಚಾರ ಮಾಡತಕ್ಕ ವಿಚಾರ ಎಂದರೆ ಅನುಮಾನಕ್ಕೆ ಆಸ್ಪದವಾಗುತ್ತದೆ. ಬಂಡವಾಳಶಾಹಿ ಜೊತೆ ಸೇರಿಕೊಳ್ಳುವುದು ಬೇಡ ಎಂದು ಹೇಳುವುದಾದರೆ ಅದನ್ನು ಸ್ಪಷ್ಟವಾಗಿ ಹೇಳಿ. ವಿಚಾರ ಮಾಡತಕ್ಕ ವಿಚಾರ ಎಂದು ಹೇಳಿದರೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಲ್ಲ. ಪಬ್ಲಿಕ್ ಎಂಟರ್‌ಪ್ರೈಸಸ್ ಎಲ್ಲಾ ನಷ್ಟ ಅನುಭವಿಸುತ್ತಿವೆ, ಖಾಯಂ ರೋಗಗ್ರಸ್ತವಾಗಿವೆ ಎಂದು ಹೇಳಿದರು. ಅದರಲ್ಲಿ ಸಂಶಯವಿಲ್ಲ. ಪೂರ್ಣವಾಗಿ ಒಪ್ಪಿಕೊಳ್ಳತಕ್ಕ ವಿಚಾರ. ಮಾನ್ಯ ಕೃಷ್ಣನ್ ಅವರು ಸಭೆಯ ಮುಂದೆ ಏನು ವಾದವನ್ನಿಟ್ಟಿದ್ದಾರೆ ಅದೇ ವಾದವನ್ನು ನಾನು ಬಹಳ ಸಕ್ರಿಯವಾಗಿ ರಿಲಿಜಿಯಸ್ಸಾಗಿ 5 ವರ್ಷ ಮಾಡಿದ್ದೇನೆ. ಅದರಿಂದ ಬಂದ ಒಂದು ಪರಿಣಾಮವಾದದ್ದೆಂದರೆ ಮಾನ್ಯ ಮೊಯಿಲಿಯವರಿಂದ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸೆಟಪ್ ಮಾಡುತ್ತೇವೆ, to moniter the working of these public enterprises ಎಂಬ ಸಮಾಧಾನಾತ್ಮಕ ಉತ್ತರ ಮಾತ್ರ. ಇದು ಬ್ಯೂರೋಕ್ರೆಟಿಕ್ ಪಬ್ಲಿಕ್ ಎಂಟರ್‌ಪ್ರೈಸಸ್ ಎಂದು ಮಾನ್ಯ ಕೃಷ್ಣನ್ ಅವರು ಹೇಳಿದ್ದಾರೆ. ಈ ಟೀಕೆಯನ್ನು ಅದು ಸ್ಥಾಪನೆಯಾದಾಗಲೇ ನಾನು ಮಾಡಿದ್ದೇನೆ. ಆದರೆ ಇದನ್ನು ಯಾವರೀತಿ ಉತ್ತಮಪಡಿಸಬೇಕು ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪರಿಶೀಲನೆ ಮಾಡುತ್ತದೆ ಎಂಬ ವಿಚಾರವನ್ನು ಹೇಳುತ್ತೇನೆ. ಇನ್ನು ಕೆಲವು ಕೈಗಾರಿಕೆಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೈಗಾರಿಕಾ ಖಾತೆಯ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಸಂಬಂಧಪಟ್ಟ ಮಂತ್ರಿಗಳು

ಸರಿಯಾದ ಉತ್ತರವನ್ನು ಆ ಬಗ್ಗೆ ಕೊಡುತ್ತಾರೆ. ಇನ್ನು ಜೈಲುಗಳ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನ ಮನೆಯೂ ಜೈಲಿನ ಪಕ್ಕದಲ್ಲೇ ಇದೆ. ಆದುದರಿಂದ ಜೈಲಿನಲ್ಲಿನ ಸ್ಥಿತಿಗತಿಗಳನ್ನು ನಾನೂ ಕಂಡಿದ್ದೇನೆ. ಅಲ್ಲಿನ ನೌಕರರ ಸಂಬಳವನ್ನು ಜಾಸ್ತಿ ಮಾಡುವ ಬಗ್ಗೆ ಹೇಳಿದ್ದಾರೆ. ಇದು ಗಂಭೀರವಾದ ವಿಚಾರ. ಲೈಫರ್ಸ್ ಏನಿದ್ದಾರೆ ಅವರಿಗೆ ಸುಪ್ರೀಂ ಕೋರ್ಟಿನ ನಿರ್ಣಯಗಳನ್ನು ಗಮನದಲ್ಲಿ ಇಟ್ಟುಕೊಂಡು ಕರ್ನಾಟಕ ರಾಜ್ಯ ಪ್ರಿಸನ್ಸ್ ರೂಲ್ಸ್‌ನ್ನು ಗಮನದಲ್ಲಿ ಇಟ್ಟುಕೊಂಡು ಅದರ ಮಿತಿಯೊಳಗೆ ಬಂದರೆ ಅವರನ್ನು ಬಿಡುಗಡೆ ಮಾಡುವುದು ಒಳ್ಳೆಯದು. 2-3 ವರ್ಷ ಜೈಲಿನಲ್ಲಿದ್ದವರು ಹೊರಗೆ ಬಂದರೆ ಅವರಿಗೆ ಪುನರ್‌ಜನ್ಮ ಬಂದಹಾಗೆ ಆಗುತ್ತದೆ. ಇನ್ನು ಮಾನ್ಯ ಮೊಯ್ಲಿಯವರು ಹಾಗೂ ಇತರ ಸದಸ್ಯರು ಹೌಸಿಂಗ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. 1982-83ರಲ್ಲಿ 1 ಲಕ್ಷದ 2 ಸಾವಿರ ಮನೆಗಳನ್ನು ಕಟ್ಟುತ್ತೇವೆನ್ನುವ ಯೋಜನೆಯನ್ನು ಕಳೆದ ಸರ್ಕಾರ ಹಾಕಿದ್ದು ಅದು ಮಾನ್ಯ ಮೊಯಿಲಿಯವರಿಗೂ ಗೊತ್ತಿದೆ. ಆದರ ಈ ಬಗ್ಗೆ ಸಾಕಷ್ಟು ಹಣವನ್ನು ಸರ್ಕಾರ ಒದಗಿಸಿಲಿಲ್ಲವೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೂ ಈ ಸಲ ಕಡಿಮೆ ಹಣವನ್ನು ಇಟ್ಟಿದ್ದಾರೆಂದು ಹೇಳಿದ್ದಾರೆ. ಈ ವಿಷಯ ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಗೆ ಬಂದಾಗ ಈ ಬಗ್ಗೆ ಉತ್ತರವನ್ನು ಕೊಡಲಾಗಿದೆ. ಕೆಲವು ಮನೆಗಳನ್ನು ಸ್ವಲ್ಪ ಸ್ವಲ್ಪ ಕಟ್ಟಿದ್ದು ಮುಂದಿನ ಮಳೆಗಾಲದಲ್ಲಿ ಮಳೆ ಬಂದಾಗ ಇವು ಪೂರ್ತಿ ಬಿದ್ದುಹೋಗಿ ಈಗ ಖರ್ಚು ಮಾಡಿದ ಹಣವೂ ವ್ಯಯವಾಗುತ್ತದೆಂದು ಹೇಳಿದ್ದಾರೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಾನ್ಯ ಎಂ. ಎಸ್. ಕೃಷ್ಣನ್‌ರವರು ಟ್ಯಾಂಕ್‌ಬಂಡ್ ರಸ್ತೆಯ ಸೇತುವೆ ಕೆಲಸ ನಿಧಾನವಾಗುತ್ತಿದೆಯೆಂದಿದ್ದಾರೆ. ನಾವು ವಿರೋಧ ಪಕ್ಷದಲ್ಲಿ ಇದ್ದಾಗ ಸಹಾ ನಾವು ಕಾರ್ಪೊರೇಷನ್ ಅಧಿಕಾರಿಗಳ ಜೊತೆ ವಿಚಾರ ಮಾಡಿದ್ದೆವು. ಈಗಿನ ಸಮಾಧಾನ ಏನೆಂದರೆ ಅಲ್ಲಿ ರಸ್ತೆ ಆಗಿದ್ದು ಇನ್ನೂ ಪೂರ್ತಿ ಕೆಲಸ ಆಗಬೇಕಾಗಿದೆ. ಹಾಗೂ ಈ ಬಗ್ಗೆ ಮಾನ್ಯ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಗಮನದಲ್ಲಿ ಇಟ್ಟುಕೊಂಡಿದ್ದಾರೆ. ಆ ಬಗ್ಗೆ ಅವರು ವಿಚಾರ ಮಾಡುತ್ತಾರೆಂದು ನಾನು ಹೇಳುತ್ತೇನೆ. ಇನ್ನು ಬೆಂಗಳೂರು ಕಾರ್ಪೊರೇಷನ್ ಮಿತಿಗೆ ಏನು 32 ಹಳ್ಳಿಗಳನ್ನು ಮತ್ತು 29 ಹ್ಯಾಮ್ಲೆಟ್‌ಗಳನ್ನು ಸೇರಿಸಿಕೊಳ್ಳಲಾಯಿತು. ಅವುಗಳಿಗೆ ಸಾಮಾನ್ಯ ಪೌರ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಕಾರ್ಪೊರೇಷನ್ನಿನ ಕೈಯಲ್ಲಿ ಆಗಿಲ್ಲವೆಂದು ಹೇಳಿದ್ದಾರೆ. ಇವುಗಳಿಗೆ ನೀರು, ಒಳಚರಂಡಿ ಹಾಗೂ ಲೈಟು ಸೌಲಭ್ಯ ಒದಗಿಸಿಕೊಡುವ ಬಗ್ಗೆ ಪದೇ ಪದೇ ಕೇಳಲಾಗುತ್ತಿದೆ. ಈ ಬಗ್ಗೆ ನಗರಾಭಿವೃದ್ಧಿ ಮಂತ್ರಿಗಳು ಗಮನ ಹರಿಸುತ್ತಾರೆನ್ನುವ ಬಗ್ಗೆ ನನಗೆ ನಂಬಿಕೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟೇ ದಿವಸದಲ್ಲಿ ಮಾಡುತ್ತೇವೆಂದು ಹೇಳಿ ಪುಣ್ಯ ಕಟ್ಟಿಕೊಳ್ಳಿ ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟೀಸ್‌ನ ಸ್ಟ್ಯಾಂಪ್ ಫೀಸ್ ಬಗ್ಗೆ ಯೋಚನ ಮಾಡಬೇಕೆಂದೂ ಇದರ ಬಗ್ಗೆ ಏನಾದರೂ ಮಾಡಬೇಕೆಂದೂ ಕಾಗದವನ್ನೂ ಸಹ ಬರೆದಿದ್ದಾರೆ. ಪತ್ರಿಕಾ ಪ್ರಕಟಣೆಗಳನ್ನೂ ಸಹ ಕೊಟ್ಟಿದ್ದಾರೆ. ಈ ಬಗ್ಗೆ ಪರಿಹಾರ ಮಾಡುವುದಕ್ಕೆ ಏನಾದರೂ ಸಹಾಯ ಮಾಡಿ ಎಂದು ಹೇಳುತ್ತಿದ್ದಾರೆ. ಕಾನೂನು ರೀತ್ಯ ಆಗುವುದಿದ್ದರೆ ಆ ಬಗ್ಗೆ ಮಾಡುವುದಕ್ಕೆ ನಾನು ಅನುವು ಮಾಡಿಕೊಡುತ್ತೇನೆಂದು ಹೇಳುತ್ತೇನೆ. ಇನ್ನು ಇ. ಎಸ್. ಐ. ಬಗ್ಗೆ ಮಾತನಾಡುತ್ತಾ ಡ್ರಗ್ಸ್‌ನ ರ್‍ಯಾಕೆಟ್ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಆರೋಗ್ಯ ಮಂತ್ರಿಗಳು ಈಗ ಇಲ್ಲಿ ಇಲ್ಲ. ಆದ್ದರಿಂದಲೇ ನಾನು ಆಗಲೇ ಪೀಠಿಕಾ ರೂಪದಲ್ಲಿ ಹೇಳಿದ್ದೇನೆ. ವಿವರಣಾ ಪೂರ್ವಕವಾಗಿ ಚರ್ಚೆಯಲ್ಲಿ ವಿಷಯಗಳನ್ನು ಬಿಡಿಸಿಬಿಡಿಸಿ ಹೇಳುವುದರಿಂದ ಈ ಘಟ್ಟದಲ್ಲಿ ಇವುಗಳಲ್ಲಿ ಸರಿಯಾದ ಉತ್ತರಗಳನ್ನು ಹೇಳುವುದು ಕಷ್ಟವಾಗುತ್ತದೆಂದು ನಾನು ಆಗಲೇ ಹೇಳಿದೆ. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಯಾವಾಗಲೂ ವಿರೋಧ ಪಕ್ಷದಲ್ಲಿ ಇರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹಿಂದೆ 6 ತಿಂಗಳು ವಿರೋಧ ಪಕ್ಷದಲ್ಲಿ ಇದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೇವಲ 6 ತಿಂಗಳು ಇದ್ದರು. ಅದು ಪ್ರೊಬೆಷನರಿ ಪೀರಿಯಡ್ಡೂ ಆಗಲಿಲ್ಲ. ಸ್ವಲ್ಪ ಕಾಲ ಮಾತ್ರ ಅಲ್ಲಿದ್ದರು. ಅವರು ರಿಬೇಟ್ ಹಣವನ್ನು ಇಡಬೇಕೆಂದು ಹೇಳಿದ್ದಾರೆ. I don't want to take you through the colums. Monies have been provided to be expended during the current financial year. ನಂತರ ಮಾನ್ಯ ಸದಸ್ಯರು ಪಿ.ಯು.ಸಿ. ಸ್ಕ್ಯಾಂಡಲ್ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ಕಂಪ್ಲೀಟ್ ಎನ್‌ಕ್ವೈರಿ ರಿಪೋರ್ಟ್ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ. ಇನ್ನೊಂದು ವಿಷಯವನ್ನು ನಾನು ಸದನದ ಮುಂದಿಡಬಯಸುತ್ತೇನೆ. ಯಾವ ತನಿಖಾ ವರದಿ ಬಂದರೂ ಅದು ಸರ್ಕಾರದ ಕೈಗೆ ಬಂದಮೇಲೆ ಆ ವರದಿಯ ಆಧಾರದ ಮೇಲೆ ಕಾನೂನಿನ ಪರಿಮಿತಿಯೊಳಗೆ ಏನೇನು ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಅನ್ಯಾಯದ ವಿರುದ್ಧ ಸಮಾಜ ಘಾತುಕರ ವಿರುದ್ಧ

ಪೂರ್ವ ಅಧ್ಯಯನ ಮಾಡಿ ವರದಿ ಆಧಾರಿತ ಕ್ರಮವನ್ನು ಕಾನೂನಿನ ಚೌಕಟ್ಟಿನಲ್ಲಿ ಮಾಡುತ್ತೇವೆನ್ನುವ ಭರವಸೆಯನ್ನು ವಿರೋಧ ಪಕ್ಷದ ನಾಯಕರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಡಾ॥ವಿ. ಎಸ್. ಆಚಾರ್.—ತಾವು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ನನಗೆ ಭರವಸೆ ಇದೆ. ಆದರೆ ರೀಟೋಟಲಿಂಗ್‌ನಲ್ಲಿ ಫ್ರಾಡ್ ಮಾಡಿದವರನ್ನು ಹಾಗೇ ಬಿಟ್ಟರೆ ಅವರು ಇನ್ನೊಂದೆರಡು ವರ್ಷಗಳಲ್ಲಿ ಎಂ. ಬಿ ಬಿ. ಎಸ್. ಅಥವಾ ಎಂಜಿನಿಯರಿಂಗ್ ಕೋರ್ಸ್‌ಗೆ ಹೋಗುತ್ತಾರೆ. ಆ ನಂತರ ಈ ಬಗ್ಗೆ ನ್ಯಾಯಾಲಯಕ್ಕೆ ಹೋದರೂ ಮಾನವೀಯತೆಯ ದೃಷ್ಟಿಯಿಂದ ಇವರನ್ನು ಬಿಟ್ಟುಬಿಡುತ್ತಾರೆ. ಆದ್ದರಿಂದ ಆದಷ್ಟು ಬೇಗ ಈ ಬಗ್ಗೆ ನಿರ್ಣಯ ತೆಗೆದುಕೊಂಡರೆ ಯಾರು ಫ್ರಾಡ್ ಮಾಡಿದ್ದಾರೆ ಅವರು ಮತ್ತೆ ಆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಬರುತ್ತದೆ. ಇದನ್ನು ಹೀಗೇ ಬಿಟ್ಟರೆ ಅನ್ಯಾಯವಾಗುತ್ತದೆ. ಈ ಬಗ್ಗೆ ಸರ್ಕಾರ ಸೂಕ್ತ ಗಮನ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು. ಮಾನ್ಯ ಉಪಾಧ್ಯಕ್ಷರೇ, ನಾಗರೀಕ ಸರಬರಾಜು ವಸ್ತುಗಳ ಬೆಲೆ ಜಾಸ್ತಿಯಾಗುತ್ತಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವ್ಯಾಪಾರ ಮಾಡತಕ್ಕ ಜನರು ಬೆಲೆ ಏರಿಕೆಯಲ್ಲಿ ಭಾಗಿಗಳಾಗಿರುವುದಕ್ಕೆ ಸಾಧ್ಯವಿದೆ, ಈ ಬಗ್ಗೆ ಸರ್ಕಾರ ಇಲ್ಲಿಯವರೆಗೆ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಮೊಯ್ಲಿಯವರಿಗೆ ನೆನಪಿರಬಹುದು. ಈ ವಿಷಯದ ಬಗ್ಗೆ ಒಂದು ಪ್ರಶ್ನೆ ಸದನದಲ್ಲಿ ಬಂದಿತ್ತು. ಪ್ರಶ್ನೋತ್ತರ ಸಮಯದಲ್ಲಿ ಸರ್ಕಾರ ಈ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳ ಬಗ್ಗೆ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಉತ್ತರ ಹೇಳಿದ್ದಾರೆ ಧಾನ್ಯ ಕೇರಳಕ್ಕೆ ಹೋಗುತ್ತಿದೆ. ಅದನ್ನು ತಡೆಯುತ್ತಿಲ್ಲವೆಂದು ಮಾನ್ಯ ಮೊಯ್ಲಿಯವರು ಹೇಳಿದರು. ಅದನ್ನು ತಡೆಯುವುದಕ್ಕೆ ಕಟ್ಟುನಿಟ್ಟಿನ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಬಾರ್ಡರ್ಸ್ ಎಲ್ಲಾ ಸೀಲಾಗಿದೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ಇನ್ನು ಮಾನ್ಯ ಬಂಗಾರಪ್ಪನವರು ಬೆಲೆ ಏರಿಕೆ ಬಗ್ಗೆ ಸರ್ಕಾರ ನಿಗಾ ಇಟ್ಟಿಲ್ಲವೆಂದು ಹೇಳಿದರು. ಬೆಲೆ ಏರಿಕೆ ಬಗ್ಗೆ ಸರ್ಕಾರ 24 ಗಂಟೆಗಳೂ ನಿಗಾ ಇಟ್ಟಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕೆ ಸಕ್ರಮವಾದ ಕಾರ್ಯಕ್ರಮಗಳನ್ನು ಈ ಸರ್ಕಾರ ತೆಗೆದುಕೊಳ್ಳುತ್ತದೆನ್ನುವ ಮಾತನ್ನು ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. (5-30 ಪಿ. ಎಂ.) ಮಾನ್ಯ ವೀರಪ್ಪಮೊಯ್ಲಿಯವರು ತಪ್ಪು ತಿಳಿದುಕೊಳ್ಳದೇ ಹೋದರೆ ಒಂದು ಮಾತನ್ನು ನೆನಪಿಗೆ ತರುವುದಕ್ಕೆ ಇಷ್ಟಪಡುತ್ತೇನೆ. 1981ನೇ ಇಸವಿಯಲ್ಲಿ ತಾವು ಅಧಿಕಾರಕ್ಕೆ ಬಂದಾಗ ಯಾರು ಯಾರು ಕಾಳಸಂತೆಕೋರರಿದ್ದಾರೆ ಅವರ ಪಟ್ಟಿ ಮಾಡಿ, ಅವರ ಫೋಟೋಗಳನ್ನು ತೆಗೆಸಿ ಸಿನಿಮಾ ತೆಗೆಯುತ್ತೇವೆಂದು ಹೇಳಿದ್ದು ತಮಗೆ ಜ್ಞಾಪಕ ಇರಬಹುದೆಂದು ಭಾವಿಸುತ್ತೇನೆ. ನಂತರ ನಾನು ಗುಂಡೂರಾಯರನ್ನು ಕೇಳಿದೆ, ಕಾನೂನು ಚೌಕಟ್ಟಿನಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ಖಾಸಗೀಯಾಗಿ ಉತ್ತರ ಕೊಟ್ಟರು ; ಅವರು ಆ ರೀತಿ ಹೇಳಬಾರದಾಗಿತ್ತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಷ್ಟು ಜನ ಮಿಲ್ಲರ್ಸ್ ಮತ್ತು ಮರ್ಚೆಂಟ್ಸ್ ಮನೆಗಳನ್ನು ರೈಡ್ ಮಾಡಿದ್ದೀರಿ ? ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ? ಅಕ್ಕಿ ದಾಸ್ತಾನುಗಾರರನ್ನು ಸೀಜ್ ಮಾಡಿದ್ದೀರಾ ? ಇದರ ಜೊತೆಗೆ ಹಿಂದಿನ ಅಂಕಿಸಂಖ್ಯೆಗಳನ್ನು ಹೇಳಿ. ಕಾನೂನು ಪರಿಮಿತಿಯಲ್ಲಿ ಅವಕಾಶ ಇದ್ದರೆ ಫೋಟೋಗಳನ್ನು ತೆಗೆಸುತ್ತಿದ್ದೆವು.

ಶ್ರೀ ಎ. ಲಕ್ಷ್ಮೀಸಾಗರ್ —ಇದರ ಬಗ್ಗೆ ವಿವರಣೆ ಕೇಳಿದ್ದಾರೆ. ತತ್‌ಕ್ಷಣ ನನ್ನ ಹತ್ತಿರ ಅಂಕಿಸಂಖ್ಯೆಗಳು ಇಲ್ಲ, ಒದಗಿಸುತ್ತೇನೆ. ಬಡಾಯಿ ಕೊಚ್ಚಿಕೊಂಡು ಏನೂ ಕೆಲಸ ಆಗದರೀತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಪಟ್ಟಭದ್ರಹಿತಾಸಕ್ತಿಗಳ ನೆರವು ನಮಗೆ ಬೇಕಾಗಿಲ್ಲ ಅವರ ಸಹಾಯ ಬೇಕಿಲ್ಲ. ಯಾರು ಬೆಲೆ ನಿಯಂತ್ರಣಕ್ಕೆ ವಿರುದ್ಧವಾಗಿ ನಡೆಯುತ್ತಾರೆ ಬೆಲೆ ನಿಯಂತ್ರಣಕ್ಕೆ ಅಡಿಯಾಳಾಗಿ ವರ್ತಿಸದೆ, ಜನರಿಗೆ ವಿರುದ್ಧವಾದ ರೀತಿಯಲ್ಲಿ ನಡೆಯುತ್ತಾರೆ ಅವರ ಮೂತಿ ಮುಖ ನೋಡದೆ, ಜಾತೀ ಗೀತಿ ನೋಡದೇ, ಸಂಬಂಧ ನೋಡದೇ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ವೀರಪ್ಪ ಮೊಯ್ಲಿಯವರಿಗೆ ಬಹಳ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

